**Revised Pay Scales to Class IV Officials working in Travellers, Bungalows and Musafirkhanas.**

*Q.*—96. Sri J. NARAYANAPPA (Mulbagal).—

Will the Government be pleased to state:—

(*a*) whether they would extend the benefit of the revised pay scales to Class IV officials working in Travellers' Bungalows and Musafirkhanas which are now under the control of Taluk Boards in Kolar District;

(*b*) if not, the reasons therefor?

*A.*—Sri RAMAKRISHNA HEGDE (Minister for Co-operation and Development).—

(*a*) and (*b*) According to Section 119 (2) of the Village Panchayats and Local Boards Act, Taluk Boards are competent to employ such staff as may be necessary for the discharge of their duties. As the intention of Government is to help the Taluk Boards to be autonomous bodies, it is proposed to prescribe the maximum of the pay scales for the various categories of posts under the Taluk Boards and leave the matter of adoption of pay scales to the discretion of the Boards subject to the maximum to be prescribed by Government.

---

**Petition re: the Mysore Sales-tax (Second Amendment) Bill, 1962.**

SECRETARY.—Under Rule 130 of the Rules of Procedure and Conduct of Business in the Legislative Assembly, I beg to report that a petition addressed to the Mysore Legislative Assembly has been received from the Mysore Chamber of Commerce duly signed by its President in relation to the Mysore Sales Tax (Second Amendment) Bill, 1962.

Mr. SPEAKER.—The Bill will not come up for today and it is likely that it may not come up tomorrow also. Therefore I will pass on the petition to the Petitions Committee with a request to report by tomorrow afternoon.

**Discussion on the situation caused by the heavy rains and floods resulting in heavy damages in several Taluks of the State.**

Mr. SPEAKER.—Sri Sivappa will speak first, briefly. Before I call upon him, may I know how many members would like to participate in the debate. The Hon'ble Members must remember that not more than 2½ hours can possibly be taken on this motion. That of course is the maximum time permissible but that does not mean we should necessarily take that much of time. Let us be reasonable and finish it earlier. It is not as if everybody can go on participating. How many members would like to speak?

(*Several Members rose.*)

Mr. SPEAKER.—I see Sri Krishna—he is one of the signatories—Sri Bhaskara Shetty, Sri Made Gowda, Sri B. J. Linge Gowda. I see five persons. What time would the Hon'ble Minister require to reply?

Sri M. V. KRISHNAPPA (Minister for Revenue).—Half-an-hour.

Mr. SPEAKER.—If the Minister takes half-an-hour, hardly two hours remain and there are eight speakers. I should fix a time-limit for speeches.

Sri S. SIVAPPA.—I want half-an-hour.

Mr. SPEAKER.—If the Hon'ble Member takes half-an-hour where is the time left over for others? Is he speak on behalf of everybody?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಕೆಲವು ಕಡೆ ಜನರಿಗೆ ನೆರೆ ಹಾವಳಿಯಿಂದ ತೊಂದರೆಯಾಗಿದ್ದರೆ, ಇನ್ನು ಕೆಲವು ಕಡೆ ಜನಗಳಿಗೆ ಮಳೆಯಿಲ್ಲದೆ ಕ್ಷಾಮದಿಂದ ತೊಂದರೆಯುಂಟಾಗಿದೆ. ಈಗಲೇ ಈ ಎರಡು ವಿಚಾರಗಳಿಗೂ ಮಾತನಾಡಲು ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು. ಒಟ್ಟಿನಲ್ಲಿ ಕ್ಷಾಮಕ್ಕೆ ತುತ್ತಾಗಿರುವ ಜನರೇ ಜಾಸ್ತಿ ಇದ್ದಾರೆ.

Mr. SPEAKER.—Sri Revennasiddappa is an experienced parliamentarian. Let him not ask me to

(MR. SPEAKER)

commit such a mistake. The discussion is regarding the situation caused by the heavy rains and not lack of rains and floods. How can he mix up issues? The Hon'ble Member is embarassing me needlessly. Sri Sivappa may begin now. Fifteen minutes is the time fixed for everybody.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ಅನೇಕ ಜಿಲ್ಲೆಗಳಲ್ಲಿ ಕಳೆದ ಒಂದೆರಡು ವಾರಗಳಿಂದ ಮಳೆಯು ಅತಿವೃಷ್ಟಿಯಿಂದ ಪ್ರವಾಹಗಳ ಮೂಲಕ ನಮ್ಮ ದೇಶದಲ್ಲಾಗಿರತಕ್ಕ ನಷ್ಟ ಮತ್ತು ಆ ಪ್ರವಾಹ ಪೀಡಿತ ಪ್ರದೇಶದಲ್ಲಿರತಕ್ಕವರಿಗೆ ಉಂಟಾಗಿರತಕ್ಕ ಧಾರಣ ಪರಿಸ್ಥಿತಿ ಹೇಗೆ ಇದೆಯೆಂಬುದನ್ನು ತಿಳಿಸಲು ನಾನೀಗ ಈ ವಿಷಯಗಳನ್ನು ಈ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಮಾನ್ಯ ಸಭಾಪತಿಗಳೇ, ನಮ್ಮ ದೇಶದಲ್ಲಿ ಈ ಪ್ರವಾಹದ ಹಾವಳಿ ಕೇವಲ ಒಂದೆರಡು ವರ್ಷಗಳಿಂದ ಮಾತ್ರ ಬಂದಿರತಕ್ಕದ್ದಲ್ಲ. ದೊಡ್ಡ ದುಷ್ಪರಿಣಾಮವನ್ನು ತರತಕ್ಕಂಥ ಈ ಪ್ರವಾಹದ ಹಾವಳಿಯು ನಮ್ಮ ದೇಶದಲ್ಲಿ ಒಂದು ಖಾಯಂ ಆದ ಹಾವಳಿಯಾಗಿದೆ. ಈ ವಿಚಾರವನ್ನು ಮಾತನಾಡುವ ಕಾಲದಲ್ಲಿ ನಾನು ಬಹಳ ವ್ಯಸನಕರವಾಗೇ ಹೇಳಬೇಕಾಗಿದೆ. ನಮ್ಮ ಸರ್ಕಾರಕ್ಕೆ ಈ ವಿಷಯದಲ್ಲಿ ಒಂದು ಖಾಯಂ ಆದ ಪರಿಹಾರ ಮಾರ್ಗವನ್ನು ಕಂಡು ಹಿಡಿಯುವುದಕ್ಕೆ ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಅದಕ್ಕೆ ತಕ್ಕಹಾಗೆ ಪ್ರವಾಹದ ಹಾವಳಿಯಾದರೋ ವರ್ಷ ವರ್ಷಕ್ಕೂ ಉಲ್ಬಣ ಸ್ಥಿತಿಗೇರುತ್ತಿದೆ. ಆದರೆ ಇದು ಕಡಮೆಯಾಗುತ್ತಿದೆಯೆಂದು ಹೇಳುವುದಕ್ಕೆ ಅಂಥ ಚಿನ್ಹೆಗಳ್ಯಾವೂ ಕಾಣುತ್ತಿಲ್ಲ. ಆದರೆ ಮಳೆಬೀಳುವುದನ್ನೇ ತಡೆಗಟ್ಟಬೇಕೆಂದು ನಾನು ಹೇಳುತ್ತಿಲ್ಲ ಹಾಗೆ ಮಾಡುವುದಕ್ಕೂ ಕೂಡ ಸಾಧ್ಯವಿಲ್ಲ. ಮೇಲಾಗಿ ಮಳೆಯಿಂದಲೇ ದೇಶಕ್ಕೆ ಹೆಚ್ಚಿನ ಸೌಲಭ್ಯಗಳಾಗಬೇಕಾಗಿದೆ. ಹೋದ ವರ್ಷವೂ ಕೂಡ ನಮ್ಮ ದೇಶದಲ್ಲಿ ಸಹಸ್ರಾರು ಸ್ಥಳಗಳಲ್ಲಿ ಜನರು ಈ ಪ್ರವಾಹದ ಕಷ್ಟಕ್ಕೀಡಾಗಿದ್ದಾರೆ; ಸಹಸ್ರಾರು ಎಕರೆ ಜಮೀನು ಕೊಚ್ಚಿಹೋಗಿದೆ. ಇದರಿಂದ ಅನೇಕ ತೆರನಾದ ಕಷ್ಟನಷ್ಟಗಳುಂಟಾಗಿರುತ್ತೆ. ಹಿಂದೆ ಈ ಪ್ರವಾಹದ ಹಾವಳಿ ಅನಿರೀಕ್ಷಿತವಾಗಿ ಬಂದ ಕಾರಣದಿಂದ ಅನೇಕ ಭಾಗಗಳಲ್ಲಿ ಅಂದರೆ ಬೆಂಗಳೂರು-ತುಮಕೂರು, ಹಾಸನ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನೇಕ ಕೆರೆಗಳು ಒಡೆದುಹೋದವು, ಅನೇಕ ಅಣೆಕಟ್ಟುಗಳು ಹೊಡೆದುಹೋದವು, ಹೊಳೆಗಳ ಅಕ್ಕಪಕ್ಕದಲ್ಲಿದ್ದ ವ್ಯವಸಾಯದ ಜಮೀನುಗಳೆಲ್ಲ ಕೊಚ್ಚಿಹೋದವು; ಅನೇಕ ಕಡೆ ಜನಗಳೂ-ದನಕರುಗಳೂ ಕೊಚ್ಚಿಹೋದವು. ಹೀಗೆಲ್ಲಾ ಅನೇಕ ತೊಂದರೆಗಳಾಗಿರುವುದನ್ನು ನಾವೆಲ್ಲರೂ ಕಣ್ಣಾರೆ ನೋಡಿದ್ದೇವೆ. ಆದಕಾರಣ ನಾನೀಗ ಈ ಸಭೆಯ ಮುಂದೆ ಹೇಳತಕ್ಕದ್ದು ಮತ್ತು ಸರ್ಕಾರದವರ ಗಮನಕ್ಕೆ ತರತಕ್ಕ ವಿಚಾರಗಳಪ್ಪೈಕಿ ಮೊದಲನೆಯದು ಏನೆಂದರೆ:- ಈವರೆಗೂ ನಮ್ಮ ದೇಶದಲ್ಲಿ ಪ್ರವಾಹದ ಹಾವಳಿಗೀಡಾಗಿ ದುಸ್ಥಿತಿಯಲ್ಲಿರತಕ್ಕ ಅನೇಕ ಸ್ಥಳಗಳಪ್ಪೈಕಿ ಕೇವಲ ಆ ರಾಮನಗರಂ ಒಂದು ಸ್ಥಳದ ವಿಚಾರ ಮಾತ್ರ ಚಿತ್ರಸೂತ್ರವಾಗಿ ದೇಶಕ್ಕೆಲ್ಲಾ ಗೊತ್ತಾಗಿದೆ. ಇಷ್ಟೇ ಗುರುತರವಾದ ಅನರ್ಥಗಳು ಇನ್ನೂ ಎಷ್ಟೋ ಕಡೆ ಆಗಿದೆ. ಆದರೂ ಆ ಬಗ್ಗೆ ಯಾವ ಪತ್ರಿಕೆಗಳಲ್ಲೂ ಆ ವಿಚಾರ ಬಂದಿಲ್ಲ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರವಾದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲೇ ಸುಮಾರು ನಾಲ್ಕು ಕೆರೆಗಳು ಒಡೆದುಹೋಗಿವೆ; ನಾಲ್ಕು ಅಣೆಕಟ್ಟುಗಳು ಒಡೆದು ಹೋಗಿವೆ; ಒಂದು ಸೇತುವೆ ಕೊಚ್ಚಿಹೋಗಿದೆ; ಹತ್ತಾರು ಎತ್ತುಗಳು ಕೊಚ್ಚಿಹೋಗಿವೆ. ಈ ಅನಾಹುತಗಳೆಲ್ಲ ಈ ತಿಂಗಳು ಒಂದನೇ ತಾರೀಖಿನಲ್ಲಿ ಜರುಗಿದ್ದರೂ ನಾಲ್ಕನೇ ತಾರೀಖಾದರೂ ಸ್ಥಳೀಯ ಅಧಿಕಾರಿಗಳಾಗಿರತಕ್ಕ ಅಮಲ್ದಾರರಿಗೆ ಈ ವಿಚಾರಗಳೇ ಗೊತ್ತಿಲ್ಲವೆಂದು ಹೇಳುತ್ತಿರುವಾಗ ಅಲ್ಲಿಯ ಆಡಳಿತ ಇನ್ನೆಷ್ಟರ ಮಟ್ಟಿಗೆ ನಡೆಯುತ್ತಿರಬೇಕೆಂಬುದನ್ನು ತಾವೆಲ್ಲರೂ ಊಹಿಸಬಹುದು. ಆದರೆ ಕಳೆದ ಒಂದನೇ ತಾರೀಖಿನ ದಿವಸ ನಾನು ಏನೋ ಕೆಲಸಕ್ಕಾಗಿ ಈ ಬೆಂಗಳೂರಿನಲ್ಲೇ ಇದ್ದೆ. ಆದರೆ ಆ ಅನಾಹುತವೆಲ್ಲ ಒಂದನೇ ತಾರೀಖಿನಲ್ಲೇ ಆಗಿದ್ದರೂ ಮೂರನೇ ತಾರೀಖಿನವರೆಗೆ ಅಲ್ಲಿ ಆ ತೊಂದರೆಗೀಡಾದವರನ್ನು ಕೇಳತಕ್ಕವರೇ ಇರಲಿಲ್ಲ. ನಾನು ಇಲ್ಲಿಂದ ಮೂರನೆ ತಾರೀಖಿನ ರಾತ್ರಿ ಚನ್ನರಾಯಪಟ್ಟಣಕ್ಕೆ ಹೋದಮೇರೆ ಅದೇರಾತ್ರಿ ನನ್ನ ಕಾರಿನಲ್ಲೇ ಜಿಲ್ಲಾಧಿಕಾರಿಗಳನ್ನೂ ಇತರ ಅಧಿಕಾರಿಗಳನ್ನೂ ಸ್ಥಳಕ್ಕೆ ಕರೆದುಕೊಂಡ ಹೋದೆನು. ಆಗ ಅಲ್ಲಿನ ಅಮಲ್ದಾರರು ಅವರಿಗೆ ಈ ವಿಚಾರವನ್ನು ಆವರ ಶೇಕ್‌ದಾರರು ತಿಳಿಸಲೇ ಇಲ್ಲ ಎಂಬುದಾಗಿ ಹೇಳಿಬಿಟ್ಟರು. ಹೀಗೆ ಈ ಘಟನೆ ನಡೆದಿರುವುದೆಲ್ಲ ಆ ಅಮಲ್ದಾರರಿದ್ದ ಸ್ಥಳಕ್ಕೆ ಕೇವಲ ಎಂಟು ಹತ್ತು ಮೈಲಿಗಳ. ದೂರದಲ್ಲಿ ಆದಾಗ್ಯೂ ಆ ಸ್ಥಳೀಯ ಅಧಿಕಾರಿಗಳು ಅವರಿಗೆ ಗೊತ್ತೇ ಇಲ್ಲ ಎಂದು ಹೇಳಿರತಕ್ಕದ್ದು ಬಹಳ ವಿಚಿತ್ರವಾಗಿದೆ. ಈ ವಿಷಯವನ್ನು ಮಾನ್ಯ ರೆವಿನ್ಯೂ ಸಚಿವರು ದಯವಿಟ್ಟು ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರೆವಿನ್ಯೂ ಮಂತ್ರಿಗಳು ಬೆಂಗಳೂರಿನಿಂದ ರಾಮನಗರಕ್ಕೆ ಅದೇ ದಿವಸವೇ ಹೋಗಿದ್ದರು. ಆದರೆ ನಮ್ಮ ತಾಲ್ಲೂಕಿನಲ್ಲಿ ಎಂಟು ಮೈಲಿ ಅಂತರದಲ್ಲಿದ್ದ ತಹಶೀಲ್‌ದಾರರಿಗೆ ನಾಲ್ಕು ದಿವಸಗಳವರೆಗೆ ಯಾವ ವರ್ತಮಾನವು ಗೊತ್ತಿರಲಿಲ್ಲ ಎಂದರೆ ನಮ್ಮ ಸರಕಾರದ ಕಾರ್ಯಕಲಾಪಗಳು ಎಷ್ಟು ತ್ವರಿತವಾಗಿ ನಡೆಯುತ್ತಿದೆ ಎಂಬುದು ಇದರ ಮೂಲಕ ಗೊತ್ತಾಗುತ್ತದೆ. ರಾಮನಗರದ ಬಗ್ಗೆ ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರು ಲಿಖಿತ ಮೂಲಕ ಟೆಲಿಗ್ರಾಂ ಮೂಲಕ ಈಗಾಗಲೇ ತಿಳಿಸಿದ್ದಾರೆ. ಎಷ್ಟು ಎಕರೆ ಭೂಮಿ ಕೊಚ್ಚಿಹೋಗಿದೆ ಎನ್ನುವುದನ್ನು ಹೇಳಿದ್ದಾರೆ. ಆದ್ದರಿಂದ ನಾನು ಸೂಕ್ಷ್ಮವಾಗಿ ಎರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ರಾಮನಗರದಲ್ಲಿ ಹೇರಳವಾಗಿ ನಷ್ಟವೊದಗಿದೆ. ರಾಮನಗರ ತಾಲ್ಲೂಕಿನಲ್ಲಿ ಫಲವತ್ತಾದ ಭೂಮಿ ಕಡಿಮೆಯಾಗಿದೆ. ಅರ್ಕಾವತಿ ನದಿಯ ಹತ್ತಿರ ಇರುವದೇ ಫಲವತ್ತಾದ ಭೂಮಿ. ಈ ಫಲವತ್ತಾದ ಭೂಮಿ ಕೊಚ್ಚಿಹೋಗಿದೆ. ಆದ್ದರಿಂದ ಅಲ್ಲಿಯ ರೈತರಿಗೆ ಸೌಲಭ್ಯ ಮತ್ತು ಪರಿಹಾರ ಒದಗಿಸಿ ಕೊಡಬೇಕು.

ಇನ್ನು ಚನ್ನರಾಯಪಟ್ಟಣ ತಾಲ್ಲೂಕಿನ ಬಗ್ಗೆ ಹೇಳುವದಾದರೆ ನಾಲ್ಕು ಕೆರೆಗಳು, ನಾಲ್ಕು ಅಣೆಕಟ್ಟುಗಳು ಒಡೆದಿವೆ. ಒಂದು ಸೇತುವೆ ಕೊಚ್ಚಿಹೋಗಿದೆ. ಇವು ನಾಲ್ಕೂ ಕೆರೆಗಳೂ ದೊಡ್ಡ ಕೆರೆಗಳಾಗಿವೆ. ಮೂರು ತಿಂಗಳುಗಳ ಹಿಂದೆ ಇವುಗಳ

ದುರಸ್ತಿಯಾಗಿತ್ತು. ಆದರೂ ಕೂಡ ಒಡೆದು ಹೋಗಿವೆ. ಈ ನಾಲ್ಕು ಅಣೆಕಟ್ಟುಗಳು ಕೂಡ ಸುಮಾರು 20-30 ಸಾವಿರ ರೂಪಾಯಿಗಳು ಖರ್ಚುಮಾಡಿ ಒಂದೆರಡು ವರ್ಷಗಳ ಹಿಂದೆ ಕಟ್ಟಿದವುಗಳಾಗಿವೆ. ಹೊಸದಾಗಿ ಕಟ್ಟಿದ್ದೂ ಕೂಡ ಕೊಚ್ಚಿಹೋಗಿದೆ. ಮೂರು ವರ್ಷಗಳ ಕೆಳಗೆ 20-30 ಸಾವಿರ ರೂಪಾಯಿ ಖರ್ಚುಮಾಡಿ ಕಟ್ಟಿಸಿದ್ದ ಸೇತುವೆ ಒಂದೇರಾತ್ರಿಯ ಮಳೆಯಿಂದ ಕೊಚ್ಚಿಹೋಗಿದೆ. ಹಳೇ ಕೆರೆಗಳೂ ಸಹ ನಾಶವಾಗಿವೆ. ಕೆರೆ ಮತ್ತು ಅಣೆಕಟ್ಟುಗಳಿಗೆ ದುಸ್ಥಿತಿಯೊದಗಿದೆ. ಸರಕಾರದವರು ಕ್ರಮವರಿತು ಪರೀಕ್ಷೆ ಮಾಡುತ್ತಾ ಇಲ್ಲ. ಮೈಸೂರು ಸಂಸ್ಥಾನದಲ್ಲಿ ಸಹಸ್ರಾರು ಕೆರೆಗಳಿದ್ದು ಇವು ರಾಜ್ಯದ ಸಂಪತ್ತಾಗಿವೆ. ಪ್ರಾಜೆಕ್ಟುಗಳನ್ನು ಕಟ್ಟಿ ನೀರನ್ನು ಒದಗಿಸುವದರಿಂದ ಎಷ್ಟರ ಮಟ್ಟಿಗೆ ಸಾಗುವಳಿಯಾಗುತ್ತದೆಯೋ ಅದಕ್ಕೂ ಹೆಚ್ಚಾಗಿ ಕೆರೆಗಳ ನೀರಿನಿಂದ ಸಾಗುವಳಿಯಾಗುತ್ತಿದೆ. ಪ್ರಾಜೆಕ್ಟಿನಿಂದ 5-6 ಲಕ್ಷ ಎಕರೆ ಭೂಮಿ ಸಾಗುವಳಿಯಾದರೆ ಕೆರೆಗಳಿಂದ ಎಂಟೂವರೆ ಲಕ್ಷ ಎಕರೆ ಭೂಮಿ ಸಾಗುವಳಿಯಾಗುತ್ತದೆ. ಕೆರೆಗಳ ವಿಚಾರವನ್ನು ಎಷ್ಟರ ಮಟ್ಟಿಗೆ ನೋಡಬೇಕೋ ಅಷ್ಟರಮಟ್ಟಿಗೆ ಸರಕಾರ ಗಮನಕೊಟ್ಟು ನೋಡುತ್ತಿಲ್ಲ. ಹಿಂದಿನ ಪಾಳೆಗಾರರ ಕಾಲದಲ್ಲಿ ಕಟ್ಟಿಸಿದ್ದ ಕೆರೆಗಳು ಇದಾಗಿವೆ. ಹೆಚ್ಚು ಆಸ್ಥೆಯಿಂದ ಈ ಕೆರೆಗಳ ಕಡೆಗೆ ಗಮನ ಕೊಡಬೇಕು. ಹೆಚ್ಚು ಹಣ ಸಹಾಯ ಒದಗಿಸಿ, ಹಿಂದಕ್ಕೆ ಇದ್ದಹಾಗೆ ಒಂದು ಸ್ಪೆಷಲ್ ಡಿವಿಜನ್ ಪ್ರತ್ಯೇಕವಾಗಿ ಮಾಡಬೇಕು. ಅಂದರೆ ಹೆಚ್ಚಿನ ಪ್ರಯೋಜನವಾಗುತ್ತದೆಂದು ನಾನು ನಂಬಿದ್ದೇನೆ.

ಇನ್ನು ಪ್ರವಾಹದ ಹಾವಳಿಯ ಬಗ್ಗೆ ಹೇಳುವದಾದರೆ ಇದನ್ನು ಶಾಸ್ತ್ರೀಯವಾಗಿ ಪರಿಶೀಲಿಸಬೇಕು. ನದಿಗಳಲ್ಲಿ ನೀರು ಹರಿದು ಸಮುದ್ರಕ್ಕೆ ಸೇರುತ್ತದೆ. ನೀರು ವ್ಯರ್ಥವಾಗಿ ಹರಿದು ಹೋಗುತ್ತದೆ. ನೀರಿನ ಉಪಯೋಗ ಏನೂ ಆಗುವುದಿಲ್ಲ. ಪ್ರವಾಹ ಬಂದು ಕೆರೆಕಟ್ಟೆ ಒಡೆದು ಹಾನಿಯಾಗುವುದು ಸರ್ವೇ ಸಾಮಾನ್ಯವಾಗಿದೆ. ಮೂರನೇ ಯೋಜನೆಯಲ್ಲಿ ಹೇಮಾವತಿ, ಹಾರಂಗಿ, ಕಂಬದಕಡ ಯೋಜನೆಗಳನ್ನು ಕಾರ್ಯಗತ ಮಾಡುವುದಾದರೆ ಮುಂದೆ ಈ ಪ್ರವಾಹದ ಹಾವಳಿಯನ್ನು ತಪ್ಪಿಸಬಹುದು. ಕಾವೇರಿ ಮತ್ತು ಹೇಮಾವತಿನದಿಗಳ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಬಹುದು.

ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಹಾರಂಗಿ ಯೋಜನೆ ಕಟ್ಟೆ ಕಟ್ಟುವದರಿಂದ ಪ್ರವಾಹದ ಹಾವಳಿ ತಪ್ಪುತ್ತದೆಂದು ಭಾವಿಸುತ್ತೀರಾ ?

ಶ್ರೀ ಎಸ್. ಶಿವಪ್ಪ.—ಕೊಡಗಿನವರಾದ ನೀವು ಅಲ್ಲಿಯ ಕಾಫಿ ತೋಟಕ್ಕೆ ಎಲ್ಲಿ ಧಕ್ಕೆ ಬರುತ್ತದೋ ಎಂದು ಈ ರೀತಿ ಉದ್ವೇಗದಿಂದ ನೀವು ಹೇಳುತ್ತಿದ್ದೀರಿ. ಆದರೆ ಈ ಯೋಜನೆಗಳು ಪೂರ್ತಿಯಾದರೆ ಪ್ರವಾಹದ ಹಾವಳಿ ಕಡಿಮೆಯಾಗುತ್ತದೆಂದುನಾನು ಹೇಳುತ್ತೇನೆ. ಕೊಡಗಿನಲ್ಲಿ ಮಳೆಯಿಂದ ಬರುವ ನೀರನ್ನು ಮಲೆನಾಡಿನಲ್ಲಿಯ ಮಳೆಯ ನೀರನ್ನು ಶೇಖರಣೆ ಮಾಡಿ, ನೀರನ್ನು ಕ್ಷಾಮ ಪ್ರದೇಶಕ್ಕೆ ಒದಗಿಸಿದರೆ ಇಲ್ಲಿಯೇ ಸ್ವರ್ಗ ನಿರ್ಮಾಣವಾಗುತ್ತದೆ. ಆದ್ದರಿಂದ ಈ ಯೋಜನೆಗೆ ಎಲ್ಲರೂ ಉದಾರವಾಗಿ ಸಹಾಯ ಮಾಡಬೇಕು. ಕಾವೇರಿ ಮತ್ತು ಹೇಮಾವತಿ ನದಿ ನೀರು ಬೈಲು ಸೀಮೆಯಲ್ಲಿ ಬಹಳ ಉಪಯೋಗವಾಗುವುದು. ಆದುದರಿಂದ ಅತಿಶೀಘ್ರವಾಗಿ ಈ ಪ್ರಾಜೆಕ್ಟನ್ನು ಕಾರ್ಯಗತ ಮಾಡಬೇಕು. 1972ನೇ ಇಸವಿಯೊಳಗಾಗಿ ನಾವು ಕಾವೇರಿ ನೀರನ್ನು ಉಪಯೋಗಿಸದೆ ಹೋದರೆ, ಒಪ್ಪಂದದ ಅವಧಿ ಮುಗಿಯುವುದರಿಂದ ಮುಂದೆ ನಮಗೆ ಒಂದು ತೊಟ್ಟು ನೀರೂ ಸಿಗುವ ಅವಕಾಶ ಉಳಿಯಲಾರದು. ದಯವಿಟ್ಟು ಈ ನೀರನ್ನು ಉಪಯೋಗಿಸುವ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತ ಮಾಡಬೇಕು ಎಂದು ಈ ಮೂಲಕ ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ, ಪ್ರವಾಹದಲ್ಲಿ ಎರಡು ಪ್ರಕಾರವಿದೆ. ಪ್ರಕೃತಿಯಿಂದ ಉಂಟಾದ ಪ್ರವಾಹ ಒಂದು, ಮನುಷ್ಯ ನಿರ್ಮಿತ ಯೋಜನೆಗಳ ಮೂಲಕ ಉಂಟಾಗುವ ಪ್ರವಾಹ ಇನ್ನೊಂದು. ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಶೇಖರಣೆ ಮಾಡಿದ ನೀರನ್ನು ಬಿಟ್ಟುಬಿಡುವಾಗ್ಗೆ ರಾಮನಗರದಬಳಿ ಮುಂಜಾಗ್ರತೆಯಿಂದ ಅಲ್ಲಿಯ ರೈತರಿಗೆ ಎಚ್ಚರಿಕೆ ಕೊಡದೇ ಹೋದದ್ದರಿಂದ, ಪ್ರವಾಹ ಬಂದು ನಷ್ಟವಾಗಿದೆ. ನೀರನ್ನು ಬಿಡುವದರಲ್ಲಿ ಸರಿಯಾಗಿ ಕಂಟ್ರೋಲ್ ಇರಲಿಲ್ಲ. ಇದೇ ರೀತಿಯಾಗಿ ಹಿಂದಕ್ಕೊಮ್ಮೆ ಕೃಷ್ಣರಾಜ ಸಾಗರದಲ್ಲಿ ನೀರನ್ನು ಬಿಟ್ಟಿದ್ದರಿಂದ ಶ್ರೀರಂಗಪಟ್ಟಣದ ಸೇತುವೆಗೆ ಅಪಾಯ ಉಂಟಾಗಿತ್ತು. ಆದ್ದರಿಂದ ಇಂಥ ಅಪಾಯ ಉಂಟಾಗುವುದನ್ನು ತಪ್ಪಿಸುವುದಕ್ಕಾಗಿ, ಜಲಾಶಯದ ಬಾಗಿಲನ್ನು ತೆರೆದು ನೀರು ಬಿಡುವುದಕ್ಕೆ ಮುಂಚೆ, ಅಲ್ಲಿಯ ರೈತರಿಗೆ ಮೊದಲು ಎಚ್ಚರಿಕೆ ಕೊಟ್ಟು ಅನಂತರ ಬಾಗಿಲ ತೆರೆದು ನೀರು ಬಿಡಬೇಕು. ಅಂದರೆ ಅಪಾಯವನ್ನು ತಪ್ಪಿಸಬಹುದು.

ಆದರೂ ಕೂಡ ಮೊನ್ನೆ ನಡೆದಂಥ ಪ್ರವಾಹದಿಂದ ಪತ್ರಿಕೆಯಲ್ಲಿ ನೋಡಿದಾಗ ಅಲ್ಲಿ ಹೊಳೆ ಇದೆ ಎಂದು ಗೊತ್ತಾಯಿತು. ಅರ್ಕಾವತಿ ಎಂಬ ಒಂದು ಹೊಳೆ ರಾಮನಗರದಬಳಿ ಹರಿಯುತ್ತದೆ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಆದರೆ ಅಲ್ಲಿ ಸಣ್ಣದಾಗಿ ಹರಿಯುತ್ತದೆ. ಅಂಥ ಸಣ್ಣ ಹೊಳೆಯಲ್ಲಿ ಮಹತ್ತರವಾದ ರೂಪದಲ್ಲಿ ಪ್ರವಾಹ ಬಂತು ಎಂದರೆ ಆ ಜಲಾಶಯದ ಬಾಗಿಲನ್ನು ಒಂದೇ ಸಾರಿ ಎತ್ತಿದ್ದರಿಂದ ಇದಕ್ಕೆ ಕಾರಣವಾಯಿತು ಎಂದು ಹೇಳಬೇಕಾಗಿದೆ. ಇಂಜನಿಯರುಗಳು ಎಷ್ಟು ಚಾಕಚಕ್ಯತೆಯನ್ನು ವಹಿಸಬಹುದಾಗಿತ್ತೋ ಅಷ್ಟು ಚಾಕ ಚಾಕ್ಯತೆಯನ್ನು ವಹಿಸಿ ಕೆಲಸಮಾಡಿಲ್ಲ. ಈ ಅನಾಹುತಕ್ಕೆ ಅವರೇ ಕಾರಣರಾಗಿದ್ದಾರೆ ಎಂದು ಬಹಳ ವಿಷಾದದಿಂದ ಈ ಸಭೆಯಲ್ಲಿ ಹೇಳಬೇಕಾಗಿದೆ. ಮತ್ತು ರಿಲೀಫ್ ಮೆಷರ್ಸ್, ಸರ್ಕಾರದವರು ಮಾಡತಕ್ಕ ಕಾರ್ಯದಲ್ಲಿ ಬಹಳ ಶೀಘ್ರವಾಗಿ ಮಾಡದಿದ್ದರೆ ಖಂಡಿತವಾಗಿಯೂ ಈ ದೇಶದಲ್ಲಿ ಪ್ರವಾಹದ ಮುಖಾಂತರ ವರ್ಷೇ ವರ್ಷೇ ಆಗತಕ್ಕ ಅನಾಹುತವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂದೆಯೂ ಕೂಡ ಪ್ರವಾಹದ ಹಾವಳಿ ವಿಚಾರದಲ್ಲಿ ಮಾತನಾಡಿ ಸುಮ್ಮನಾಗಬೇಕಾಗುತ್ತದೆಯೋ ಹೊರತು ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಬಹಳ ತೀವ್ರತೆಯಿಂದ ಈ ಪ್ರಾಜೆಕ್ಟುಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಒತ್ತಿ ಒತ್ತಿ ಹೇಳಬೇಕಾಗಿದೆ.

ಎರಡನೆಯದಾಗಿ ಮೊದಲೇ ಹೇಳಿದ ಹಾಗೆ ಈ ದೇಶದಲ್ಲಿ ಈ ಅನಾಹುತಕ್ಕೆ ಎರಡು ಕಾರಣಗಳು ಇವೆ. ಒಂದು ಮಳೆ ಮತ್ತು ಪ್ರವಾಹ. ಪ್ರಾಜೆಕ್ಟುಗಳನ್ನು ಕಟ್ಟುವುದರ ಮುಖಾಂತರ ದೇಶದಲ್ಲಿ ಸಮೃದ್ಧಿ ಮಾಡುತ್ತೇವೆ ಎಂದು ಹೇಳಿ ಕಂಟ್ರಾಕ್ಟದಾರರ ಒಂದು ದೊಡ್ಡ ವರ್ಗವೇ ನಿರ್ಮಾಣವಾಗಿದೆ. ಅವರು ಎಷ್ಟು ಅನಾಹುತ ಮಾಡಿದ್ದಾರೆ ಎಂದರೆ, ಅವರು ಏನೇನು ಪ್ರಾಜೆಕ್ಟುಗಳನ್ನು ಕಟ್ಟಿದ್ದಾರೆ

(ಶ್ರೀ ಎಸ್. ಶಿವಪ್ಪ)

ಅವೆಲ್ಲವೂ ಕೂಡ ಒಡೆದು ಹೋಗುತ್ತಾ ಇವೆ. ಸಿಮೆಂಟು ಎಂದು ಹೇಳಿ ಮಣ್ಣಿನಲ್ಲಿ ಕಟ್ಟಿ ಅದಕ್ಕೆ ಸಿಮೆಂಟ್ ವಾಷ್ ಮಾಡುತ್ತಾ ಇದ್ದಾರೆ. ಈ ರೀತಿ ಕಟ್ಟಿದ ಕಟ್ಟಡಗಳನ್ನಿಟ್ಟುಕೊಂಡು ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ದೇಶದ ಸಂಪತ್ತು ಜಾಸ್ತಿ ಮಾಡಿದ್ದೇವೆ ಎಂದರೆ ಅದು ಕನಸಾಗುತ್ತದೆ. 2-3 ವರ್ಷದ ಹಿಂದೆ ಕಟ್ಟಿದ್ದ ಅಣೆ ಕಟ್ಟು ಏಕ್‌ದಂ ಒಡೆದುಹೋಯಿತು ಎಂದರೆ ಎಷ್ಟು ಮಟ್ಟಿಗೆ ಕಟ್ಟಿದ್ದಾರೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಲಕ್ಷಾಂತರ ರೂಪಾಯಿ ಗಳನ್ನು ಖರ್ಚು ಮಾಡಿ 2-3 ವರ್ಷದ ಹಿಂದೆ ಕಟ್ಟಿದ ಅನೇಕ ಸೇತುವೆಗಳು ಒಂದೆರಡು ಮಳೆಗಳಿಗೆ ನಿಲ್ಲುವು ದಿಲ್ಲ ಎಂದರೆ ಅದು ಎಂಥಾ ಸೇತುವೆಗಳು, ಅದರ ಮೇಲ್ವಿಚಾರಣೆ ಮಾಡಿದ ಎಂಜನಿಯರುಗಳು ಯಾವ ರೀತಿ ಕೆಲಸ ಮಾಡಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಬೇಕು. ನೂರಾರು ವರ್ಷಗಳ ಹಿಂದೆ ಕಟ್ಟಿದ ಸೇತುವೆಗಳು, ಪಾಳೆಗಾರರು ಕಟ್ಟಿದ ಕೆರೆಗಳು ಇವತ್ತಿಗೂ ಕೂಡ ಭದ್ರವಾಗಿವೆ. 2-3 ವರ್ಷದ ಹಿಂದೆ ಕಟ್ಟಿದ್ದು ಒಂದೆರಡು ಮಳೆಗೆ ಒಡೆದು ಹೋಯಿತು ಎಂದರೆ ಯಾವ ರೀತಿ ದುಡ್ಡು ವ್ಯಯ ವಾಗುತ್ತಿದೆ ಎಂಬುದನ್ನು ಯೋಚನೆ ಮಾಡ ಬೇಕಾಗಿದೆ. ಕಂಟ್ರಾಕ್ಟುದಾರರು, ಇಂಜನಿಯರು ಗಳು ಒಂದಾಗಿರುವುದೇ ಇದಕ್ಕೆ ಕಾರಣ. ಮಂತ್ರಿಗಳು ಕೂಡ ಇದಕ್ಕೆ ಕಾರಣರಾಗಿದ್ದಾರೆ ಎಂದು ಹೇಳುತ್ತೇನೆ. ದೊಡ್ಡ ದೊಡ್ಡ ಕಂಟ್ರಾಕ್ಟುದಾರರುಗಳು ನಿಮ್ಮ ಪ್ರಭಾವವನ್ನು ಉಪಯೋಗಿಸಿಕೊಳ್ಳುತ್ತಾರೆ. ಇಂಜನಿ ಯರುಗಳು ಪರೀಕ್ಷೆ ಮಾಡಿ ಬಿಲ್ ಕೊಡುವುದಿಲ್ಲ ಎಂದರೆ ಆಂಟೀಕರಪ್ಷನ್ ಇಲಾಖೆ ಮುಖಾಂತರ ಅವರನ್ನು ಹಿಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ದುಡ್ಡು ಕೊಟ್ಟು ಹೆದರಿಸಿ ತಮ್ಮಂತೆ ಕೆಲಸ ಮಾಡಿಸಿ ಕೊಳ್ಳುತ್ತಾರೆ. ಈ ರೀತಿ ಅನಾಯಕವಾಗಿ ಹಣ ಹಾಳಾಗುತ್ತಿದೆ. ಇದನ್ನು ತಪ್ಪಿಸಬೇಕು, ಕೆಲವೊಂದು ಕಡೆ ಹೇಳುತ್ತಾರೆ. ಅಧಿಕಾರಿಗಳಿಗೆ, ಏನ್ರೀ ನೀವೇನೂ ಹೆದರಬೇಕಾಗಿಲ್ಲ, ನಮ್ಮ ಕೃಷ್ಣಪ್ಪನವರು ಇದ್ದಾರೆ, ನಾವು ನೋಡಿಕೊಳ್ಳುತ್ತೇವೆ ಎಂದು ನಿಮ್ಮ ಚುಟಕಾ ಪುಡಾರಿಗಳು ಹೇಳುತ್ತಾರೆ. ಅಮಲ್ದಾರರಿಗೆ ಹೆದರಿಸಿ ಬೇಕಾದ ಕೆಲಸ ಮಾಡಿಸಿಕೊಂಡಿರುವ ನಿದರ್ಶನಗಳು ಬೇಕಾದಷ್ಟು ಇವೆ. ಇಂಥಾ ದಿನಚರಿಯ ಕಾರ್ಯಕ್ರಮ ಗಳು ಏನಿವೆ ಇದನ್ನು ತಡೆಗಟ್ಟಲು ತಮ್ಮ ಅಧಿಕಾರದ ದಂಡವನ್ನು ಸರಿಯಾಗಿ ಉಪಯೋಗಿಸದಿದ್ದರೆ ದೇಶದಲ್ಲಿ ಬಹಳ ಅನಾಹುತಗಳಾಗುತ್ತವೆ ಎಂದು ಹೇಳುತ್ತೇನೆ. ಈ ಕಂಟ್ರಾಕ್ಟುದಾರರ ವಿಚಾರ ಸಣ್ಣ ಪ್ರಶ್ನೆ ಅಲ್ಲ. ಸಣ್ಣ ಪುಟ್ಟ 20 ಸಾವಿರ ರೂಪಾಯಿಗಳ ಸೇತುವೆ ಕಟ್ಟತಕ್ಕ ಪ್ರಶ್ನೆ ಅಲ್ಲ. ಇದು ಎಲ್ಲಿಯವರಿಗೆ ಹೋಗಿದೆ ಎಂದರೆ ಸಣ್ಣ ಕೆರೆಯಿಂದ ಹಿಡಿದು ಶರಾವತಿ ಪ್ರಾಜೆಕ್ಟುವರೆಗೂ ಹೋಗಿದೆ. 100 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದರೆ ಅದರಿಂದ ದೇಶಕ್ಕೆ ಉಪಯೋಗವಾಗಿರುವುದು ಶೇಕಡ 50 ಭಾಗ ಕೂಡ ಇಲ್ಲ ಎಂದು ಹೇಳಿ ನಾನು ಚಾಲೆಂಜ್ ಮಾಡುತ್ತೇನೆ. ಇದು ಶತಸ್ಸಿದ್ಧವಾದ ಮಾತು. ಶೇಕಡ 50 ರಷ್ಟು ಪ್ರತಿಫಲದೊರಕಿದರೆ ನಮ್ಮ ಪುಣ್ಯ ಎಂದು ಭಾವನೆ ಮಾಡಿ ಕೊಂಡಿದ್ದೇನೆ. ಬಹಳ ರೀತಿ ಯಲ್ಲಿ ಅನಾಯಕವಾಗುತ್ತಾ ಇದೆ. ಕಂಟ್ರಾಕ್ಟು ದಾರರ ಮೇಲೆ ಸರಿಯಾದ ಹತೋಟಿ ಇಲ್ಲದೇ ಇದ್ದರೆ ಖಂಡಿತವಾಗಿಯೂ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ದೇಶಕ್ಕೆ ಪ್ರತಿಫಲ ದೊರಕುವುದಿಲ್ಲ ಎಂದು ಈ ಸಂದರ್ಭದಲ್ಲಿ ದೃಢವಾಗಿ ಹೇಳಬೇಕಾಗಿದೆ. ಇದನ್ನು ಸರ್ಕಾರದವರು ತೀವ್ರ ವಾಗಿ ಪರ್ಯಾಲೋಚನೆ ಮಾಡಬೇಕು. ಕೆಲವು ಕಡೆ ನೋಡಿದ್ದೇನೆ. ಮುಖ್ಯ ಮಂತ್ರಿಗಳು ನಿಜಲಿಂಗಪ್ಪ ನವರನ್ನು ತರುತ್ತಾರೆ. ನಿಜಲಿಂಗಪ್ಪನವರು ನನಗೆ ಗೊತ್ತಿದ್ದಾರೆ, ಏನುಬೇಕಾದರೂ ಮಾಡಿಸೋಣ, ಬನ್ರಿ ಎಂದು ಬಹಳ ಧೀರತನದಿಂದ ಹೇಳುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮನ್ನು ಯಾರೂ ಕೇಳುವುದಿಲ್ಲವೋ?

ಶ್ರೀ ಎಸ್. ಶಿವಪ್ಪ.—ವಿರೋಧ ಪಕ್ಷದ ನಾಯಕ ರಿಂದ ಏನಾಗುತ್ತದೆ! ಕೃಷ್ಣಪ್ಪನವರಿದ್ದಾರೆ, ನಿಜಲಿಂಗಪ್ಪನವರಿದ್ದಾರೆ ಅಂತ ಹೇಳಿಕೊಂಡು ನಿಮ್ಮ ಹಿಂದುಗಡೆ ಬರುತ್ತಾರೆ. ಪಿಸಿ ಪಿಸಿ ಮಾತನಾಡುತ್ತಾರೆ. ವಿರೋಧಪಕ್ಷದವರು ಏನು ಮಾತನಾಡಿದರೂ ಕೇಳ ಬೇಡಿ ಎಂದು ಹೇಳುತ್ತಾರೆ. ಧೈರ್ಯ ಸ್ಥೈರ್ಯ ದಿಂದ ಪಿಸಿ ಪಿಸಿ ಮಾತುಗಳನ್ನು ನಿಮ್ಮ ಕಿವಿಯಲ್ಲಿ ಹೇಳುತ್ತಾರೆ, ಇದರಿಂದ ದೇಶಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ಅದನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಿ ಅನುಕೂಲ ಮಾಡಲಿ ಎಂಬ ದೃಷ್ಟಿಯಿಂದ ಇದನ್ನು ಹೇಳುತ್ತಾ ಇದ್ದೇನೆ. ಈ ನಾಲ್ಕು ಮಾತು ಗಳನ್ನು ಹೇಳಿ ಪ್ರವಾಹದಿಂದ ಆಗಿರತಕ್ಕ ಹಾವಳಿ ಯನ್ನು ರೆವಿನ್ಯೂ ಇಲಾಖೆಯವರು ಮತ್ತು ಲೋಕೋಪಯೋಗಿ ಶಾಖೆಯವರು ಬಹಳ ತೀವ್ರತೆ ಯಿಂದ ಗಮನ ಕೊಟ್ಟು ಆದಷ್ಟು ಜಾಗ್ರತೆ ಸೂಕ್ತ ಪರಿಹಾರ ಮಾಡಿಕೊಡಬೇಕೆಂದು ಮನವಿ ಮಾಡಿ ಕೊಂಡು ಈ ಚರ್ಚೆಯನ್ನು ಪ್ರಾರಂಭ ಮಾಡಿ ಸಭೆಯ ಮುಂದೆ ಮಂಡಿಸುತ್ತೇನೆ.

† ಶ್ರೀ ಟಿ. ಮಾದಯ್ಯಗೌಡ (ರಾಮನಗರ).— ಮಾನ್ಯ ಸಭಾಪತಿಗಳೇ, ಸ್ವಾಮಿ, ಅರ್ಕಾವತಿ ಪ್ರವಾಹ ಈ ಸಲ ಅತ್ಯಂತ ದುಷ್ಪರಿಣಾಮವನ್ನುಂಟು ಮಾಡಿ ಜನಗಳಲ್ಲಿ ಒಂದು ಹಾಹಾಕಾರವನ್ನುಂಟು ಮಾಡಿತು. ಅದರಲ್ಲಿಯೂ ವಿಶೇಷವಾಗಿ ರಾಮನಗರ ತಾಲ್ಲೂಕಿನಲ್ಲಿ ಅರ್ಕಾವತಿ ನದೀ ಪ್ರವಾಹದ ಜೊತೆಗೆ ಕಣ್ವ ಜಲಾಶಯದ ಮೇಲ್ಭಾಗದಲ್ಲಿ ಸುಮಾರು ನಾಲ್ಕೈದು ಮೈಲಿಗಳ ಫಾಸಲೆಯಲ್ಲಿ ಕಣ್ವ ನದೀ ತಾನು ಹೋಗುತ್ತಾ ಇದ್ದಂಥಾ ಜಾಡನ್ನು ಬಿಟ್ಟು ಬೇರೆ ಕಡೆಗೆ ಹರಿದುದರ ಪರಿಣಾಮವಾಗಿ ಅನೇಕ ಜಮಾನುಗಳ ಮೇಲೆ ನೀರು ನುಗ್ಗಿ ಫಸಲನ್ನು ಹಾಳು ಮಾಡಿತು. ಈ ಒಂದು ದುರಂತ ತಮ್ಮ ಜೀವಮಾನ ಕಾಲದಲ್ಲಿ ಯಾವಾಗಲೂ ಕಂಡಿದ್ದಿಲ್ಲ, ಕೇಳಿದ್ದಿಲ್ಲ ಎಂದು ಅಲ್ಲಿನ ಜನರು ಹೇಳುತ್ತಾರೆ. ಏನೇನು ಅನಾಹುತವಾಯಿತು, ಎಷ್ಟೆಷ್ಟು ಜನರಿಗೆ ತೊಂದರೆ ಯಾಯಿತು ಎಂಬುದನ್ನು ನಾನು ಕಣ್ಣಾರೆ ನೋಡಿ ಕೊಂಡು ಈ ದಿವಸ ಬಂದಿದ್ದೇನೆ. ಅಲ್ಲಿನ ಜನಗಳಲ್ಲಿ ದುಃಖದ ಒಂದು ಕಾರ್ಮೋಡ ಮುಚ್ಚಿಕೊಂಡು ಅವರು ಬಹಳವಾಗಿ ಪರಿತಪಿಸುತ್ತಾ ಇದ್ದಾರೆ. ಮುಂದೆ ತಮ್ಮಗತಿ ಏನಪ್ಪಾ ಎಂದು ಬಾಯಿ ಬಿಡುತ್ತಾ ಇದ್ದಾರೆ. ರೈತರಿಗೆ ಪೈರು ಪಚ್ಚೆ, ಗಿಡ ಮರಗಳು ಅವರ ತೋಟ, ತುಡಿಕೆಗಳು, ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತಲೂ ಹೆಚ್ಚು. ಅದನ್ನು ನಾನು ಹೇಳಬೇಕಾಗಿಲ್ಲ, ಅವುಗಳನ್ನೆಲ್ಲಾ ಕಳೆದುಕೊಂಡು ಅಪಾರವಾದಂಥ ದುಃಖಕ್ಕೆ ಈಡಾಗಿದ್ದಾರೆ. ಅರ್ಕಾ ವತಿ ನದಿಯ ದಡದಲ್ಲಿದ್ದ ಸಾವಿರಾರು ಮಂದಿ ರೈತರು ಏನಾದರೂ ದೊಡ್ಡ ಮರಣ ಸಂಭವಿಸಿದರೆ ಹೇಗೆ

ಜನರು ಪರಿತಪಿಸುತ್ತಾರೆಯೋ ಅದಕ್ಕಿಂತಲೂ ಹೆಚ್ಚಾಗಿ ಪರಿತಪಿಸುತ್ತಾ ಇದ್ದಾರೆ ಎಂದು ನಿವೇದಿಸುವುದಕ್ಕೆ ನಾನಾದರೂ ಬಹಳ ವಿಷಾದ ಪಡುತ್ತೇನೆ. ಅವರೆಲ್ಲರೂ ಬಹಳ ಕಾಲದಿಂದ ತಮ್ಮ ತಾತ ಮುತ್ತಾತನ ಕಾಲದಿಂದಲೂ ಬರುತ್ತಾ ಇದ್ದ ತಮ್ಮ ಮಕ್ಕಳು ಮರಿಮಕ್ಕಳಿಗೂ ಕೂಡ ಬರುತ್ತಾ ಇದ್ದ ವರ್ಷಂಪ್ರತಿ ವರಮಾನವನ್ನು ಕಳೆದು ಕೊಂಡಿದ್ದಾರೆ. ಅದರ ಜೊತೆಗೆ ಸಾಲು ಸಾಲಿನಲ್ಲಿ ತಿಂಗಳು ತಿಂಗಳಿನಲ್ಲಿ ಜೀವನೋಪಾಯಕ್ಕೆ ಯಾವುದೊಂದು ಆಧಾರವಾಗಿತ್ತೋ ಅದಿಲ್ಲದೇ ದುಃಖಪಡುತ್ತ ಇದ್ದಾರೆ.

2-30 P.M.

ಅಲ್ಲಿ ಹೊಳೆಯ ಸಾಲಿನಲ್ಲಿ ಜಮೀನುಗಳೆಲ್ಲಾ ಕೊರೆಯಲ್ಪಟ್ಟಿವೆ. ತಮ್ಮ ಜಮೀನು ಯಾವುದು ಎಂದು ಅನೇಕ ಸಂದರ್ಭಗಳಲ್ಲಿ ಗುರುತು ಹಿಡಿಯುವುದೇ ಕಷ್ಟವಾಗಿದೆ. ಕೆಲವರ ತೋಟಗಳಲ್ಲಿ ಅರ್ಧ-ಮುಕ್ಕಾಲು ಭಾಗ ಕೊಚ್ಚಿಹೋಗಿ ಅದು ಹೊಳೆಯ ಪಾಲಾಗಿದೆ. ಕೆಲವುಕಡೆ ವಿಶೇಷವಾಗಿ ಮರಳು ಹರಡಲ್ಪಟ್ಟು ತೋಟದ ಪ್ರದೇಶ ಮುಚ್ಚಲ್ಪಟ್ಟಿದೆ. ಭೂಮಿಯು ಅರೂಪಮಾಡಲ್ಪಟ್ಟಿದೆ. ಸಾಧಾರಣವಾಗಿ ಎಲ್ಲೆಲ್ಲಿ ಯಾವ ಯಾವ ರೀತಿಯಲ್ಲಿ ಬೆಳೆಯಿತ್ತು ಎಂದು ಕಂಡುಹಿಡಿಯುವುದೇ ಕಷ್ಟವಾಗಿದೆ. ಇದ್ದ ಬಾವಿಗಳು, ಕಪಿಲೆ ಮತ್ತು ಏತದ ಬಾವಿಗಳು ಎಲ್ಲಾ ಮಾಯವಾಗಿವೆ. ಕೆಲವು ಹಳ್ಳಿಗಳಲ್ಲಿ ಮತ್ತು ರಾಮನಗರ ಟೌನಿನಲ್ಲಿ ಇದ್ದ ಮನೆಗಳೂ, ಅಂಗಡಿಗಳೂ ಸಾಮಾನುಗಳ ಸಮೇತ ಕೊಚ್ಚಿಕೊಂಡು ಹೋಗಿವೆ. ಹೀಗೆ ಎಷ್ಟೋ ಅನಾಹುತವಾಗಿದೆ. ಇದು ಎಂಥವರಿಗೂ ಕೂಡ ದುಃಖವನ್ನುಂಟುಮಾಡುವ ವಿಷಯ. ಇದಾದ ತರುಣದಲ್ಲಿಯೇ ಆ ಸ್ಥಳಕ್ಕೆ ಬೆಂಗಳೂರಿನ ಪತ್ರಿಕಾ ಪ್ರತಿನಿಧಿಗಳು ದಯಮಾಡಿಸಿ ಆಗಿರುವ ಕಷ್ಟನಷ್ಟಗಳನ್ನರಿತು ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಮತ್ತು ಈ ಸಂಬಂಧದಲ್ಲಿ ಕೆಲವು ಚಿತ್ರಗಳನ್ನು ಸಹ ಕೊಟ್ಟಿದ್ದಾರೆ. ಸರ್ಕಾರದ ನಾನಾ ಮಂತ್ರಿಗಳೂ ಮತ್ತು ಅಧಿಕಾರಿಗಳೂ ಸಹ ಅಲ್ಲಿಗೆ ಧಾವಿಸಿ ಬಂದು ನೊಂದ ಜನಗಳಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿರುವುದೂ ಅಲ್ಲದೆ ತಮ್ಮ ಕೈಲಾದ ಮಟ್ಟಿಗೂ ಸಹಾಯಮಾಡುತ್ತೇವೆಂದು ಕೂಡ ವಾಗ್ದಾನ ಕೊಟ್ಟರು. ಇದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಈ ಸಂದರ್ಭದಲ್ಲಿ ರೆವೆನ್ಯೂ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಪೋಲೀಸಿನವರು, ವಿದ್ಯುಚ್ಛಕ್ತಿ ಇಲಾಖೆಯವರು ತಕ್ಷಣವೇ ಮಾಡಿದ ಒಂದು ಸಹಾಯವನ್ನು ಅಲ್ಲಿನ ಜನರು ಬಹಳ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದಾರೆ. ಅವರೆಲ್ಲರೂಕೂಡ ತಾತ್ಕಾಲಿಕವಾದ ಸಹಾಯವನ್ನು ಜಾಗ್ರತೆ ನೀಡದಿದ್ದರೆ ಇನ್ನೂ ಹೆಚ್ಚಿನ ಅನಾಹುತವಾಗುತ್ತಿತ್ತು. ಅವರು ಜನರಲ್ಲಿ ಧೈರ್ಯ ತುಂಬಿ, ಕನಿಕರ ವ್ಯಕ್ತಪಡಿಸಿದ್ದು ಬಹಳ ಒಳ್ಳೆಯದಾಯಿತೆಂದು ಭಾವಿಸುತ್ತೇನೆ. ಅರ್ಕಾವತಿ ನದಿಯ ಪಕ್ಕದಲ್ಲಿರುವ ರೈತರು ಸುಮಾರು 40 ಮೈಲಿಗಳ ಪ್ರದೇಶದಲ್ಲಿ ದುರಂತಕ್ಕೀಡಾಗಿದ್ದಾರೆ. ತಿಪ್ಪಗೊಂಡನಹಳ್ಳಿಯಿಂದ ಹಿಡಿದು ಕಾನಕಾನ ಹಳ್ಳಿಯವರೆಗೆ ಅರ್ಕಾವತಿ ನದಿಯ ಎರಡುಪಕ್ಕಗಳಲ್ಲೂ ಇರುವ ಸಾವಿರಾರು ಎಕರೆಗಳ ಜಮೀನಿನಿಂದ ಜೀವನ ಮಾಡುತ್ತಿದ್ದ ಸಾವಿರಾರು ಜನ ರೈತರು ಈ ದುರಂತಕ್ಕೀಡಾಗಿದ್ದಾರೆ. ಆ ರೈತರ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ.

ಅರ್ಕಾವತಿ ನದಿಯ ಪಕ್ಕದಲ್ಲಿರುವ ರೈತರೆಲ್ಲಾ ದೊಡ್ಡ ಜಮೀನುದಾರರಲ್ಲ; ಅರ್ಧ ಎಕರೆ, ಹತ್ತು ಗುಂಟೆ, ಎರಡು ಎಕರೆ ಜಮೀನುಳ್ಳವರೇ ಜಾಸ್ತಿ; ದೊಡ್ಡ ಕುಳಗಳಿಲ್ಲ. ಅವರೆಲ್ಲರೂ ಕೂಡ ಈ ಜಮೀನಿನಿಂದಲೇ ಜೀವನ ನಡೆಸುವವರಾಗಿದ್ದರು. ಅರ್ಧ ಎಕರೆ, ಕಾಲು ಎಕರೆ ಜಮೀನನ್ನಿಟ್ಟುಕೊಂಡು ಅದರಿಂದಲೇ ಸಂಸಾರ ನಿರ್ವಹಣೆ ಮಾಡಿಕೊಳ್ಳುತ್ತಿದ್ದ ರೈತರು ಅಲ್ಲಿ ಹೆಚ್ಚಾಗಿದ್ದರು. ಈಗ ಅರ್ಧ ಎಕರೆ ತೋಟವನ್ನಿಟ್ಟುಕೊಂಡು ಎರಡು ಹಲಸಿನ ಮರ, ಹಣ್ಣಿನ ಮರ, ತರ್ಕಾರಿ ಬೆಳೆದು ಜೀವನ ಮಾಡುತ್ತಿದ್ದವರಿಗೆ ಬಹುಭಾಗ ತೋಟ ಹಾಳಾಗಿ ತೊಂದರೆಯಾಗಿದೆ. ಭಾರಿ ಭಾರಿ ಹಲಸಿನಮರ, ಮಾವಿನ ಮರ, ಸಾವಿರಾರು ತೆಂಗಿನ ಮರ, ಅಡಿಕೆಗಿಡ ಮುಂತಾದುವೇನಿದ್ದುವೋ ಅವು ಹೊಳೆಯ ಪಾಲಾಗಿವೆ. ಹೀಗಾಗಿ ಅರ್ಕಾವತಿ ಪಕ್ಕದಲ್ಲಿದ್ದ ಬಹಳ ಫಲವತ್ತಾದ ಭೂಮಿ ಹಾಳಾಗಿದೆ. ಅಲ್ಲಿ ಬಹಳ ಒಳ್ಳೆಯ ರೇಷ್ಮೆಯನ್ನು ಕೂಡ ಬೆಳೆದು ಒದಗಿಸುತ್ತಿದ್ದುದರಿಂದ ಅದನ್ನು ಸರ್ಕಾರದವರು ಸೀಡ್ ಏರಿಯಾ–ಒಳ್ಳೆಯ ರೇಷ್ಮೆ ಬಿತ್ತನೆ ಒದಗಿಸುವ ಪ್ರದೇಶ ಎಂದು ಕಾನೂನು ಮೂಲಕ ಡಿಕ್ಲೇರ್ ಮಾಡಿದ್ದರು. ಅಲ್ಲಿಂದ ರೇಷ್ಮೆ ಬಿತ್ತನೆಯನ್ನು ಮೈಸೂರುದೇಶದ ಪ್ರಾಂತಗಳಿಗೆಲ್ಲಾ ಒದಗಿಸುತ್ತಿದ್ದರು. ಬಹಳ ಮಟ್ಟಿಗೆ ಈ ಒಂದು ವ್ಯವಸಾಯಕ್ಕೆ ಇವತ್ತು ಧಕ್ಕೆ ತಗಲಿದೆ. ಈ ರೇಷ್ಮೆ ಬೆಳೆಯುತ್ತಿದ್ದ ಜಮೀನುಗಳೆಲ್ಲಾ ಕೊರೆದುಹೋಗಿವೆ. ಅಲ್ಲದೆ ಏಳೆಂಟು ಅಡಿ ಮರಳಿನಿಂದ ತುಂಬಿ ಗುರುತೇ ಸಿಗದಂತಾಗಿವೆ. ಅಲ್ಲಿ ಸಣ್ಣಪುಟ್ಟ ರೈತರೆಲ್ಲರೂ ಕೂಡ ಕಪಿಲೆಬಾವಿ, ಏತದ ಬಾವಿಗಳನ್ನು ಮಾಡಿಕೊಂಡಿದ್ದರು. ಕೆಲವರು ಪಂಪ್ ಹಾಕಿಸಿಕೊಂಡಿದ್ದರು. ಇವೆಲ್ಲಾ ಹಾಳಾಗಿಹೋಗಿವೆ. ಈ ಬಾವಿಗಳೆಲ್ಲಾ ಸಾಧಾರಣವಾಗಿ ಮುಚ್ಚಿಕೊಂಡು ಹೋಗಿವೆ. ಪಂಪಿನ ಮನೆಗಳೆಲ್ಲಾಕೂಡ ಕೊಚ್ಚಿಹೋಗಿವೆ. ಅನೇಕ ಮೆಷೀನ್‌ಗಳೂಕೂಡ ಪ್ರವಾಹದಲ್ಲಿ ಹೋಗಿಬಿಟ್ಟಿವೆ. ಇದರಿಂದ ಎಷ್ಟುಮಟ್ಟಿನ ಅನರ್ಥವಾಗಿದೆಯೆಂಬುದನ್ನು ಸಚಿವರು ಅರ್ಥಮಾಡಿಕೊಳ್ಳಬಹುದು. ಅಲ್ಲದೆ ಆ ಪ್ರಾಂತದಲ್ಲಿ ಚೆನ್ನಾಗಿ ಕಬ್ಬನ್ನು ಬೆಳೆಯುತ್ತಿದ್ದರು. ಚಿಕ್ಕಚಿಕ್ಕ ಪ್ರದೇಶಗಳಲ್ಲಿ ತರ್ಕಾರಿ, ಭತ್ತ, ರಾಗಿ, ಕಡಲೇಕಾಯಿ, ಮೆಣಸಿನಕಾಯಿ, ಆಲೂಗೆಡ್ಡೆ ಮುಂತಾದ್ದನ್ನುಸಹ ಬೆಳೆಯುತ್ತಿದ್ದರು. ಈಗ ಆ ಯಾವ ಫಸಲೂ ಕೂಡ ಇಲ್ಲದಂತಾಗಿದೆ. ರಾಮನಗರ ಟೌನ್ ಮತ್ತು ಕೆಲವು ಪ್ರದೇಶಗಳಲ್ಲಿ ಮನೆಗಳು ಅಂಗಡಿಗಳು ಅವುಗಳಲ್ಲಿದ್ದ ಪದಾರ್ಥಗಳೊಂದಿಗೆ ಕೊಚ್ಚಿಕೊಂಡುಹೋಗಿವೆ. ಒಂದು ಹೋಟಲು ಸುಮಾರು 7-8 ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವಪದಾರ್ಥಗಳೊಂದಿಗೆ ಹೊಳೆಯ ಪಾಲಾಗಿದೆ. ಸಾಲದ್ದಕ್ಕೆ ರಸ್ತೆ, ಸೇತುವೆ, ಪರಸು ಬಂದು ಮುಂತಾದುವುಗಳೆಲ್ಲಾ ಬಹಳ ಅನಾಹುತಕ್ಕೀಡಾಗಿವೆ. ವಿದ್ಯುಚ್ಛಕ್ತಿ ತಂತಿಗಳು ಕತ್ತರಿಸಿಹೋಗಿ, ವಿದ್ಯುಚ್ಛಕ್ತಿಯನ್ನೊದಗಿಸುವ ಲೈನು ಹಾಳಾಗಿ ರಾಮನಗರ ಟೌನು ಪೂರ್ಣ ಕತ್ತಲೆಯಲ್ಲಿದ್ದು ಜನರು ಬೆಳಕಿಲ್ಲದೆ ರಾತ್ರಿಯನ್ನು ಕಳೆಯಬೇಕಾಗಿ ಬಂತು. ಎರಡುಮೂರು ದಿವಸಗಳು ನೀರಿಲ್ಲದೆ ಹಾಹಾಕಾರವುಂಟಾಯಿತು. ಆಗ ಲೋಕೋಪಯೋಗಿ ಇಲಾಖೆಯವರು ವ್ಯಾನ್‌ನಲ್ಲಿ ಚನ್ನಪಟ್ಟಣದಿಂದ ನೀರು ತಂದು ಮನೆಗಳಿಗೆ ಒದಗಿಸಿದರು. ಇದನ್ನೆಲ್ಲಾ ನೋಡಿ ಎಂಥ ದುಸ್ಥಿತಿ ಉಂಟಾಗಿತ್ತೆಂಬುದನ್ನು ಮಾನ್ಯ ಸಭೆ ಯೋಚನೆ ಮಾಡಬಹುದು. ರೇಷ್ಮೆ ಬೆಳೆಗೆ ಉಂಟಾದ ದುರಂತದಿಂದ ರೇಷ್ಮೆ ಕೈಗಾರಿಕೆಗೆ ಬಹಳ ತೊಂದರೆ

(ಶ್ರೀ ಟಿ. ಮಾದಯ್ಯಗೌಡ)

ಯಾಗಿದೆಯೆಂದು ಹೇಳಬಯಸುತ್ತೇನೆ. ಒಟ್ಟಿನಲ್ಲಿ ಅರ್ಕಾವತಿ ಮತ್ತು ಕಣ್ವ ಪ್ರವಾಹದಿಂದ ಆದ ಅನಾಹುತದಿಂದ ಸ್ವಲ್ಪ ಹೆಚ್ಚುಕಡಮೆ ಒಂದು ಕೋಟಿ ರೂಪಾಯಿಗಳಷ್ಟು ನಷ್ಟ ಸಂಭವಿಸಿದೆಯೆಂದು ಧಾರಾಳವಾಗಿ ಹೇಳಬಹುದು. ಕಟ್ಟಡಗಳು, ಸೇತುವೆಗಳು, ರಸ್ತೆಗಳು ಮುಂತಾದುವುಗಳಿಗಾಗಿರುವ ಅಪಾಯ, ಅವನ್ನು ದುರಸ್ತುಪಡಿಸಲು ಆಗುವ ಖರ್ಚು, ತೆಂಗು ಮುಂತಾದ ಮರಗಳಿಂದ ಬರುತ್ತಿದ್ದ ಲಾಭ–ಇದೆಲ್ಲವನ್ನೂ ಲೆಕ್ಕ ಹಾಕಿದರೆ ಒಂದು ಕೋಟಿ ರೂಪಾಯಿಗಳ ನಷ್ಟವಾಗಿದೆಯೆಂಬುದರಲ್ಲಿ ಸಂದೇಹ ವಿಲ್ಲ. ಒಂದೊಂದು ತೆಂಗಿನ ಮರದಿಂದ ವರ್ಷಕ್ಕೆ 3-4 ಸಾವಿರ ರೂಪಾಯಿಗಳ ಲಾಭದ ಪ್ರಕಾರ ಅಂದಾಜು ಮಾಡಿದರೆ ಈ ಬಾಬಿನಿಂದಲೇ ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ನಮ್ಮ ರೆವಿನ್ಯೂ ಮಂತ್ರಿಗಳು ಅಲ್ಲಿಗೆ ದಯಮಾಡಿಸಿ ಸ್ಥಳೀಯ ಅಧಿಕಾರಿಗಳು, ಡೆಪ್ಯುಟಿ ಕಮಿಷನರು ಇವರಿಗೆಲ್ಲ ಸೂಚನೆಗಳನ್ನು ಕೊಟ್ಟರು. ಯಾವ ಯಾವ ಜಮೀನಿನಲ್ಲಿ ಯಾವ ಯಾವ ರೀತಿ ನಷ್ಟವಾಗಿದೆ, ಯಾವ ಯಾವ ರೈತನಿಗೆ ಏನೇನು ತೊಂದರೆಯಾಗಿದೆ ಎಂಬ ಬಗೆಗೆ ವಿವರಗಳನ್ನು ಪಡೆಯಬೇಕೆಂದು ಆಜ್ಞೆ ಮಾಡಿದರು. ಅದರಂತೆ ಸ್ಥಳೀಯ ಅಧಿಕಾರಿಗಳು ನಷ್ಟಕ್ಕೊಳಗಾದ ಪ್ರತಿಯೊಂದು ಜಮೀನಿನಲ್ಲಿಯೂ ನಷ್ಟವನ್ನು ಅಂದಾಜು ಮಾಡುತ್ತಿದ್ದಾರೆ. ರೈತರ ಜಮೀನು ಸರಿಯಾಗಿ ಪೂರ್ವಸ್ಥಿತಿಗೆ ಬರಬೇಕಾದರೆ ಎಷ್ಟು ಖರ್ಚು ಮಾಡಬೇಕು, ಅವರಿಗೆ ಯಾವ ರೀತಿ ಪರಿಹಾರ ಕೊಟ್ಟರೆ ಸರಿಹೋಗುತ್ತದೆ ಎಂಬ ಬಗ್ಗೆ ವಿವರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇನ್ನು ಒಂದೆರಡು ದಿನಗಳಲ್ಲಿ ಆ ವಿವರಗಳು ಸರ್ಕಾರದ ಕೈ ಸೇರುತ್ತವೆಂದು ನಂಬಿದ್ದೇನೆ. ಅಲ್ಲಿ ಪ್ರವಾಹದ ಹಾವಳಿಯಿಂದ ಒಂದೆರಡು ಮರಣಗಳೂ ಸಂಭವಿಸಿವೆ ಯೆಂದು ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರದವರು ಜಾಗ್ರತೆ ಪರಿಹಾರವನ್ನೊದಗಿಸಿದರೆ ಅಲ್ಲಿನ ಬಡರೈತರಿಗೆ ಸಹಾಯ ಮಾಡಬೇಕೆಂದು ಬಹಳ ವಿನಯದಿಂದ ಈ ಸಭೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಸರ್ಕಾರ ಯಾವ ಯಾವ ರೀತಿಯಲ್ಲಿಸಹಾಯ ಮಾಡಬಹುದೆಂದು ವಿವರಿಸಿ ಹೇಳಲು ನಾನು ಹೋಗುವುದಿಲ್ಲ. ಏನೇನು ಪರಿಹಾರ ಕೊಡುವುದಕ್ಕೆ ಸಾಧ್ಯವೋ ಅದನ್ನು ರೈತರಿಗೆ ಆದಷ್ಟು ಜಾಗ್ರತೆ ಒದಗಿಸಿ, ಅದು ಅವರ ಕೈಗೆ ತಲಪುವಂತೆ ಏನಾದರೂ ವ್ಯವಸ್ಥೆ ಮಾಡಬೇಕು. ಸರಿಯಾದ ಅಧಿಕಾರಿಗಳನ್ನು ನೇಮಕ ಮಾಡಿ, ಅವರು ರೈತರ ಸ್ಥಳಗಳಿಗೆ ಹೋಗಿ ಸಹಾಯವನ್ನೊದಗಿಸಬೇಕು. ಅಲ್ಲಿ ಕೆಲವು ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದರಿಂದ ತಾತ್ಕಾಲಿಕವಾಗಿ ಕೆಲಸ ವಿಲ್ಲದೆ, ಅನ್ನವಿಲ್ಲದೆ ಇರುವ ಜನರಿಗೆ ಉಪಕಾರ ಮಾಡಿದ ಹಾಗಾಗುತ್ತದೆ. ಆದಕಾರಣ ಕೆಲವು ಕಾಮಗಾರಿಗಳನ್ನು ಕೂಡಲೆ ಸರ್ಕಾರ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ರಸ್ತೆಗಳ ಕೆಲಸಗಳನ್ನು ತೆಗೆದುಕೊಳ್ಳಬಹುದು. ಧಾರಾಳ ಮನಸ್ಸಿನಿಂದ, ಅವರ ಆಸ್ತಿಪಾಸ್ತಿಗಳೇನಿವೆಯೆಂಬ ವಿಷಯಗಳನ್ನು ಗಮನಿಸದೆ ಉದಾರವಾಗಿ ಬಡ್ಡಿ ಇಲ್ಲದ ಸಾಲವನ್ನೊದಗಿಸಿದರೆ ಆದಷ್ಟು ಜಾಗ್ರತೆ ಅವರ ಜಮೀನುಗಳನ್ನು ಸರಿಮಾಡಿಕೊಳ್ಳಲನುಕೂಲವಾಗುತ್ತದೆಂದು ಸೂಚಿಸುತ್ತೇನೆ. ನಮ್ಮ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿದೆ, ಅದರಿಂದ ಹೆಚ್ಚು ಹಣವನ್ನೊದಗಿಸಿ ಆ ಜನರಿಗೆ ಸಹಾಯ ಮಾಡಬೇಕೆಂದು ವಿನಂತಿ. ವ್ಯವಸಾಯ ಇಲಾಖೆಯವರು ಮತ್ತು ರೇಷ್ಮೆ ಇಲಾಖೆಯವರು ತಮ್ಮಲ್ಲಿರತಕ್ಕ ಸಾಧನ ಸಲಕರಣೆಗಳನ್ನು ಉಪಯೋಗಿಸಿ ತಾವು ಸಹಾಯ ಮಾಡತಕ್ಕ ಎಲ್ಲ ರೀತಿಯಿಂದಲೂ ರಾಮನಗರ ತಾಲ್ಲೂಕಿಗೆ ಸಹಾಯ ಮಾಡಿ, ಅಲ್ಲಿನ ಜನರಿಗೆ ಅನುಕೂಲ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಹೀಗೆ ಸರ್ಕಾರದವರು ಆದಷ್ಟು ಜಾಗ್ರತೆ ಸಹಾಯವನ್ನೊದಗಿಸುವುದರಿಂದ ಬಹಳ ನೊಂದಿರತಕ್ಕ ರೈತರಿಗೆ ಸ್ವಲ್ಪಮಟ್ಟಿಗಾದರೂ ಉಪಕಾರವಾಗುತ್ತದೆ. ಸರ್ಕಾರ ಮಾತ್ರವಲ್ಲದೆ ಅಲ್ಲಿನ ರಿಲೀಫ್ ಕಮಿಟಿಯವರು ಒಂದು ಪ್ರಾರ್ಥನಾ ಪತ್ರಿಕೆ, ಎಂದರೆ, appeal ಹೊರಡಿಸಿದ್ದಾರೆ. ಖಾಸಗಿ ಜನರು, ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ಅವರನ್ನು ಪ್ರಾರ್ಥನೆ ಮಾಡಿ, ಅಲ್ಲಿನ ಜನರಿಗೆ ಪರಿಹಾರ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಇದಕ್ಕೆ ಸಮಸ್ತರೂ ಗಮನ ಕೊಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸಭಾಪತಿಯವರೆ, ಅಷ್ಟಗ್ರಹ ಕೂಟದ ಪರಿಣಾಮವಾಗಿಯೋ ಏನೋ ನಮ್ಮ ನಾಡಿನ ಹಲವಾರು ಭಾಗಗಳಲ್ಲಿ ಪ್ರಕೃತಿಯ ವಿಕೋಪ ಬೃಹದ್ರೂಪ ತಾಳಿ ನಮ್ಮ ಸಮಾಜದ ಮೇಲೆ ದುರದೃಷ್ಟಕರ ಪರಿಣಾಮವನ್ನುಂಟುಮಾಡಿದೆ. ಅತಿವೃಷ್ಟಿಯ ಪರಿಣಾಮವಾಗಿ ದುಃಖಭರಿತರಾಗಿರತಕ್ಕ ನೂರಾರು ಜನರಿಗೆ ಈ ಸಭೆಯ ಮತ್ತು ಸರ್ಕಾರದ ಸಂತಾಪವನ್ನು ಸೂಚಿಸಬೇಕಾಗಿದೆ. ಪ್ರವಾಹದಿಂದ ಬೇಕಾದಷ್ಟು ನಷ್ಟವಾಗಿದೆ ಎನ್ನುವ ವಿಚಾರವನ್ನು ಎಲ್ಲಿ ಈ ಪ್ರವಾಹ ಬಹು ಮುಖ್ಯವಾದ ಹಾವಳಿಯನ್ನುಂಟು ಮಾಡಿದೆಯೋ ಆ ಕ್ಷೇತ್ರದಿಂದ ಈ ಸಭೆಗೆ ಆರಿಸಿ ಬಂದಿರುವ ಶ್ರೀಮಾನ್ ಮಾದಯ್ಯ ಗೌಡರು ಕಣ್ಣಿಗೆ ಕಟ್ಟುವ ರೀತಿಯಲ್ಲಿ ವಿವರಿಸಿದ್ದಾರೆ. ಇದೇ ರೀತಿ ಇನ್ನೂ ಹಲವಾರು ಕಡೆ ಈ ಅತಿವೃಷ್ಟಿಯ ಪರಿಣಾಮದಿಂದ ಆಗಿರತಕ್ಕ ಕಷ್ಟನಷ್ಟಗಳನ್ನು ವಿರೋಧ ಪಕ್ಷದ ನಾಯಕರಾದ ಮಾನ್ಯ ಶಿವಪ್ಪನವರು ಸಭೆಯ ಮುಂದೆ ಚಿತ್ರಿಸಿದ್ದಾರೆ. ಈ ಪ್ರಶ್ನೆಯನ್ನು ನಾವೆಲ್ಲರೂ ಮಾನವೀಯ ದೃಷ್ಟಿಯಿಂದ ನೋಡುವುದು ಅವಶ್ಯಕವೆಂದು ನಾನಾದರೂ ಭಾವಿಸುತ್ತೇನೆ, ಸರ್ಕಾರವೂ ಕೂಡ ಆ ಜನರ ಮೇಲೆ ಕನಿಕರ ದೃಷ್ಟಿಯಿಂದ, ಕೃಪಾದೃಷ್ಟಿಯನ್ನು ಬೀರಬೇಕಾಗಿದೆ. ಸರ್ಕಾರ ಬೇಕಾದಷ್ಟು ತಪ್ಪುಮಾಡಬಹುದು, ಆ ತಪ್ಪನ್ನು ವಿರೋಧಪಕ್ಷದವರಾದ ನಾವು ಆಗಿಂದಾಗ ಟೀಕೆಯನ್ನೂ ಮಾಡಬೇಕಾಗುತ್ತದೆ. ಆದರೆ ನಮ್ಮ ನಾಡಿನ ಒಂದು ಭಾಗವನ್ನು ಒಂದು ದುರಂತ ಆವರಿಸಿದಾಗ, ಪಕ್ಷ ಪಂಗಡಗಳ ಭೇದವನ್ನು ದಾಟಿ ನಾವೆಲ್ಲರೂ ಏಕ ಮುಖದಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾದುದು ಬಹಳ ಅವಶ್ಯಕವೆಂದು ನಾನು ಭಾವಿಸುತ್ತೇನೆ. ಈ ಪ್ರವಾಹದಿಂದ ಉಂಟಾಗಿರತಕ್ಕ ಕಷ್ಟನಷ್ಟಗಳ ಸಂಬಂಧವಾಗಿ ಹಲವಾರು ಜನ ಮಂತ್ರಿಗಳು ಸ್ಥಳಕ್ಕೆ ಕೂಡಲೇ ಧಾವಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಒಳ್ಳೆಯ ಮಾರ್ಗದರ್ಶನ ಮಾಡುವುದರ ಮೂಲಕ ತಮ್ಮ ಕರ್ತವ್ಯವನ್ನು ಪರಿಪಾಲನೆ ಮಾಡಿದ್ದಾರೆಂದು ನಿಸ್ಸಂದೇಹವಾಗಿ ನಾನು ಹೇಳಬಯಸುತ್ತೇನೆ. ನಾನು ರಾಮನಗರದ ಕೆಲವು ಹತ್ತಿರದ ಪ್ರದೇಶಗಳನ್ನು ಸಂದರ್ಶಿಸಿ, ಎಷ್ಟುಮಟ್ಟಿಗೆ ಅಲ್ಲಿನ ಜನರಿಗೆ ಈ ಪ್ರವಾಹದಿಂದ

ಹಾನಿ ಉಂಟಾಗಿದೆಯೆನ್ನುವುದನ್ನು ನೋಡಿ ತಿಳಿದುಕೊಂಡಿದ್ದೇನೆ. ಅಲ್ಲಿನ ಜನರು ಈಹೊತ್ತು ನಿರಾಶರಾಗಿದ್ದಾರೆ. ಅಲ್ಲಿನ ಜನರಲ್ಲಿ ಧೈರ್ಯದಿಂದ ಕಷ್ಟನಷ್ಟಗಳನ್ನೆದುರಿಸುವ ಶಕ್ತಿ ಈ ಹೊತ್ತು ಮಾಯವಾಗಿ ಹೋಗಿದೆ. ಎಂಥವರಿಗೂ ಕೂಡ ಕಷ್ಟ ಆವರಿಸಿದಾಗ ಧೈರ್ಯ ಸ್ವಲ್ಪ ಹಿಂಬದಿಗೆ ಹೋಗುವುದು ಸಾಧಾರಣ ವಿಷಯ. ಈ ದಿವಸ ರಾಮನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ, ಹಾಗೂ ಹಾಸನ ಜಿಲ್ಲೆಯ ಹಲವಾರು ಭಾಗಗಳಲ್ಲಿ ಉಂಟಾಗಿರತಕ್ಕ ಈ ಹಾನಿಗೆ ತಾತ್ಕಾಲಿಕವಾದ ಪರಿಹಾರಗಳನ್ನು ಸರ್ಕಾರ ಕೊಡಬೇಕಾದುದು ಬಹಳ ಜರೂರಿನ ವಿಷಯವೆಂದು ನಾನು ಅಭಿಪ್ರಾಯಪಡುತ್ತೇನೆ. ಬಹುಶಃ ನಮಗೆ ಈ ಪ್ರವಾಹ ಅಥವಾ ಅತಿವೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಎಷ್ಟು ಮಟ್ಟಿಗೆ ನಷ್ಟವುಂಟಾಗಿದೆ ಎನ್ನುವುದರ ನಿಜ ಚಿತ್ರ ಇನ್ನೂ ಅರ್ಥವಾಗಿಲ್ಲ. ಪತ್ರಿಕೆಗಳಲ್ಲಿ ನಾವು ನೋಡಿದುದು ರಾಮನಗರದ ಸುತ್ತಮುತ್ತಣ ಪ್ರದೇಶಗಳಲ್ಲಿ ಬಹುಮುಖವಾದ ನಷ್ಟ ಸಂಭವಿಸಿದೆ ಎಂಬುದು. ತುಮಕೂರು, ಹಾಸನ, ಬೆಂಗಳೂರು ಜಿಲ್ಲೆಗಳಿಂದ ಬಂದಿರುವ ಸದಸ್ಯರು ಪ್ರವಾಹದ ಪರಿಣಾಮವಾಗಿ ಅಲ್ಲಿಯೂ ಬಹುಮುಖ್ಯವಾದ ದುರಂತ ನಡೆದಿದೆಯೆಂದು ಹೇಳುತ್ತಾರೆ. ಶಾಸನ ಸಭಾಧಿವೇಶನ ಪ್ರಾರಂಭವಾದ ತಕ್ಷಣ ಸಂಬಂಧಪಟ್ಟ ಸಚಿವರು ಸರ್ಕಾರದ ಪರವಾಗಿ, ಅವರಿಗೆ ಬಂದಿರತಕ್ಕ ಅಧಿಕಾರಯುತವಾದ ವರದಿಗಳನ್ನು ಸಭೆಯ ಮುಂದಿಟ್ಟಿದ್ದರೆ ಬಹುಶಃ ಈ ಚರ್ಚೆ ಮಾಡಲು ಇನ್ನೂ ಅನುಕೂಲವಾಗುತ್ತಿತ್ತು ಎಂದು ನನಗಾದರೂ ಅನಿಸುತ್ತದೆ. ಒಂದು ವಿಚಾರವನ್ನು ಈ ಸಮಯದಲ್ಲಿ ನಾನು ಈ ಸಭೆಯ ಅವಗಾಹನೆಗೆ ತರಲು ಇಷ್ಟಪಡುತ್ತೇನೆ. ರಾಮನಗರದಲ್ಲಿ ಪರಿಹಾರ ಕಾರ್ಯಗಳು ಯಾವ ರೂಪದಲ್ಲಿ ನಡೆಯಬೇಕು ಎನ್ನುವುದು ಅಲ್ಲಿ 3-4 ಏಜೆನ್ಸಿಗಳು ಕೆಲಸ ಮಾಡುವುದಕ್ಕೆ ಷುರು ಹತ್ತಿದುವು ಎಂದು ನಾನು ತಿಳಿದಿದ್ದೇನೆ. ಒಂದನೆಯದು ರಾಮನಗರ ಪುರಸಭೆ, ಎರಡನೆಯದು ರಾಮನಗರ ತಾಲ್ಲೂಕು ಬೋರ್ಡು, ಮೂರನೆಯದು ಸರ್ಕಾರ. ಈಗಾಗಲೆ ಅಲ್ಲಿ ಕೊಂಚಮಟ್ಟಿಗೆ ಪೈಪೋಟಿ, ಆಕ್ರೋಶ, ಅಸಮಾಧಾನ ಇವುಗಳು ಕೂಡ ಉಂಟಾಗಿರುವ ವಿಚಾರವನ್ನು ನಾವು ವೃತ್ತಪತ್ರಿಕೆಗಳಲ್ಲಿ ಓದಿದ್ದೇವೆ. ಪ್ರವಾಹಗಳು ಅತಿವೃಷ್ಟಿ ದೆಸೆಯಿಂದ ಆಗತಕ್ಕಂಥ ಪರಿಣಾಮಗಳು. ಅವು ನಮ್ಮ ನಾಡಿನಲ್ಲಿ ವರ್ಷೆ ವರ್ಷೇ ಯಾವುದಾದರೂ ಮೂಲೆಯಲ್ಲಿ ಸಂಭವಿಸುತ್ತಲೇ ಇವೆ. ಆದ್ದರಿಂದ ಸರ್ಕಾರದವರು ಕೂಡ ಇಂಥ ವಿಚಾರದಲ್ಲಿ ತಕ್ಷಣದ ಪರಿಹಾರ ಕಾರ್ಯಗಳನ್ನು ಜಾರಿಗೆ ತರಬೇಕಾದರೆ ಯಾವುದಾದರೂ ನಿರ್ದಿಷ್ಟವಾದಂಥ ನೀತಿ ಸೂತ್ರಗಳನ್ನು ಹಾಕಿಕೊಳ್ಳತಕ್ಕಂಥಾದ್ದು ಬಹಳ ಒಳ್ಳೆಯದು ಎಂದು ನಾನು ಈ ಸಮಯದಲ್ಲಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಕೋಆರ್ಡಿನೇಷನ್ ಇಲ್ಲದೆ ಹೋದರೆ ಯಾವ ಪರಿಹಾರ ಕಾರ್ಯವನ್ನು ಸರ್ಕಾರದವರು ಮಾಡುವುದಕ್ಕೆ ಇಷ್ಟವಿದ್ದರೂ, ಈ ಪರಿಹಾರ ಕಾರ್ಯ ಪರಿಣಾಮಕಾರಿಯಾದಂಥ ರೀತಿಯಲ್ಲಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಅನ್ನತಕ್ಕಂಥ ವಿಚಾರವನ್ನು ನಾನು ಈ ಸಭೆಯ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಬೆಳೆಗೆ ಬಹು ನಷ್ಟವಾಗಿದೆ. ರಾಮನಗರ, ಚನ್ನಪಟ್ಟಣ, ಮದ್ದೂರು ಮುಂತಾದ ಕಡೆ ರೇಷ್ಮೆ ಬೆಳೆ ಬಹು ಲಾಭವಾದಂಥ ವೃತ್ತಿ. ಅದರಲ್ಲಿ ಕೂಡ ರಾಮನಗರದಲ್ಲಿ ಈ ರೇಷ್ಮೆಯ ಮೇಲೆಯೇ ಹಲವಾರು ರೈತ ಸಂಸಾರಗಳು ತಮ್ಮ ಸರ್ವಸ್ವವನ್ನೂ ಕೂಡ ಹಾಕಿದ್ದಾರೆ. ಅದೂ ಒಂದು ರೀತಿಯ ಇನ್‌ವೆಸ್ಟ್‌ಮೆಂಟ್. ಇವತ್ತು ಸುಮಾರು 40 ಮೈಲಿಯ ಫಾಸಲೆಯಲ್ಲಿ ರೇಷ್ಮೆ ಬೆಳೆಗೆ ಆಗಿರತಕ್ಕಂಥ ನಷ್ಟ ಎಷ್ಟು ಎಂದು ನೋಡುವುದಾದರೆ, ಒಂದು ಅಂದಾಜನ್ನು ಸರ್ಕಾರದವರು ತಯಾರು ಮಾಡಬೇಕಾಗಿದೆ. ಇಂಥ ದುರಂತಗಳಿಗೆ, ಆಗಿಂದಾಗ್ಗೆ, ನಮ್ಮ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದಲೇ ಅಲ್ಲದೆ, ಸಾಧಾರಣವಾಗಿ ನಮ್ಮ ದೇಶದಲ್ಲಿ ಎಲ್ಲಿಯೇ ಒಂದು ದುರಂತವಾದರೂ ಕೂಡ, ಪ್ರಧಾನ ಮಂತ್ರಿಗಳೂ ಸಹ ತಮ್ಮ "ಪ್ರಧಾನ ಮಂತ್ರಿಗಳ ಪರಿಹಾರ ನಿಧಿ" ಯಿಂದ ಆಗಾಗ್ಯೆ ಸಹಾಯ ಮಾಡತಕ್ಕಂಥಾದ್ದನ್ನು ನಾವು ಚೆನ್ನಾಗಿ ಬಲ್ಲೆವು. ಇವತ್ತಿನ ದಿವಸ ಮೈಸೂರು ಸರ್ಕಾರದವರು ಲಕ್ಷಾಂತರ ರೂಪಾಯಿನ ನಷ್ಟವನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಾಗದೆ ಹೋದರೂ ಕೂಡ, ಪ್ರಧಾನ ಮಂತ್ರಿಗಳ ಪರಿಹಾರ ಧನದಿಂದ ಕೊಂಚಮಟ್ಟಿಗೆ ಪರಿಹಾರವನ್ನು ಶೀಘ್ರವಾಗಿ ಸರ್ಕಾರದವರು ಕೋರಿ ಅಲ್ಲಿಯ ಜನಕ್ಕೆ ಅನುಕೂಲ ಮಾಡಿಕೊಡಬೇಕು. ಎಂದು ನಾನು ಈ ಸಮಯದಲ್ಲಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಮುಂದೆಯೂ ಕೂಡ ಇಂಥ ಅತಿವೃಷ್ಟಿಯಿಂದ ಬೇಕಾದಷ್ಟು ಡ್ಯಾಮೇಜ್ ಆಗಬಹುದು. ಅತಿ ವೃಷ್ಟಿಯಿಂದ ಈಗಾಗಲೇ ಆಗಿರತಕ್ಕಂಥ ನಷ್ಟ ಕೊಂಚವಲ್ಲ. ಇನ್ನು ಮುಂದೆಯೂ ಕೂಡ ಹಲವಾರು ಮನೆಗಳು ಅನಾವೃಷ್ಟಿ ದೆಸೆಯಿಂದ ಕುಸಿದು ಹೋಗತಕ್ಕಂಥ ಸಂದರ್ಭಗಳು ಒದಗಬಹುದು ಎಂದು ನಾನು ಹೇಳುತ್ತೇನೆ. ಆದ್ದರಿಂದ ಇನ್ನು ಮುಂದೆಯೂ ಕೂಡ ಈ ದುರಂತದ ರೂಪು ರೇಖೆ ಎಷ್ಟು ಉಗ್ರವಾಗಬಹುದು ಅನ್ನತಕ್ಕಂಥಾದ್ದನ್ನು ಸರ್ಕಾರದವರು ಕೂಡಲೇ ವಿವೇಚನೆ ಮಾಡಬೇಕು, ವಿಮರ್ಶೆ ಮಾಡಬೇಕು ಎಂದು ಹೇಳುತ್ತೇನೆ. ಒಂದು ಸಮಸ್ಯೆ ಏನೆಂದರೆ ರಾಮನಗರದಲ್ಲಿ ಪ್ರವಾಹ ಬಂದಾಗ ಸಂಬಂಧಪಟ್ಟ ಅಧಿಕಾರಿಗಳು ಜನಕ್ಕೆ ಸಾಕಾದಷ್ಟು ಮುಂಜಾಗ್ರತೆ ಕೊಡಲಿಲ್ಲ, ಅಥವ ಕೊಟ್ಟಿದ್ದರೂ ಮುಂಜಾಗ್ರತೆ ಕೊಟ್ಟ ಕಾಲ ಸರಿಯಿಲ್ಲವೆಂಬ ಒಂದು ವಾದವೂ ಕೂಡ ಇದೆ. ಅದರ ನಿಜವಾದ ಸಂಗತಿಗಳು ನಮಗೆ ತಿಳಿದಿಲ್ಲ. ಯಾರನ್ನೂ ಟೀಕೆ ಮಾಡುವ ದೃಷ್ಟಿಯಿಂದ ಸರ್ಕಾರದ ಮುಂದೆ ಇಧನ್ನು ಇಡುತ್ತ ಇಲ್ಲ. ಆದರೂ ಕೂಡ ನಿಜವಾದ ಸ್ಥಿತಿಯನ್ನು ತಿಳಿದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಕೂಡಲೆ ಸರ್ಕಾರದ ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ, ರೈತರಿಗೆ ಮೊದಲೇ ಮುಂಜಾಗ್ರತೆ ಕೊಡುವುದಕ್ಕೆ ಸಾಧ್ಯವಿತ್ತೇ ಇರಲಿಲ್ಲವೇ ಎಂಬುದನ್ನು ವಿಮರ್ಶೆ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಈ ಪರಿಹಾರ ಕ್ರಮಗಳನ್ನು ತೀವ್ರ ರೀತಿಯಲ್ಲಿ ಏರ್ಪಾಡು ಮಾಡಬೇಕು. ವಿಳಂಬವಾದರೆ ಅದರಿಂದ ಈಗ ಆಗಿರತಕ್ಕಂಥ ನಷ್ಟಕ್ಕೆ ಇನ್ನೂ ಹೆಚ್ಚು ಅವಕಾಶ ಕೊಟ್ಟಂತೆ ಆಗುತ್ತದೆ. ಆದ್ದರಿಂದ ಶಾಶ್ವತವಾದಂಥ ಪರಿಹಾರ ಕಾರ್ಯಗಳನ್ನು ಏರ್ಪಾಡು ಮಾಡುವ ಮೊದಲು ತಕ್ಷಣದಲ್ಲಿ ತಾತ್ಕಾಲಿಕವಾಗಿ ಏನಾದರೂ ಒಂದು ರೀತಿಯ ಪರಿಹಾರವನ್ನು ಜನರಿಗೆ ಒದಗಿಸಬೇಕು ಎಂದು ನಾನು ಬಹು ನಮ್ರತೆಯಿಂದ ಸರ್ಕಾರದವರ ಮುಂದೆ ಈ ಕೆಲವು

(ಶ್ರೀ ಎಸ್. ಎಂ. ಕೃಷ್ಣ)

ವಿಚಾರಗಳನ್ನು ಇಟ್ಟಿದ್ದೇನೆ. ಸರ್ಕಾರ ಈ ಎಲ್ಲ ವಿಚಾರಗಳಲ್ಲಿಯೂ ಕೂಡ ಬಹಳ ಜಾಗ್ರತೆಯಿಂದ ತೀವ್ರಗತಿಯಲ್ಲಿ ಪ್ರವಾಹ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ಆಶಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಸ್ವಾಮಿ, ಮಾನ್ಯ ಸಭಾಪತಿಗಳೆ,—ಈಗಾಗಲೆ ನನ್ನ ಮೂರು ಜನ ಮಿತ್ರರುಗಳು ಇತ್ತೀಚೆಗೆ ಸಂಭವಿಸಿದ ಪ್ರವಾಹದ ವಿಚಾರದಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಅದರಲ್ಲಿಯೂ ರಾಮನಗರ ಕ್ಷೇತ್ರದ ಸದಸ್ಯ ಶ್ರೀಮಾನ್ ಮಾದಯ್ಯಗೌಡರವರು ಅರ್ಕಾವತಿ ಪ್ರವಾಹದಲ್ಲಿ ಎಷ್ಟರಮಟ್ಟಿನ ನಷ್ಟವನ್ನು ಜನತೆ ಅನುಭವಿಸಿದ್ದಾರೆ ಅನ್ನುವ ವಿಷಯವನ್ನು ತುಂಬ ವಿವರವಾಗಿ ತಿಳಿಸಿದ್ದಾರೆ. ಆ ಪ್ರವಾಹದ ದಿವಸ ನಾನೂ ಸಹ ಆ ಊರಿಗೆ ಭೇಟಿ ಕೊಡುವಂಥ ಸಂದರ್ಭ ಒದಗಿತ್ತು. ಅಂತಹ ಪ್ರವಾಹವನ್ನು ನಾನು ಹಿಂದೆಂದೂ ನೋಡಿರಲಿಲ್ಲ. ನಾನು ಹೋಗಿ ನೋಡಿದ ವೇಳೆ ಸುಮಾರು 4 ಗಂಟೆ ಸಮಯದಲ್ಲಿ ತುಂಬು ಪ್ರವಾಹವಿತ್ತು. ಆ ಸಂದರ್ಭದಲ್ಲಿ ನಮ್ಮ ಎಲ್ಲಾ ಇಲಾಖೆಗಳ ಸ್ಥಳೀಯ ಸರ್ಕಾರಿ ಅಧಿಕಾರಿಗಳು, ಮುನಿಸಿಪಾಲಿಟಿಯವರು, ಮತ್ತು ಜನತೆ ಪ್ರವಾಹದಿಂದ ನೊಂದಿರುವವರಿಗೆ ಎಷ್ಟರ ಮಟ್ಟಿಗೆ ಪರಿಹಾರ ಮತ್ತು ರಕ್ಷಣೆ ಕೊಡಬೇಕೋ ಅಷ್ಟನ್ನೂ ಅವರು ಬಹಳ ಮುತುವರ್ಜಿಯಿಂದ ಅವರ ಕರ್ತವ್ಯ ಮಾಡುತ್ತಿದ್ದುದನ್ನು ನೋಡಿ ನನಗೆ ನಿಜವಾಗಿಯೂ ಸಂತೋಷವಾಯಿತು. ಅವರು ಕಷ್ಟಕ್ಕೆ ಒಳಗಾದವರಿಗೆಲ್ಲಾ ಸಹಾಯ ಮಾಡುತ್ತಾ ಇದ್ದರು. ಕೂಡಲೆ ನಾನು ಸ್ಥಳದಲ್ಲಿದ್ದ ಅಧಿಕಾರಿಗಳನ್ನು ಮತ್ತು ಸಬ್ ಡಿವಿಜನ್ ಆಫೀಸರನ್ನೂ ಹೋಗಿ ಭೇಟಿ ಮಾಡಿದೆ. ಅವರು ನಮ್ಮ ಸರ್ಕಾರಕ್ಕೆ ಸಂಬಂಧಪಟ್ಟ ಇಲಾಖೆಯವರಿಗೇ ಅಲ್ಲದೆ, ವರ್ತಮಾನ ಪತ್ರಿಕೆಗಳಿಗೂ ವಿಷಯಗಳನ್ನು ಕಳುಹಿಸುವುದಕ್ಕೆ ಬಹಳ ಪ್ರಯತ್ನ ಪಟ್ಟರು. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಒಂದು ವಿಷಯವನ್ನು ಹೇಳಿದರು ಆಶ್ಚರ್ಯ. ರಾಮನಗರದಲ್ಲಿ ಅಷ್ಟು ಅನಾಹುತವಾಗಬೇಕಾದರೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಅನಿರೀಕ್ಷಿತವಾಗಿ ನೀರು ಬಿಟ್ಟದ್ದೇ ಹೆಚ್ಚಿನ ಕಾರಣ ಅಂತ ಹೇಳಿದರು. ಅದರಲ್ಲಿ ಇಂಜನಿಯರುಗಳೇ ಕಾರಣರು ಎಂದು ಅರ್ಥ ಬರುವ ಹಾಗೆ ಅವರು ತಿಳಿಸಿದರು. ಅದಕ್ಕೆ ನಾನು ನಿಸ್ಸಂದೇಹವಾಗಿ ಯಾವ ಅನುಮಾನವೂ ಇಲ್ಲದೆ ಹೇಳುತ್ತೇನೆ. ಆ ಅನಾಹುತ ಇಂಜಿನಿಯರುಗಳು ಮಾಡಿದ ತಪ್ಪಿನಿಂದಲ್ಲ. ಪ್ರಕೃತಿಯ ವಿಕೋಪವೇ ಪ್ರವಾಹಕ್ಕೆ ಕಾರಣ ಎಂದು ನನ್ನ ಅಭಿಪ್ರಾಯ.

Mr. SPEAKER.—Now the House will adjourn for recess and meet at 3-30 P.M.

---

*The House adjourned for recess at Three of the Clock and re-assembled at Thirty Minutes past Three of the Clock.*

---

[Mr. SPEAKER in the Chair.]

ಶ್ರೀ ಬಿ. ಜೆ. ಲಿಂಗೇಗೌಡ.—ಸ್ವಾಮಿ,......

Mr. SPEAKER.—Before Sri Linge Gowda begins, I suggest if he has got anything to say in regard to Kanva also, that should be included here because it is wide enough and because there is not going to be a separate debate on Kanva.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ತುಮಕೂರಿನಲ್ಲಿ ಕೂಡ ಪ್ರವಾಹದ ಹಾವಳಿ ಜಾಸ್ತಿಯಾಗಿದೆ. ಅದರ ಬಗ್ಗೆ ಮಾತನಾಡಲು ನನಗೆ ಸ್ವಲ್ಪ ಅವಕಾಶ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಜೆ. ಲಿಂಗೇಗೌಡ.—ಸ್ವಾಮಿ, ನೆಲಮಂಗಲ ತಾಲ್ಲೂಕಿನಲ್ಲಿ 4-5 ಕೆರೆಗಳು ಒಡೆದುದರ ಪರಿಣಾಮವಾಗಿ ತಿಪ್ಪಗೊಂಡನಹಳ್ಳಿಯ ಜಲಾಶಯಕ್ಕೆ ಹೆಚ್ಚಿಗೆ ನೀರು ಅನಿರೀಕ್ಷಿತವಾಗಿ ಬಂದ ಕಾರಣ ತಿಪ್ಪಗೊಂಡನಹಳ್ಳಿಯ ಜಲಾಶಯದ ಗೇಟುಗಳನ್ನು ನಮ್ಮ ಎಂಜಿನಿಯರುಗಳು ತೆರೆಯಬೇಕಾದ ಸಂದರ್ಭ ಒದಗಿದ್ದನ್ನು ನಾನು ತಿಳಿಸಿದೆ. ಆ ಕಾರಣದಿಂದ ಅರ್ಕಾವತಿಯಲ್ಲಿ ಪ್ರವಾಹ ಹಿಂದೆಂದೂ ಆಗದ ರೀತಿಯಲ್ಲಿ ಹೆಚ್ಚಿಗೆ ಬಂದು ತುಂಬಾ ಅನಾಹುತವನ್ನುಂಟು ಮಾಡಿತೆಂದು ನಾನು ಹೇಳಿದೆ. ಇದರ ವರ್ತಮಾನ ರಾಮನಗರಕ್ಕೆ ಸುಮಾರು 10 ಗಂಟೆಗೆ ತಲಪಿತು. ಕೂಡಲೆ ಮುನಿಸಿಪಾಲಿಟಿಯವರು, ರೆವಿನ್ಯೂ ಇಲಾಖೆಯವರು ಟಾಂ ಟಾಂ ಮೂಲಕ ಪ್ರವಾಹ ಸಂಭವಿಸುವ ವಿಷಯದ ಬಗ್ಗೆ ಎಷ್ಟರಮಟ್ಟಿಗೆ ಜನಗಳಿಗೆ ತಿಳುವಳಿಕೆ ಕೊಡಬೇಕೋ ಅಷ್ಟು ತಿಳುವಳಿಕೆಯನ್ನು ಅನೇಕ ವೇಳೆ ಕೊಟ್ಟರೂ ಸಹ ಆ ಜನಗಳು ಎಚ್ಚೆತ್ತುಕೊಳ್ಳಲಿಲ್ಲ. ಇದಕ್ಕೆ ಕಾರಣ ಇಷ್ಟೆ. ಇಂಥ ಹೆಚ್ಚಿನ ಪ್ರವಾಹ ಸಂಭವಿಸುವುದನ್ನು ಅವರು ಹಿಂದೆಂದೂ ಕೇಳಿರಲಿಲ್ಲ. ಬಹುಶಃ ಮುಂದೆ ಅನುಭವಿಸದೆ ಇರಬಹುದು. ಅವರು, ಸಾಧಾರಣವಾಗಿ ಹಿಂದೆ ಬರುತ್ತಿದ್ದ ರೀತಿಯಲ್ಲಿ ಪ್ರವಾಹ ಬರುತ್ತಿದೆ ಎನ್ನುವ ರೀತಿಯಲ್ಲಿ ನಡೆದುಕೊಂಡಿದ್ದರಿಂದ, ಇಷ್ಟೊಂದು ಹೆಚ್ಚಿನ ಅನಾಹುತಕ್ಕೆ ಈಡಾಗುವ ಪರಿಸ್ಥಿತಿ ಒದಗಿತು. ಈ ಪ್ರವಾಹ ಮತ್ತು ಈ ಅನಾಹುತಕ್ಕೆಲ್ಲಾ ಪ್ರಕೃತಿಯೇ ಕಾರಣವೆಂದು ಹೇಳಬಹುದೇ ಹೊರತು ಎಂಜಿನಿಯರುಗಳಾಗಲೀ, ಸರ್ಕಾರದವರಾಗಲೀ ಜವಾಬ್ದಾರರಲ್ಲವೆಂಬಂಶವನ್ನು ಮತ್ತೊಮ್ಮೆ ನಾನು ಬಿನ್ನವಿಸಿಕೊಳ್ಳಲು ಇಷ್ಟಪಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಂದರೆ ಅಲ್ಲಿನವರು ಏನೂ ಕಷ್ಟಕ್ಕೊಳಗಾಗಿಲ್ಲವೇ ?

ಶ್ರೀ ಬಿ. ಜೆ. ಲಿಂಗೇಗೌಡ.—ಶ್ರೀಮಾನ್ ಮಾದೇಗೌಡರು ಅಲ್ಲಿನ ಜನತೆ ಎಷ್ಟು ಕಷ್ಟನಷ್ಟವನ್ನು ಅನುಭವಿಸಿದ್ದಾರೆ ಎಂಬುದನ್ನೆಲ್ಲಾ ವಿಶದವಾಗಿ ಹೇಳಿದ್ದಾರೆ. ಅದರಲ್ಲಿ ಸುಳ್ಳು ಯಾವುದೂ ಇಲ್ಲ. ಒಟ್ಟಿನಲ್ಲಿ ಜನರು ನಿಜವಾಗಿಯೂ ಬಹಳ ಕಷ್ಟಕ್ಕೊಳಗಾಗಿದ್ದಾರೆ. ಇದಕ್ಕೆ ಸರ್ಕಾರದವರೂ ಸಹ ಎಷ್ಟು ಪರಿಹಾರವನ್ನು ಒದಗಿಸಬಹುದೋ, ಅಷ್ಟು ಪರಿಹಾರವನ್ನು ಒದಗಿಸುವುದಕ್ಕೆ ಮನಸ್ಸು ಮಾಡುತ್ತಾರೆ. ಈಗಾಗಲೇ ಈ ಬಗ್ಗೆ ಕಾರ್ಯಕ್ರಮಗಳನ್ನು ಗೊತ್ತುಪಡಿಸಿಕೊಂಡು ಸಹ ಇದ್ದಾರೆ. ಆದ್ದರಿಂದ ಅವರ

ಕಷ್ಟದ ವಿಷಯವನ್ನು ನಾನೇನೂ ಮರೆಮಾಚಿ ಹೇಳುತ್ತಿಲ್ಲ. ಆದರೆ ನಾನು ಹೇಳುವುದಿಷ್ಟೆ. ನಮ್ಮ ಮಿತ್ರರು 'ಒಂದುಕೋಟಿ ರೂಪಾಯಿಗಳ ನಷ್ಟವಾಗಿದೆ ಯೆಂದು ಹೇಳಿದರು. ಬಹುಶಃ ಅವರೂ ಕೂಡ ಸರಿಯಾದ ಅಂಕಿಅಂಶಗಳನ್ನು ಪಡೆದುಕೊಂಡು ಹೇಳಿಲ್ಲ. ಅಂದಾಜಿನ ಮೇಲೆ ಒಂದು ಕೋಟಿ ಎಂದು ಹೇಳಿದ್ದಾರೆಂದು ನಾನು ಭಾವಿಸುತ್ತೇನೆ. ಏಕೆಂದರೆ ನನಗೆ ತಿಳಿದ ಮಟ್ಟಿಗೆ 15-20 ಲಕ್ಷ ರೂಪಾಯಿಗಳು ನಷ್ಟವಾಗಿರಬಹುದು. ಈ ಅಂಶವನ್ನು ಅಧಿಕಾರಿಗಳು ಕೂಡಲೆ ವಿಮರ್ಶೆಮಾಡಿ ಎಷ್ಟರಮಟ್ಟಿನ ಅನಾಹುತ ಈ ಪ್ರವಾಹದಿಂದ ಉಂಟಾಗಿದೆಯೆಂಬುದನ್ನು ಕಂಡು ಹಿಡಿದು ತಕ್ಕ ಪರಿಹಾರವನ್ನು ಒದಗಿಸಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಸರ್ಕಾರಕ್ಕೆ ಬಡತನವೇನೂ ಇಲ್ಲ. ಹೆಚ್ಚಿಗೆ ಕೊಡಲಿ.

ಶ್ರೀ ಬಿ. ಜೆ. ಲಿಂಗೇಗೌಡ.—ನಾವು ಬೇರೆ ಅಲ್ಲ. ಆದ್ದರಿಂದ ಸರ್ಕಾರಕ್ಕಿಂತ ಹೆಚ್ಚಿಗೆಯಾಗಿ, ಮಾನ್ಯ ಸದಸ್ಯರೆಲ್ಲರೂ ಯಾವ ಪಾರ್ಟಿಗೇ ಅವರು ಸೇರಿರಲಿ—ಎಲ್ಲರೂ ತಮ್ಮ ಸಹಕಾರವನ್ನೂ ಮತ್ತು ದೇಶದ ಜನತೆಯ ಸಹಕಾರವನ್ನೂ ಕೋರಿ ಅವರುಗಳು ಎಷ್ಟು ಹೆಚ್ಚುದಾನಮಾಡುತ್ತಾರೋ ಆ ಹಣ ತೆಗೆದುಕೊಂಡು ಅಲ್ಲಿ ಪ್ರವಾಹದಿಂದ ನೊಂದಿರುವವರಿಗೆ ಹಂಚಿದರೆ, ಬಹುಶಃ ಹೆಚ್ಚಿನ ನೆರವು ನೀಡಿದಂತಾಗುತ್ತದೆಂದು ನಾನು ಹೇಳುತ್ತೇನೆ. ಅದು ಬಿಟ್ಟು, ಸರ್ಕಾರದವರೇ ಎಲ್ಲವನ್ನು ಕೊಟ್ಟುಬಿಡಲಿ ಎಂದು ಹೇಳಿದರೆ—ಈಗ ತಮ್ಮ ಮುಂದೆ ಟ್ಯಾಕ್ಸೇಷನ್ ಬಿಲ್ಲುಗಳು ಬರಲಿವೆ. ಅಂಥ ಬಿಲ್ಲುಗಳನ್ನೂ ಇನ್ನೂ ಹೆಚ್ಚಿಗೆ ಮಾಡಿ ಅವರು ಹಣ ಒದಗಿಸಿಕೊಂಡು ನೊಂದವರಿಗೆ ಸಹಾಯ ಮಾಡಬೇಕಾಗುತ್ತೆ ಅಷ್ಟೆ. ಅದಕ್ಕೆ ಬದಲಾಗಿ ನಾವು ನಮ್ಮ ಕರ್ತವ್ಯವನ್ನು ಮಾಡಿದರೆ, ಬಹುಶಃ ಸರಕಾರದವರು ಅವರ ಪಾಲಿನ ಕರ್ತವ್ಯವನ್ನು ಮಾಡಲು ಹಿಂಜರಿಯುವುದಿಲ್ಲವೆಂದು ನಾನು ಭಾವಿಸಿದ್ದೇನೆ ಮತ್ತು ಸರ್ಕಾರದವರು ನೊಂದವರಿಗೆ ಅವರ ಸಹಾಯ ಮಾಡಿಯೇ ಮಾಡುತ್ತಾರೆ.

ಆ ವಿಷಯ ಬೇರೆ. ಈಗ ನಮ್ಮ ವಿರೋಧ ಪಕ್ಷದ ನಾಯಕರು ನಿನ್ನೆ ದಿವಸ ಮಾತನಾಡುತ್ತ 6-7 ಮಂತ್ರಿಗಳು ರಾಮನಗರಕ್ಕೆ ಭೇಟಿ ಕೊಟ್ಟ ವಿಷಯವನ್ನು ಪ್ರಸ್ತಾಪಮಾಡಿ, ಪ್ರವಾಹವನ್ನು ನೋಡುವುದಕ್ಕೆ ಹೋಗಿ, ಇಲ್ಲಿ ಅವರು ಮಾಡಬಹುದಾದ ಕೆಲಸ ಮೊಟಕಾಯಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದೇ ಇಂದು ಮಾತನಾಡಿದ ನಮ್ಮ ಮಾನ್ಯ ಮಿತ್ರರಾದ ಶ್ರೀ ಎಸ್. ಎಂ. ಕೃಷ್ಣಅವರು ಮಂತ್ರಿಗಳು ಕೂಡಲೇ ರಾಮನಗರ ಮತ್ತು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟುದುದನ್ನು ಒತ್ತಿ ಹೇಳಿ ಬಹಳ ಸಂತೋಷಪಟ್ಟರು. ಇಂತಹ ಮನೋಭಾವ ನಮ್ಮಲ್ಲಿ ಮೂಡಬೇಕು. ಅದು ಮೂಡಿದರೆ, ಬಹುಶಃ ನಮ್ಮ ದೇಶದ ಒಕ್ಕೆಯ ಕಾರ್ಯಗಳು ಸುಗಮವಾಗಿ ಆಗುವುದಕ್ಕೆ ಸಹಾಯಮಾಡುತ್ತದೆಂದು ನಾನು ಭಾವಿಸುತ್ತೇನೆ. ವಿರೋಧಪಕ್ಷದ ನಾಯಕರು ತಾವು ಸ್ವತಃ ಭೇಟಿ ಕೊಟ್ಟರೆಂದು ಕೇಳಿ ನನಗೆ ಸಂತೋಷವಾಯಿತು. ಅವರು ಜೀಪಿನಲ್ಲಿ ಹೋಗುತ್ತಿದ್ದುದನ್ನು ನಾನೂ ಮಾರ್ಗದಲ್ಲಿ ನೋಡಿದೆ. ಅವರನ್ನು ಸಂದರ್ಶಿಸಲಿಕ್ಕೆ ಸನ್ನೆ ಮಾಡಿದೆ. ಅವರೂ ಸಹ ಈ ವಿಚಾರದಲ್ಲಿ ಎಷ್ಟು ಕಾತುರರಾಗಿದ್ದರೆಂಬುದು ನೋಡಿ ನನಗೆ ಸಂತೋಷವಾಯಿತು. ಅಂಥಹವರು ಪ್ರವಾಹ ಸಂಭವಿಸಿದ ದಿವಸ ರಾಜಧಾನಿಯಲ್ಲಿ ಮಾನ್ಯ ಮಂತ್ರಿಗಳೆಲ್ಲರೂ ಅಲ್ಲಿನ ಜನತೆ ಎಷ್ಟು ಕಷ್ಟಕ್ಕೊಳಗಾಗಿದ್ದರೆಂಬುದನ್ನು ನೋಡಲು ಬಂದಿದ್ದನ್ನೂ ಸಹ ತಪ್ಪೆಣಿಸುತ್ತಾರೆಂದು ನಾನಾದರೂ ನಂಬಿರಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮಂತ್ರಿಗಳೆಲ್ಲಿ ಪ್ರವಾಹಕ್ಕೆ ಸಿಕ್ಕಿ ಸಾಯುತ್ತಾರೋ ಎಂದು ಹೆದರಿಕೆಯಿಂದ.

ಶ್ರೀ ಬಿ. ಜೆ. ಲಿಂಗೇಗೌಡ.—ಶ್ರೀಮಾನ್ ಕೃಷ್ಣರವರು ಮತ್ತೊಂದು ವಿಷಯ ಹೇಳಿದರು. ಅದೇನೆಂದರೆ............

ಶ್ರೀ ಎಸ್. ಶಿವಪ್ಪ.—ಮಾನ್ಯ ಸದಸ್ಯರು ರಾಮನಗರದ ವಿಷಯ ಹೇಳುತ್ತಿದ್ದಾರೋ ಅಥವಾ ಸರ್ಕಾರದ ಪರವಾಗಿ ಉತ್ತರಕೊಡುತ್ತಿದ್ದಾರೋ ?

ಶ್ರೀ ಬಿ. ಜೆ. ಲಿಂಗೇಗೌಡ.—ಮುಂದುವರೆದು ಸರ್ಕಾರದವರು ರಚನೆ ಮಾಡಿದ ಪರಿಹಾರ ಸಮಿತಿಯಲ್ಲಿರುವ ಅಧಿಕಾರಿಗಳು ಮತ್ತು ಖಾಸಗಿಯವರು ಸರಿಯಾಗಿ ಹೊಂದಾಣಿಕೆಯಿಂದ ಕೆಲಸಮಾಡುತ್ತಿಲ್ಲ. ಅಲ್ಲಿ ಅವರವರಲ್ಲೇ ಜಿಜ್ಞಾಸೆ ಹುಟ್ಟಿದೆಯೆಂದು ಮಾನ್ಯ ಸದಸ್ಯರು ತಿಳಿಸಿದರು. ಅದು ಅವರ ತಪ್ಪು ಅಭಿಪ್ರಾಯ. ಆ ಪರಿಹಾರ ಸಮಿತಿಯ ಸದಸ್ಯರಲ್ಲಿ ನಾನೂ ಒಬ್ಬ. ಈ ವಿಷಯದಲ್ಲಿ ಒಂದಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಆ ಸಮಿತಿ ಸರ್ಕಾರದವರು ರಚಿಸಿದುದಲ್ಲ. ಮಂತ್ರಿಗಳು ಅಲ್ಲಿಗೆ ಬಂದಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ಅಲ್ಲಿನ ಮುಖಂಡರುಗಳು ಒಂದು ಸಮಿತಿಯನ್ನು ಮಾಡಿ ನೊಂದ ಜನಗಳಿಗೆ ತಕ್ಷಣದ ಪರಿಹಾರ ಒದಗಿಸಬೇಕೆಂದು ಪ್ರಯತ್ನಪಟ್ಟರು. ಮಂತ್ರಿಗಳ ಅಭಿಪ್ರಾಯವನ್ನೂ ಕೇಳಿದರು. ಅವರು ಆಗಬಹುದು ಎಂದು ಹೇಳಿದರು. ಅದರ ಮೇಲೆ ಸ್ಥಳದಲ್ಲಿದ್ದ ಜನರೆಲ್ಲಾ ಸೇರಿ ಇಂಥ ಒಂದು ಸಮಿತಿಯನ್ನು ರಚನೆ ಮಾಡಿಕೊಂಡರು.

ಇಂಥಾ ಸಮಿತಿಯೊಂದು ರಚನೆಯಾಗಲು ಮಂತ್ರಿಗಳು ಕೂಡ ಸಹಾಯಮಾಡಬೇಕಾಯಿತು. ಈ ಸಮಿತಿಯಲ್ಲಿರುವ ಸದಸ್ಯರೆಲ್ಲರೂ ಉತ್ತಮ ಸೇವೆ ಮಾಡಿದ್ದಾರೆ. ಈಗಾಗಲೇ ಈ ಸಮಿತಿಯು ಒಂದು ಸಭೆ ಸೇರಿ ಏನೇನು ಕೆಲಸ ಮಾಡಬೇಕೋ ಅದನ್ನೆಲ್ಲ ತೀರ್ಮಾನ ಮಾಡಿಕೊಂಡಿದ್ದಾರೆ. ಅದರಲ್ಲಿ ಯಾವ ತೊಡರು ಇಲ್ಲ. ಈಗಾಗಲೇ ಆರೇಳು ಸಾವಿರ ರೂಪಾಯಿ ಕೂಡಿಸಿ ಕಷ್ಟದಲ್ಲಿರುವ ಜನಕ್ಕೆ ಸ್ವಲ್ಪ ಹಣ ಹಂಚಿದ್ದಾರೆ. ಇದು ಸಂತೋಷದ ವಿಷಯ. ನಾನು ತಮ್ಮೆಲ್ಲರಲ್ಲೂ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ತಾವು ದೊಡ್ಡ ಮನಸ್ಸು ಮಾಡಿ ಸಮಿತಿಯವರು ಏರ್ಪಡಿಸಿರುವ ಫಂಡಿಗೆ ಸಹಾಯ ಮಾಡಬೇಕೆಂಬುದು.

ಸ್ವಾಮಿ, ಅರ್ಕಾವತಿ ನದಿಯಲ್ಲಿ ಉಂಟಾದ ಪ್ರವಾಹದ ವಿಚಾರದಲ್ಲಿ ಇಷ್ಟು ಹೇಳಿ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಕಣ್ವಾ ಜಲಾಶಯ ನಿರ್ಮಾಣವಾದಂದಿನಿಂದಲೂ ಇಷ್ಟು ಎತ್ತರ ನೀರು ಇದುವರೆಗೆ ಬಂದಿರಲಿಲ್ಲ. ಈ ಜಲಾಶಯಕ್ಕೆ 107 ಅಡಿ ನೀರು ಬಂದರೆ ಹೆಚ್ಚಿನ ನೀರು ಸೈಫನ್ ಮೂಲಕ ಹೊರಗೆ ಬರಬೇಕಾಗಿತ್ತು. 107 ಅಡಿ ಮೇಲೆ 3 ಅಡಿ ನೀರು ಹೆಚ್ಚಿಗೆ ಬಂದರು ಸೈಫನ್‌ಗಳು ಸರಿಯಾಗಿ ಕೆಲಸ ಮಾಡಲಿಲ್ಲ. ಆದ್ದರಿಂದ ನಮ್ಮ ತಾಲ್ಲೂಕಿನ ಜನತೆಗೆಲ್ಲರಿಗೂ ಕುತೂಹಲವುಂಟಾಯಿತು. ಒಂದು ವೇಳೆ ಕಣ್ವಾ ಜಲಾಶಯ

(ಶ್ರೀ ಬಿ. ಕೆ. ಲಿಂಗೇಗೌಡ)

ಅಪಘಾತಕ್ಕೊಳಗಾಗಿದ್ದರೆ 40-50 ಹಳ್ಳಿಗಳು ಮುಳುಗಿಹೋಗುತ್ತಿದ್ದವು. ಹತ್ತಾರು ಸಾವಿರ ಎಕರೆ ಜಮೀನು ಮುಳುಗಡೆಯಾಗಿ ಹಾಳಾಗುತ್ತಿತ್ತು. ಈ ವಿಷಯವನ್ನು P.W.D. ಅಧಿಕಾರಿಗಳು ಮತ್ತು ಮಂತ್ರಿಗಳ ಗಮನಕ್ಕೆ ತಂದಕೂಡಲೇ ಮುತುವರ್ಜಿಯಿಂದ ದೊಡ್ಡ ದೊಡ್ಡ ಅಧಿಕಾರಿಗಳು ಬಂದು ಪರಿಶೀಲನೆ ಮಾಡಿ ಏನು ಪರಿಹಾರ ಒದಗಿಸಬೇಕು ಎನ್ನುವುದನ್ನು ದೀರ್ಘವಾಗಿ ಆಲೋಚನೆ ಮಾಡಿದರು. ಸಂಬಂಧಪಟ್ಟ P.W.D. ಮಂತ್ರಿಗಳೂ ಸಹ ಬಂದು ನೋಡಿದರು. ಕಣ್ವಾ ಜಲಾಶಯದಲ್ಲಿ ಸೈಫನ್ಸ್ ಸ್ಥಾಪನೆ ಮಾಡುವುದಕ್ಕೆ ಯಾರು ಜವಾಬ್ದಾರರಾಗಿದ್ದರೋ ಅವರು ಅಂದರೆ ಶ್ರೀಮಾನ್ ಗಣೇಶ ಅಯ್ಯರ್‌ರವರು ಸಹ ಅಲ್ಲಿಗೆ ಬಂದು ಎಲ್ಲವನ್ನೂ ಪರಿಶೀಲಿಸ ತಕ್ಕ ಸಲಹೆ ಸೂಚನೆಗಳನ್ನು ಮಾಡಿದರು. ಇನ್ನೂ ಹೆಚ್ಚಿನ ನೀರು ಬಂದರೂ ಸಹ ಜಲಾಶಯಕ್ಕೆ ಏನೂ ತೊಂದರೆಯಿಲ್ಲಾ ಮತ್ತು ಗಾಬರಿಪಡಬೇಕಾಗಿಲ್ಲ ಎಂದು ಹೇಳಿದರು. ಅನಂತರ ನಮ್ಮ ಇಡೀ ತಾಲ್ಲೂಕಿನ ಜನರಿಗೆ ಮೂಡಿದ ಕುತೂಹಲವನ್ನು ಕಮ್ಮಿ ಮಾಡಿತು. ಸ್ವಾಮಿ, ಬಹಳ ಹಿಂದಿನಕಾಲದ ಸೈಫನ್ ಪದ್ಧತಿ ಪರಿಶೀಲನೆ ಮಾಡುವ ಕಾಲ ಸನ್ನಿಹಿತವಾಗಿದೆ. ಈ ಜಲಾಶಯದಲ್ಲಿ ಹಾಲಿ ಇರುವ ಸೈಫನ್‌ಗಳ ಜೊತೆಗೆ ಒಂದೆರಡು ಗೇಟುಗಳನ್ನು ಇಟ್ಟು ಹೆಚ್ಚಿನ ನೀರು ಹೊರಗೆ ಹೋಗುವದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಣ್ವಾ ಜಲಾಶಯಕ್ಕೆ ಒದಗಿದ್ದ ಅಪಾಯವನ್ನು ತಪ್ಪಿಸಲು ಎಲ್ಲಾ ಇಲಾಖೆಗಳ ಅಧಿಕಾರಿಗಳು ಸ್ಥಳದಲ್ಲಿದ್ದು ಸೇವೆ ಸಲ್ಲಿಸಿದ್ದಾರೆ. ಆದ ದರಿಂದ ಈ ಸಂದರ್ಭದಲ್ಲಿ ಅವರಿಗೂ ಮತ್ತು ಸರಕಾರಕ್ಕೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ತಮ್ಮ ಮೂಲಕ ಅರ್ಪಿಸುತ್ತೇನೆ.

†ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಮಾನ್ಯ ಸಭಾಪತಿಗಳೇ, ಪ್ರವಾಹದ ಹಾವಳಿಯ ವಿಚಾರದಲ್ಲ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಈ ಚಿತ್ರವನ್ನು ಚೆನ್ನಾಗಿ ಬಣ್ಣಿಸಿದ್ದಾರೆ. ನಮ್ಮ ಮಾಗಡಿ ತಾಲ್ಲೂಕು ಬೆಟ್ಟಗುಡ್ಡಗಳ ಪ್ರದೇಶವಾಗಿದೆ. ಎರಡು ಹೊಳೆಗಳು ನಮ್ಮ ತಾಲ್ಲೂಕಿನಲ್ಲಿ ಹರಿಯುತ್ತವೆ. ಅವು ಕಣ್ವಾ ಮತ್ತು ಅರ್ಕಾವತಿ. ತಿಪ್ಪಗೊಂಡನಹಳ್ಳಿ ಜಲಾಶಯ ಮಾಗಡಿ ತಾಲ್ಲೂಕಿನಲ್ಲಿದೆ. ಆಮೇಲೆ ಕಣ್ವಾ ಜಲಾಶಯ ಕಟ್ಟಿಕೊಂಡರು. ಆದರೂ ಸಹ ನಮ್ಮ ತಾಲ್ಲೂಕಿಗೆ ಈ ಯೋಜನೆಗಳಿಂದ ನೀರು ದೊರೆಯುವದಿಲ್ಲ. ಆಕಾಶದಿಂದ ಬರುವ ಮಳೆಯಿಂದ ಭೂಮಿಯಲ್ಲಿ ಬರುವ ಬೆಳೆಯ ಮೇಲೆ ನಂಬಿಕೊಂಡಿರಬೇಕಾಗಿದೆ. ಮಳೆಯಿಲ್ಲದೆ ಅಭಾವ ಪ್ರದೇಶವಾಗಿದೆ. ಆದ್ದರಿಂದ ಗ್ರ್ಯಾಂಟ್ ಒದಗಿಸಿಕೊಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ನೆಲಮಂಗಲ ತಾಲ್ಲೂಕಿನಲ್ಲಿ ಹೆಚ್ಚು ಮಳೆಯಾಗಿ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ಜಾಸ್ತಿ ಬಂದು ನಮ್ಮ ತಾಲ್ಲೂಕಿನಲ್ಲಿಯ ಜಮೀನು ಕೊಚ್ಚಿಕೊಂಡು ಹೋಗುತ್ತದೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಒಳ್ಳೇ ಫಲವತ್ತಾದ ಭೂಮಿ ಉಳಿದಿರುವದಿಲ್ಲ. ಬೆಟ್ಟಗುಡ್ಡದ ಪ್ರದೇಶವಾಗಿರುವುದರಿಂದ ಸರಿಯಾದ ರಸ್ತೆಗಳಿಲ್ಲ. ಆದ್ದರಿಂದ ನಮ್ಮ ತಾಲ್ಲೂಕಿಗೆ ಮಂತ್ರಿಗಳಾಗಲಿ, ಪತ್ರಿಕಾಪ್ರತಿನಿಧಿಗಳಾಗಲಿ ಹೋಗುವುದಿಲ್ಲ. ಯಾಕಂದರೆ ಅಲ್ಲ ನಡೆದುಕೊಂಡೇ ಹೋಗಬೇಕಾಗುತ್ತದೆ. ಮೊನ್ನೆ ಉಪಮಂತ್ರಿಗಳೊಬ್ಬರು ಬಂದು ಸ್ವಲ್ಪ ಭಾಗ ಮಾತ್ರ ನೋಡಿಕೊಂಡು ಹೋದರು. ನಮ್ಮ ತಾಲ್ಲೂಕಿನಲ್ಲಿ ನೀರಿನ ಅನುಕೂಲವಿಲ್ಲದ್ದರಿಂದ 20-30 ಬಾವಿಗಳನ್ನು ತೆಗೆದು ಭೂಮಿಗೆ ನೀರು ಒದಗಿಸುತ್ತಿದ್ದಾರೆ. ಆದರೆ ಈಗ ಪ್ರವಾಹ ಬಂದು ಭೂಮಿಯಲ್ಲಿಯ ಬೆಳೆ ಕೊಚ್ಚಿಕೊಂಡು ಹೋಗಿದೆ. ಬಾವಿಗಳಿಗೆ ನಷ್ಟವುಂಟಾಗಿದೆ. ರೈತರಿಗೆ ಕಷ್ಟ ಉಂಟಾಗಿದೆ. ಸರಕಾರದವರು ಮಾಗಡಿ ತಾಲ್ಲೂಕಿನ ರೈತರಿಗೆ ಪರಿಹಾರ ಒದಗಿಸುತ್ತಾರೆಯೋ? ಅಧಿಕಾರಿಗಳು ಬಂದು ನೋಡಿದ್ದಾರೆ. ಅಧಿಕಾರಿಗಳಿಗೆ ಒಂದು ತಿಂಗಳು ಸಂಬಳ ದೊರೆಯದೇ ಹೋದರೆ ಏನಾದರೂ ಮಾಡಿ ಸಾಲ ತಂದು ಒಂದೆರಡು ತಿಂಗಳು ಹೇಗಾದರೂ ಮಾಡಿ ಬಂದ ಕಷ್ಟವನ್ನು ಪರಿಹರಿಸಬಹುದು. ಆದರೆ ಒಂದು ಎಕರೆ ಭೂಮಿಯನ್ನು ಇಟ್ಟುಕೊಂಡು ಸಾಗುವಳಿ ಮಾಡುವ ಬಡರೈತನು, ಭೂಮಿಯಲ್ಲಿಯ ಬೆಳೆ ನಷ್ಟವಾದರೆ ಏನು ಮಾಡಬೇಕು? ಈ ವರ್ಷ ಫಸಲು ದೊರೆಯುವದಿಲ್ಲ. ಒಂದು ವರ್ಷ ಸಾಗುವಳಿ ಮಾಡಿ ಮುಂದಿನ ವರ್ಷದ ಫಸಲು ಬರುವವರೆಗೆ ನಿರೀಕ್ಷಣೆ ಮಾಡಬೇಕಾಗುತ್ತದೆ. ಇಂಥ ಕಷ್ಟದ ಪರಿಸ್ಥಿತಿ ರೈತರಿಗೆ ಉದ್ಭವಿಸಿದೆ. ಇದನ್ನು ಬೇಗನೆ ಪರಿಶೀಲಿಸಿ ಬಡ ರೈತರಿಗೆ ಪರಿಹಾರ ಒದಗಿಸಿ ಸಹಾಯ ಮಾಡಬೇಕಾಗಿದೆ.

ಶ್ರೀಮಾನ್ ಕೃಷ್ಣಪ್ಪನವರು ರೈತ ಕುಟುಂಬದಲ್ಲಿ ಹುಟ್ಟಿದವರು. ರೈತರ ಕಷ್ಟವೇನೆಂಬುದು ಅವರಿಗೆ ಗೊತ್ತಿದೆ. ಮುಖ್ಯವಾಗಿ ನಮ್ಮ ತಾಲ್ಲೂಕಿನಲ್ಲಿ ಆಗಿರುವ ಪರಿಸ್ಥಿತಿ ಏನೆಂದರೆ ಹಳ್ಳದ ಎರಡು ಪಕ್ಕಗಳಲ್ಲಿಯೂ ಗ್ರಾಮಗಳಿವೆ. ನಮ್ಮ ಕಡೆ ಇರುವ ಒಂದು ಪದ್ಧತಿ ಎಂದರೆ ನೆಲದಲ್ಲಿ ಮಾಡಿರುವ ಕಣಜಗಳಲ್ಲಿ ದವಸವನ್ನೂ ಕೂಡಿಡುತ್ತಾರೆ. ಪ್ರವಾಹ ಬಂದುದರಿಂದ ಇವುಗಳಲ್ಲಿದ್ದ ದವಸವೆಲ್ಲ ಕೆಟ್ಟುಹೋಗಿ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲದೆ ನೂರಾರು ಪಲ್ಲ ದವಸ ನಷ್ಟವಾಗಿದೆ. ಸರ್ಕಾರದವರು ಎಲ್ಲವನ್ನೂ ಗಣನೆಗೆ ತೆಗೆದುಕೊಂಡು, ಆದಷ್ಟು ಜಾಗ್ರತೆ ಸ್ಥಳವನ್ನು ಪರಿಶೀಲಿಸಬೇಕು. ರಸ್ತೆ ಕೆಟ್ಟುಹೋಗಿ ಕಾರಿನಲ್ಲಿ ಪ್ರಯಾಣ ಮಾಡಲು ಸಾಧ್ಯವಿಲ್ಲದಿರುವುದರಿಂದ ಜೀಪಿನಲ್ಲಿ ಪ್ರಯಾಣ ಮಾಡಿ ಅಥವಾ ನಡೆದುಕೊಂಡಾದರೂ ಹೋಗಿ ಪರಿಶೀಲಿಸಬೇಕು. ಆ ಭಾಗದ ಜನರ ಕಷ್ಟಸುಖಗಳನ್ನು ಶ್ರೀಮಾನ್ ಮಾದಯ್ಯಗೌಡರು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದು ಅಲ್ಲಿ ಆಗಿರುವ ಕಷ್ಟನಷ್ಟಗಳನ್ನು ನೋಡಿ ಪರಿಹಾರವನ್ನು ಕೊಡುವ ಏರ್ಪಾಡು ಮಾಡಬೇಕು. ಇಷ್ಟೇ ಪರಿಹಾರವನ್ನು ಕೊಡಬೇಕೆಂದು ಹೇಳುವುದು ಕಷ್ಟ. ಅಲ್ಲಿ ಆಗಿರುವ ಕಷ್ಟನಷ್ಟಗಳನ್ನು ನೋಡಿ ಅವರು ಮುಂದೆ ಬೆಳೆ ಬರುವವರೆಗೂ ಜೀವನವನು ನಡೆಸುವುದಕ್ಕೆ ಅವಕಾಶವಾಗುವಂತೆ ಪರಿಹಾರವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(*Sri K. H. Ranganath rose*).—

Mr. SPEAKER.—I wish to know whether there has been flood havoc in Mudigere this year?

Sri M. V. KRISHNAPPA (Minister for Revenue).—Not now, Sir. In the beginning fo this year when the monsoon started, there were same floods.

Mr. SPEAKER.—Because I would like to give time to those Members

representing the areas and constituencies where there has been great havoc. Not that I minimise the importance of the contribution that others also can make.

Sri M. C. BASAPPA (Chamarajanagar).—In my case, I have signed the representation given by Sri Madiah Gowda. There was flood havoc this time in Chamarajanagar taluk.

Mr. SPEAKER.—Then the hon. Member can speak now. I will decide about others later. If there is anybody who wants to contribute to the debate and make suggestions to the Government on the subject, I would like to give them chances.

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಸಭಾಪತಿಗಳೇ, ಈ ದಿನ ಚಾಮರಾಜನಗರ ಕ್ಷೇತ್ರದ ಒಬ್ಬ ಪ್ರತಿನಿಧಿ ಆ ಕ್ಷೇತ್ರದಲ್ಲಿ ಪ್ರವಾಹದ ಹಾವಳಿಯಿಂದ ನಷ್ಟವಾಗಿದೆ ಎಂದರೆ ಅನೇಕ ಜನಗಳಿಗೆ ಆಶ್ಚರ್ಯವಾಗಬಹುದು. ಕಾರಣವಿಷ್ಟೆ, ಈಗ್ಗೆ ಒಂದು ತಿಂಗಳಿಗೆ ಸರಿಯಾಗಿ ಕಳೆದ ತಿಂಗಳು ಹತ್ತನೆಯ ತಾರೀಖು ಮಾನ್ಯ ರೆವೆನ್ಯೂ ಸಚಿವರನ್ನು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಬೇಕು, ಮಳೆಯಿಲ್ಲದೆ ಬಹಳ ಅಭಾವವುಂಟಾಗಿದೆ ಎಂದು ನಾವು ಕರೆದುಕೊಂಡುಹೋಗಿ ತೋರಿಸಿದ ಮೇಲೆ ಅವರು ಸರ್ಕಾರದಿಂದ ಕೆಲವು ರಿಯಾಯಿತಿಗಳನ್ನು ಕೊಡಬೇಕು, ಪರಿಹಾರ ಕ್ರಮಗಳನ್ನು ಹುಡುಕಬೇಕೆಂದು ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳಿಗೆ ತಿಳುವಳಿಕೆಯನ್ನು ಕೊಡುವಷ್ಟರಲ್ಲಿಯೇ ಈ ಒಂದು ಸಂಭವ ಒದಗಿದೆ.

Sri C. J. MUCKANNAPPA (Sira).—He is Rishyasringar!

ಶ್ರೀ ಎಂ. ಸಿ. ಬಸಪ್ಪ.—ಹಾಗೆ ಹೇಳಿದರೂ ತಪ್ಪಾಗಲಾರದು.

ಕಳೆದ ತಿಂಗಳು 29, 30 ಮತ್ತು 31ನೆಯ ತಾರೀಖುಗಳಲ್ಲಿ ನಮ್ಮ ತಾಲ್ಲೂಕಿನಲ್ಲಿ ವಿಶೇಷವಾದ ಮಳೆಯಾಯಿತು. ನಮ್ಮ ತಾಲ್ಲೂಕಿನ ಸನ್ನಿವೇಶವನ್ನು ನೋಡುವುದಾದರೆ, ಅದು ಬಿಳಿಗಿರಿರಂಗನ ಬೆಟ್ಟದ ತಪ್ಪಲನಲ್ಲಿದೆ. ಈ ಬೆಟ್ಟದ ಮೇಲೆ ಬಿದ್ದಂಥ ನೀರೆಲ್ಲವೂ ನಮ್ಮ ತಾಲ್ಲೂಕಿನ ಬಹುಭಾಗದಲ್ಲಿ ಹರಿದು ಹೋಗಬೇಕಾಗಿದೆ. ಅಲ್ಲಿ ಸುವರ್ಣಾವತಿ ಎಂದು ಕರೆಯುತಕ್ಕ ಒಂದು ನದಿಯಿದೆ. ಇದಕ್ಕೆ ಅಡ್ಡಗಟ್ಟೆಯನ್ನು ಹಾಕಿ ಮೂರು ನಾಲ್ಕು ಸಣ್ಣ ಕಾಲುವೆಗಳನ್ನು ನದಿಯ ಎರಡು ಪಕ್ಕದಲ್ಲಿ ತೆಗೆದು ಸುಮಾರು ಏಳೆಂಟು ಸಾವಿರ ಎಕರೆ ತರೀ ಆಗತಕ್ಕ ಕಾಮಗಾರಿಯನ್ನು ಮಾಡಿ ಜನಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಪ್ರದೇಶದಲ್ಲಿ ಸುವರ್ಣಾವತಿ ಪ್ರಾಜೆಕ್ಟ್ ಕಟ್ಟಬೇಕೆಂದು ಇಲಾಖೆಯವರು investigation ನಡೆಸಿ ಅದಕ್ಕೆ ಸುಮಾರು ಒಂದು ಕೋಟಿ ಹದಿನಾರು ಲಕ್ಷ ರೂಪಾಯಿ ಖರ್ಚಾಗುತ್ತದೆ ಮತ್ತು ಅದರಿಂದ ಆರು ಸಾವಿರ ಎಕರೆ ನೀರಾವರಿಯಾಗುವುದಲ್ಲದೆ ಹನ್ನೊಂದು ಸಾವಿರ ಎಕರೆ ಹಳೆಯ ಅಚ್ಚುಕಟ್ಟಿಗೆ ನೀರನ್ನು ಕೊಡಬಹುದು. ಇದಲ್ಲದೆ ಈ ಪ್ರಾಜೆಕ್ಟನ್ನು ಕಟ್ಟುವ ಉದ್ದೇಶವಾದರೂ ಇಷ್ಟೆ. ಪ್ರತಿ ವರ್ಷ ಲೋಕೋಪಯೋಗಿ ಶಾಖೆಯವರು ಸುವರ್ಣಾವತಿ minor channels ಎಂಬ 50 ಮೈಲಿ ನಾಲೆಗೆ ರಿಪೇರಿ ವಗೈರೆ ಮಾಡಬೇಕಾಗಿರುತ್ತೆ. ಕಾಮಗಾರಿ ಮಾಡಿದ ಮೇಲೆ ಒಂದೆರಡು ಮಳೆ ಬೆಟ್ಟದ ತಪ್ಪಲಲ್ಲಿ ಬಿದ್ದಾಗ ಮಳೆಯ ನೀರು ಬರುವುದರಿಂದ ಅವರು ದುರಸ್ತು ಮಾಡಿದ ನಾಲೆಗಳು ಕೊಚ್ಚಿಹೋಗಿ ಪ್ರತಿ ವರ್ಷ ಒಂದೆರಡು ಲಕ್ಷ ರೂಪಾಯಿ ಖರ್ಚು ಮಾಡಿ annual repairs ಎಂದು ಮಾಡುತ್ತಾರೆ. ಈ ಪ್ರಾಜೆಕ್ಟನ್ನು ಕಟ್ಟುವುದರಿಂದ ವರ್ಷಂಪ್ರತಿ ಆಗುವ ನಾಲಾ ರಿಪೇರಿಗೆ ಖರ್ಚು ಮಾಡುವ ಹಣವನ್ನು ಕೂಡ ಉಳಿಸಿದ ಹಾಗೆ ಆಗುತ್ತದೆ. ಪ್ರವಾಹದಿಂದ ಆಗತಕ್ಕ ಈ ತೊಂದರೆಯನ್ನು ಸಾಮಾನ್ಯವಾಗಿ ತಡೆಗಟ್ಟಬಹುದು ಎನ್ನುವ ಉದ್ದೇಶದಿಂದ ಸುವರ್ಣಾವತಿ ಪ್ರಾಜೆಕ್ಟ್ ಆಗಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕಾಗುವುದಿಲ್ಲ. ಬಹುಶಃ ಹೇಮಾವತಿ, ಕಂಬದಕಡ ಇಂಥ ಪ್ರಾಜೆಕ್ಟ್‌ಗಳನ್ನು ಬಿಡತಕ್ಕ ಸಂದರ್ಭ ಬಂದಾಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡೋಣವೆಂದು ಹೇಳಿದರು.

ಇತ್ತೀಚೆಗೆ ಮಳೆ ಬಂದಮೇಲೆ, 20 ದಿವಸದ ಕೆಳಗೆ ನಾಟಿಹಾಕಿದ್ದ ಭತ್ತದ ಪೈರು ಎಲ್ಲಾ ಹಾಳಾಗಿ ರೈತರಿಗೆ ಸ್ವಲ್ಪ ಕಷ್ಟವಾಗಿದೆ. ಈ ಪ್ರದೇಶದಲ್ಲಿ ನಾಲೆಗಳನ್ನು ದುರಸ್ತು ಮಾಡಿ ನೀರು ಸರಬರಾಜು ಮಾಡಿಕೊಟ್ಟರೆ ಅವರಿಗೆ ಭತ್ತದ ಬೆಳೆ ತೆಗೆಯಲು ಅನುಕೂಲವಾಗುತ್ತದೆ. ಇಲ್ಲದೆಹೋದರೆ ಸಾಧ್ಯವಾಗುವುದಿಲ್ಲವೆಂದು ಸರ್ಕಾರದ ಗಮನಕ್ಕೆ ಸಭಾಪತಿಗಳ ಮೂಲಕ ತರುತ್ತೇನೆ.

ಹರವೆ ಹೋಬಳಿ ಎಂದು ಒಂದು ಪ್ರದೇಶವಿದೆ. ಇದು ಬೆಂಗಾಡಿಗೆ ಸಂಬಂಧಪಟ್ಟ ಪ್ರದೇಶ. ಅಲ್ಲಿ ಕೆರೆಹಳ್ಳಿ ಎಂಬ ಒಂದು ಕೆರೆಯಿದೆ. ಸುಮಾರು 800 ಎಕರೆ ಜಮೀನು ಅದರಿಂದ ನೀರಾವರಿಯಾಗುತ್ತದೆ. ಕಳೆದ ಸಾಲಿನಲ್ಲಿ ಈ ಕೆರೆಯಲ್ಲಿ leakages ಇದ್ದು, ಕೆರೆಕಟ್ಟೆ ಒಡೆಯಬಹುದು ಎನ್ನುವ ಭಯ ಬಂದಾಗ ಜನಗಳು ಅಮಲ್ದಾರರಿಗೆ ಅರ್ಜಿಗಳನ್ನು ಬರೆದರು. ಅವರು ಇಲಾಖೆಯವರಿಗೆ ತಿಳಿಸಿದ ಮೇಲೆ ಅವರು ಬಂದು ರಿಪೇರಿ ಮಾಡಿದರು. ಹಾಗೆ ರಿಪೇರಿ ಮಾಡುವಾಗ ಕೋಡಿಯನ್ನು ಒಡೆಯದೆ ಇದ್ದರೆ ಕೆರೆ ಏರಿಯನ್ನು ಸರಿಪಡಿಸುವುದಕ್ಕಾಗುವುದಿಲ್ಲವೆಂದು ಕೋಡಿಯನ್ನು ಒಡೆದು ಕಟ್ಟೆಯನ್ನು ದುರಸ್ತು ಮಾಡಿ ಪುನಃ ಕೋಡಿಯನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿದರು. ಆಗ ಗ್ರಾಮಸ್ಥರೂ, ಅಚ್ಚುಕಟ್ಟುದಾರರೂ ಒಂದು ಅರ್ಜಿ ಕೊಟ್ಟು ಕೆರೆ ಏರಿಯಲ್ಲಿ ಇನ್ನೂ leakages ಇವೆ, ಇವನ್ನು ಸರಿಪಡಿಸದೆ ನೀವು ಕೋಡಿಯನ್ನು ಮುಚ್ಚಿದರೆ ಈ ಸಲ ಮಳೆ ಬಂದಾಗ ಕೆರೆ ಹೋಗತಕ್ಕ ಸಂಭವವಿದೆ. ಆದ್ದರಿಂದ leakages ಇರುವುದನ್ನು ಮೊದಲು ರಿಪೇರಿ ಮಾಡಿ ನಂತರ ಕೋಡಿ ಮುಚ್ಚುವುದನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು. ಆದರೂ ಕೂಡ ಇಲಾಖೆಯವರು ಬಹಳ ನಿರ್ಲಕ್ಷ್ಯವಾಗಿ ಕಂಡು ಸರ್ಕಾರವಿದೆ, ಯಾವಾಗ ಬೇಕಾದರೂ ಮಾಡಿಕೊಡುತ್ತಾರೆ, ನಾವೇ ಮುಂದೆ ಮಾಡಿಕೊಡುತ್ತೇವೆಂದು ಹೇಳಿ ಕೋಡಿಯನ್ನು ಮುಚ್ಚಿದರು. ಅಚ್ಚುಕಟ್ಟುದಾರರು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅವರು

(ಶ್ರೀ ಎಂ. ಸಿ. ಬಸಪ್ಪ)

ನಿರ್ಲಕ್ಷ್ಯ ಮಾಡಿದ್ದರಿಂದ ಆ ಕೆರೆ ಏರಿ ಕಿತ್ತುಹೋಗಿ, ಅದರ ಕೆಳಗೆ 800 ಎಕರೆ ಅಚ್ಚುಕಟ್ಟಿನಲ್ಲಿದ್ದ ಬೆಳೆ ಎಲ್ಲ ನಷ್ಟವಾಗಿದೆ. ಈಗ ಇದನ್ನು ದುರಸ್ತು ಮಾಡ ಬೇಕಾದರೆ—ನಾನು technical man ಅಲ್ಲ, ಎಷ್ಟು ಖರ್ಚಾಗುತ್ತದೆಂದು ಹೇಳಲು ಸಾಧ್ಯವಾಗುವುದಿಲ್ಲ— ಒಂದು ಲಕ್ಷ ರೂಪಾಯಿ ಹತ್ತಿರ ಆಗಬಹುದು ಎಂದು ಅವರೇ ಹೇಳುತ್ತಾರೆ. ಇದರ ಪಕ್ಕದಲ್ಲಿ ಲೋಕೋಪ ಯೋಗಿ ಇಲಾಖೆಗೆ ಸೇರಿದ ಒಂದು ರಸ್ತೆ ಕೂಡ ಇದೆ. ಆ ರಸ್ತೆ ಸುಮಾರು 120 ಅಡಿ ಉದ್ದ ಎಂಟು ಅಡಿ ಆಳ ಕೊಚ್ಚಿಹೋಗಿದೆ. ಅಲ್ಲಿ ಯಾವ ವಾಹನವೂ ಹೋಗುವಹಾಗಿಲ್ಲ. ಆದಷ್ಟು ಬೇಗ ಇಲಾಖೆಯವರು ಇದರ ಕಾಮಗಾರಿಯನ್ನು ಕೈಗೊಳ್ಳಬೇಕು.

ಕೆರೆ ಒಡೆದುಹೋದಾಗ ಆ ಸ್ಥಳಗಳಿಗೆ ಎಕ್ಸಿಕ್ಯೂ ಟಿವ್ ಇಂಜಿನಿಯರ್ ಅವರನ್ನು ಕರೆದುಕೊಂಡು ಹೋದೆ. ಅಲ್ಲಿ ಸುವರ್ಣಾವತಿ ನದಿಗೆ ಮತ್ತು ಹಳ್ಳ ಗಳಿಗೆ ಸಣ್ಣ ಸಣ್ಣ pickups ಹಾಕಿದರೆ ಪ್ರವಾಹ ಬಂದಾಗ ರೈತರಿಗೆ ಅನುಕೂಲವಾಗುತ್ತದೆ, ಅವರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಿ ದಂತಾಗುತ್ತದೆ. ಎಂದು ತಿಳಿಸಿದೆ. ಸುಮಾರು ಹತ್ತು ವರ್ಷಗಳಿಂದ ಸಣ್ಣ ನೀರಾವರಿ ಕಾಮಗಾರಿ ಮಾಡಬೇಕು, ಹೆಚ್ಚಿಗೆ ಬರತಕ್ಕ ನೀರನ್ನು ತರೀ ವ್ಯವಸಾಯಕ್ಕೆ ಒದಗಿಸಿಕೊಡಬೇಕೆಂದು ಸರ್ಕಾ ರದ ಉದ್ದೇಶವಿದ್ದರೂ ಕೂಡ ಆ ಒಂದು ದಿಸೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿಗೆ ಪ್ರಗತಿಯಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. Pickups ಹಾಕಬೇಕು. ಅದರಿಂದ ಕೆರೆಗೆ ಉಂಟಾಗುವ ತೊಂದರೆಯನ್ನು ತಪ್ಪಿಸಬಹುದು ಎಂದು ಅವರವರೇ ಮಾತನಾಡಿ ಕೊಳ್ಳುತ್ತಿದ್ದರು. ಈ ಸಲದ ಪ್ರವಾಹದಲ್ಲಿ ಪಬ್ಲಿಕ್ ವರ್ಕ್ಸ್ ರಸ್ತೆಗಳು ಬಹಳ ಹಾಳಾಗಿವೆ ಮತ್ತು ಸುವರ್ಣಾವತಿ ನದಿಗೆ ಸೇರಿದಂಥ ಆಲೂರು, ಹೊಸ ಹಳ್ಳಿ ಮತ್ತು ಸುವರ್ಣಾವತಿ minor channels ಎಂದು ಏನು ಇವೆ ಇವು ಪುನಃ ದುರಸ್ತಿಯಾದ ಹೊರತು ಅಲ್ಲಿರುವ ತರೀ ಪ್ರದೇಶಕ್ಕೆ ವ್ಯವಸಾಯಕ್ಕೆ ನೀರನ್ನು ಕೊಡುವುದಕ್ಕಾಗುವುದಿಲ್ಲ.

4-00 P.M.

ಆದ್ದರಿಂದ ಇವುಗಳನ್ನು ಆದಷ್ಟು ಬೇಗ ಸರ್ಕಾರ ದವರು ರಿಪೇರಿ ಮಾಡಿಸಬೇಕು. ಕೆರೆಹಳ್ಳಿ ಕೆರೆ ಬ್ರೀಚ್ ಆದುದರಿಂದ ಇದರ ಆಸರೆಯಲ್ಲಿದ್ದ ಸುಮಾರು 800 ಎಕರೆಗಳಷ್ಟು ಅಚ್ಚುಕಟ್ಟುದಾರರುಗಳಿಗೆ ತರಿಯಾಗತಕ್ಕ ಫಸಲು ಹಾಳಾಗಿ ರೈತರಿಗೆ ಸುಮಾರು ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ತಿಳಿದುಬರುತ್ತದೆ. ಶ್ರೀಮಾನ್ ಮಾದೇಗೌಡರು ಕಣ್ಣಾರೆ ಕಂಡ ದೃಶ್ಯವನ್ನು ಈ ಬಗ್ಗೆ ಆಗಲೇ ಹೇಳಿದ್ದಾರೆ. ಅಲ್ಲದೆ ಇಲ್ಲಿ ಪಿ. ಡಬ್ಲ್ಯು. ಡಿ. ರಸ್ತೆ ಬಂದಿತ್ತು. ಅದು ಹೋಗಿ ಬರಲು ಬಹಳ ಸೌಕರ್ಯ ವಾಗಿತ್ತು. ಇದರ ಹತ್ತಿರದಲ್ಲಿ ಸುಮಾರು ನಾಲ್ಕೈದು ಎಕರೆ ಭೂಮಿಯಲ್ಲಿ ಸೊಗಸಾದ ಕಬ್ಬಿನ ಬೆಳೆ ಯಾಗಿತ್ತು. ಇನ್ನೇನು ಇದನ್ನೆಲ್ಲಾ ಆಲೆ ಮನೆಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಆದರೆ ಈ ಕೆರೆ ಇಲ್ಲಿ ಬ್ರೀಚ್ ಆದಮೇಲೆ ಅಲ್ಲಿ ಹೋಗಿ ನೋಡಿದರೆ ಕಬ್ಬಿನ ದಿಂಡುಗಳು ಕೂಡ ಇಲ್ಲ. ಬೇರು ಸಹಿತ ಪೂರ್ಣವಾಗಿ ಹಾಳಾಗಿ ಹೋಗಿದೆ. ಈ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಬಹಳ ನಷ್ಟವಾಗಿದೆ. Soil Elusion ನಿಂದ ಎಷ್ಟು ಜಮೀನು ನಷ್ಟ ವಾಗಿದೆ ಎನ್ನುವುದನ್ನು ಈಗಾಗಲೇ ರೆವಿನ್ಯೂ ಇಲಾಖೆಯವರು ಅಸೆಸ್ ಮಾಡುತ್ತಿದ್ದಾರೆ. ಅದನ್ನೆಲ್ಲಾ ನೋಡಿ ಸಾಧ್ಯವಾದಷ್ಟು ಸೂಕ್ತವಾದ ಪರಿಹಾರವನ್ನು ಕೊಡಬೇಕು. ಅಲ್ಲದೆ ನಾನು ಕೇಳಿ ಕೊಳ್ಳುವುದು, ಈಗ ಬ್ರೀಚ್ ಆಗಿರುವ ಕೆರೆಹಳ್ಳಿ ಟ್ಯಾಂಕನ್ನು ರೆಸ್ಟೋರು ಮಾಡುವುದು, ಮತ್ತು ಸುವರ್ಣಾವತಿ ಮೈನರು ಚಾನಲ್ಲುಗಳನ್ನು ದುರಸ್ತು ಮಾಡಿಸಿ ಮುಂದಿನ ಏಪ್ರಿಲ್ ವೇಳೆಗಾದರೂ ಕಾರು ಫಸಲನ್ನು ಮಾಡಲು ಸರ್ಕಾರ ತಕ್ಕ ಅನುಕೂಲ ಗಳನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ.

**Mr. SPEAKER.**—Much has been said against the Public Work Department. I would like to know whether the Hon'ble Minister or Deputy Minister for P. W. D. would like to participate.

**Sri ALUR HANUMANTHAPPA** (Deputy Minister for Minor Irrigation).—Yes, Sir. Only for about 20 minutes.

**Mr. SPEAKER.**—Then I have about twenty minutes more.

(*Sri Gopala Gowda rose*).

Is such a situation prevailing in the constituency of Sri Gopala Gowda ?

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).— ನಾನೂ ಈ ವಿಷಯದಲ್ಲಿ ಮಾತನಾಡ ಬೇಕೆಂದಿದ್ದೇನೆ

**Mr. SPEAKER.**—I never said that he was not entitled to speak. I would like to give a chance as far as possible to persons who are intimately connected and who have personal knowledge. Having regard to the time-factor, all members cannot participate.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮಾನ್ಯ ಅಧ್ಯಕ್ಷರೇ

(*Sri K. Lakkappa was found speaking.*)

**Mr. SPEAKER.**—I am afraid the Hon'ble Member is trying to catch my ears and not my eyes.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆ ಈ ಸಾರಿಯ ಪ್ರವಾಹಕ್ಕೆ ಸಿಕ್ಕಿದೆ.

**Mr. SPEAKER.**—Sri K. P. Revanna Siddappa will now speak.

**Sri K. LAKKAPPA.**—Sir, I have been standing a number of times.........

**Mr. SPEAKER.**—Am I not aware of that ? When I have called Sri Revanna Siddappa to speak why should Sri Lakkappa interject in this manner ?

**Sri K. LAKKAPPA.**—I only ask for a chance to speak.

**Mr. SPEAKER.**—Order, order.

†ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೆ, ಪ್ರವಾಹ ಎನ್ನುವುದು ಮೈಸೂರು ಸಂಸ್ಥಾನಕ್ಕೆ ಪದೇ ಪದೇ ಬರುತ್ತಿರುವುದಕ್ಕೆ ಕಾರಣ, ನಮ್ಮ ಸರಕಾರ ಹಿಂದೆ ರಾಜ ಮಹಾರಾಜರುಗಳಿಂದ ಕಟ್ಟಿಸಿದ ಕೆರೆಗಳನ್ನು ಜೀರ್ಣೋದ್ಧಾರ ಮಾಡದೇ ಇರುವುದು. ಅಲ್ಲದೆ, ಮೈನರ್ ಇರಿಗೇಷನ್ನು ಸಪ್ತಾಹ ಎಂದು ಮಾಡಿ ಪ್ರತಿ ವರ್ಷವೂ ಒಂದು ಪಟ್ಟಿಯನ್ನು ತಯಾರಿಸುತ್ತಿದ್ದರು. ಆ ಪಟ್ಟಿಯನ್ನು ತಯಾರು ಮಾಡಿದ ಮೇಲೆ ಅದರಂತೆ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದೇ ಇದಕ್ಕೆ ಕಾರಣ. ಅಲ್ಲದೇ ಈ ಸಪ್ತಾಹಗಳಲ್ಲಿದ್ದ ಮಾನ್ಯ ಸದಸ್ಯರುಗಳಿಗೂ ಗೌರವ ಹೋಗುತ್ತಿದೆ. ಈ ಸಪ್ತಾಹಗಳಿಗಾಗಿ ಆಗುವ ಖರ್ಚು ವ್ಯರ್ಥವಾಗುತ್ತದೆ. ಪ್ರವಾಹ ಬರುವುದಕ್ಕೆ ಕಾರಣ ವೇನೆಂದರೆ, ಸರಿಯಾದ ಇನ್‌ವೆಸ್ಟಿಗೇಷನ್ನು ಮಾಡದೆ ಅಣೆಕಟ್ಟು ಕಟ್ಟುವುದು, ಮತ್ತು ಇತರ ಭಾರಿ ಭಾರಿ ನೀರಾವರಿ ಯೋಜನೆಗಳನ್ನು ಮಾಡುತ್ತಿರುವುದು. ಇದಕ್ಕೆಲ್ಲಾ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಆ ಖರ್ಚಿಗೆ ತಕ್ಕಷ್ಟು ಪ್ರತಿಫಲ ಏನೂ ಬಂದಿಲ್ಲ ಎನ್ನುವುದನ್ನು ಈಗಲೂ ನೋಡಬಹುದು ತುಮಕೂರು ಕೆರೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಬ್ರೀಚ್ ಆಗುವ ಸಂಭವವಿದೆ ಎಂದು ಕಂಡು ಬಂದಿದ್ದರೂ ಅದಕ್ಕೆ ಅಲ್ಪ ಸ್ವಲ್ಪ ಕೆರೆ ರಿಪೇರಿ ಮಾಡಿಸುತ್ತಿದ್ದಾರೆ. ಈ ಕೆರೆಯ ಆಸರೆಯಲ್ಲೇ ಸುಮಾರು ಸಾವಿರಾರು ಬಡ ಕುಟುಂಬಗಳು ವಾಸ ಮಾಡುತ್ತಿವೆ ಎನ್ನುವುದು ಪಿ. ಡಬ್ಲ್ಯು. ಡಿ. ಇಲಾಖೆಗೂ ಗೊತ್ತಿದೆ. ಇಂತಹ ಕುಟುಂಬಗಳವರೂ ಕೂಡ ತಾವು ಎಂದಿದ್ದರೂ ನೀರಿನ ಪಾಲೇ ಎನ್ನುವ ಅನುಮಾನ ಅವರಿಗೆ ಬಂದಿದೆ. ಆದ್ದರಿಂದ ಸರಕಾರ ಈ ತೇಪೆ ಹಾಕುವ ಬುದ್ಧಿ ಬಿಟ್ಟು ನ್ಯಾಯವಾಗಿ, ಸಾರ್ಥಕವಾಗುವ ಹಾಗೆ ಕೆಲಸ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಎರಡನೆಯದಾಗಿ, ಎಂಜನಿಯರಿಂಗ್ ಇಲಾಖೆಯಲ್ಲಿ ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಏನೂ ಗ್ರಾಂಟಿಲ್ಲ. ಇದರ ಬಗ್ಗೆ ಯಾವ ಕೆಲಸಗಳನ್ನೂ ತಕ್ಷಣದಲ್ಲಿ ತೆಗೆದುಕೊಳ್ಳಕೂಡದು ಎಂದ ಸರ್‌ಕ್ಯುಲರುಗಳು ಎರಡು-ಮೂರು ದಿನಗಳಿಗೊಂದರಂತೆ ಬರುತ್ತಿವೆ. ಹೀಗಾದರೆ ಸಣ್ಣ ನೀರಾವರಿ ಕೆಲಸಗಳಿಗೆಂದು ಮೂರು ವರ್ಷಗಳವರೆಗೆ ಅಧಿಕಾರಿಗಳನ್ನು ನೇಮಿಸಿ ಅವರಿಗೆ ಸಂಬಳ ಸಾರಿಗೆಗಳನ್ನು ಕೊಟ್ಟು ಈಗ ದುಡ್ಡಿಲ್ಲ ಎಂದರೆ ಇಲ್ಲಿರುವ ಅಧಿಕಾರಿಗಳಿಗೆಲ್ಲಾ ಸುಮ್ಮನೆ ಸಂಬಳ ಕೊಡಬೇಕಾಗುತ್ತದೆ. ಆದುದರಿಂದ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಇದಕ್ಕೆ ತಕ್ಕಷ್ಟು ಹಣವನ್ನು ಒದಗಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಆಗಿರುವ ಅನಾಹುತಗಳನ್ನು ನೋಡಿದರೆ ತಿಪಟೂರಿನಲ್ಲೇ ಸುಮಾರು ಇಪ್ಪತ್ತೆಂಟು ಕೆರೆಗಳು ಒಡೆದು ಹೋಗಿವೆ. ಹೀಗೆ ಒಡೆದು ಹೋಗಿದ್ದರೂ ಕೆಲವು ಕಡೆಗಳಲ್ಲಿ ಚಿಕ್ಕ ಚಿಕ್ಕ ರಿಪೇರಿಗಳನ್ನು ಮಾಡಿ ಕೆಲವನ್ನು ಹಾಗೇ ಕೈಬಿಟ್ಟರು. ಹಾಗೇ ಸುಮಾರು ಇಪ್ಪತ್ತೈದು—ಮೂವತ್ತು ವರ್ಷಗಳಿಂದ ಒಡೆದು ಹೋಗಿರುವ ಕೆರೆಗಳ ಕಡೆ ಮೈಸೂರು ಸರಕಾರ ಗಮನವನ್ನೇ ಕೊಡುತ್ತಿಲ್ಲ. ಇದು ನಮ್ಮ ಸರಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ಸರಕಾರ ಗಮನ ಹರಿಸ ಬೇಕೆಂದು ಹೇಳುತ್ತೇನೆ. ಸಣ್ಣ ನೀರಾವರಿಯ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಬೇಕಾದಷ್ಟು ಭಾಷಣಗಳನ್ನು ಪ್ಲಾಟ್‌ಫಾರಂನಲ್ಲಿ ಕೊಡಬಹುದು, ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತಿಲ್ಲ. ಸಣ್ಣ ನೀರಾವರಿಯ ಕೆಲಸಗಳನ್ನು ಮಾಡಿದರೆ, ಜನಕ್ಕೆ ತಕ್ಷಣ ಉಪಯೋಗವಾಗುತ್ತದೆ ಎನ್ನುವುದನ್ನು ಸರಕಾರ ಮನಗಾಣಬೇಕು, ಸುಮ್ಮನೆ ಯೋಜನೆಗಳನ್ನು ಹಾಕಿಕೊಂಡು ದೆಹಲಿಯಿಂದ ಸೂಚನೆ ಬಂದಿದೆ ಎಂದು ಮಾಡಿದರೆ ಏನೂ ಉಪಯೋಗವಾಗುವುದಿಲ್ಲ. ಈಗಾಗಲೇ ಮೊದಲನೆ ಯೋಜನೆ, ಎರಡನೆ ಯೋಜನೆ ಮತ್ತು ಮೂರನೆ ಯೋಜನೆಗಳಿಗೆಂದು ಎಷ್ಟೋ ರೂಪಾಯಿಗಳನ್ನು ವೆಚ್ಚ ಮಾಡಿ ಇನ್ನೂ ಜಾಸ್ತಿ ಮಾಡಬೇಕೆಂದು ಹೇಳುತ್ತಿದ್ದಾರೆ. ಕೋಟಿಗಟ್ಟಲೆ ಹಣ ಖರ್ಚು ಮಾಡುವುದಕ್ಕಿಂತ ಸಾಮಾನ್ಯ ಜನಕ್ಕೆ ಸಹಾಯವಾಗುವ ಒಂದು ಚಿಕ್ಕ ಕಟ್ಟೆಯನ್ನು ಕಟ್ಟಿಸಿದರೆ ದೇಶದ ಜನರನ್ನು ಉದ್ಧಾರ ಮಾಡಿದ ಹಾಗಾಗುವುದಿಲ್ಲವೇ ? ನಮ್ಮಲ್ಲಿರುವ ಕೆಲವು ಕೆರೆಗಳು ರಿಪೇರಿ ಆಗಬೇಕಾಗಿವೆ. ನಮ್ಮಲ್ಲಿ ಎಡಹಳ್ಳಿ, ಕೆರೆ, ಹೊನ್ನವಳ್ಳಿ, ಹೋಬಳಿಯಲ್ಲಿನ ಕೆರೆ, ಬೊಮ್ಮೇನಹಳ್ಳಿ, ಕೆರೆ, ಹಾಗೇ ಇನ್ನೂ ಕೆಲವು ಕೆರೆಗಳು ರಿಪೇರಿ ಆಗದೆ ಇವೆ. ಈ ಕೆರೆಗಳನ್ನು ಪಿ. ಡಬ್ಲ್ಯು. ಡಿ. ಇಲಾಖೆಯವರು ಇದುವರೆಗೆ ನೋಡಿಯೇ ಇಲ್ಲ. ಮಾನ್ಯ ಮಂತ್ರಿಗಳು ಪ್ರವಾಸ ಬಂದ ಕಾಲದಲ್ಲಿಯೂ ಕೂಡ ಅವರ ಗಮನಕ್ಕೆ ಈ ವಿಚಾರಗಳನ್ನೆಲ್ಲಾ ತಗಲಾಯಿತು, ಆದರೂ ಸರಕಾರ ಇನ್ನೂ ಇದನ್ನು ಮನಸ್ಸಿಗೆ ತೆಗೆದುಕೊಂಡಿಲ್ಲ. ಆದಕಾರಣ ಈಗಲಾದರೂ ಈ ಕೆರೆಗಳ ರಿಪೇರಿ ಕೆಲಸವನ್ನು ಮಾಡಿಸಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಅಲ್ಲದೆ ಸಣ್ಣ ನೀರಾವರಿಗಾಗಿ ಗ್ರಾಂಟಿಲ್ಲ ಎಂದು ಹೇಳುವ ಶಬ್ದವನ್ನು ಚೀಫ್ ಇಂಜಿನಿಯರವರು ಇವತ್ತಿನಿಂದ ಬಿಟ್ಟು ಇಂತಹ ಸರ್‌ಕ್ಯುಲರನ್ನು ಕಳುಹಿಸಬೇಡಿ ಎಂದು ಸರ್ಕಾರ ಆರ್ಡರು ಮಾಡಬೇಕೆಂದು ಇಲ್ಲಿ ಒತ್ತಾಯದಿಂದ ಹೇಳಬಯಸುತ್ತೇನೆ.

ನಮ್ಮ ತಿಪಟೂರು ತಾಲ್ಲೂಕಿನ ಹೋದವರ್ಷದ ವಿಚಾರ ಹೀಗಾಯಿತು. ಆದರೆ ಈ ವರ್ಷ ಮೈಸೂರು ರಾಜ್ಯದಲ್ಲೆಲ್ಲಾ ವಿಪರೀತ ಮಳೆಯಾಗಿದ್ದರೆ ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಈ ಸರ್ತಿ ಮಳೆಯೇ ಬಾರದೆ ಕ್ಷಾಮ ಬರತಕ್ಕ ಪರಿಸ್ಥಿತಿ ಉಂಟಾಗಿದೆ. ಅದಕ್ಕಾಗಿ ಸರ್ಕಾರದವರು ಈಗಿಂದೀಗಲೇ ಅಲ್ಲಿ ರಿಲೀಫ್ ಕಾಂಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತೆ. ಆದುದರಿಂದ ಅಲ್ಲಿ ಯಾವ ಯಾವ ಕಾಂಗಾರಿಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಸರ್ಕಾರದವರೀಗಲೇ ಗಮನಕೊಡಬೇಕು. ನಮ್ಮ ಕ್ಷೇತ್ರದಲ್ಲಿ ಪದೇ ಪದೇ ಕ್ಷಾಮ ತಲೆದೋರುವುದಕ್ಕೆ ಕಾರಣ ವೇನೆಂಬುದಾಗಿ ಮಂತ್ರಿಗಳು ಕೇಳಬಹುದು. ಅದಕ್ಕೆ ನನ್ನ ಉತ್ತರವೇನೆಂದರೆ ವರ್ಷಾ ಖೈರಿನವರೆಗೂ 18ರಿಂದ 22 ಇಂಚುಗಳಿಗೆ ಜಾಸ್ತಿ ಮಳೆ ಬೀಳದ ಕೋಲಾರ ಜಿಲ್ಲೆಯ ಕೆಲವು ಭಾಗ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳು ಹೇಗೆ ಪದೇ ಪದೇ ಕ್ಷಾಮಕ್ಕೆ ತುತ್ತಾಗುತ್ತಿವೆಯೋ ಹಾಗೆಯೇ ಅದೇ ಕಾರಣಕ್ಕಾಗಿ ನಮ್ಮ ತಾಲ್ಲೂಕೂ ಕ್ಷಾಮಕ್ಕೀಡಾಗುತ್ತಿದೆ. ಈ ಹೊತ್ತು ಅನೇಕ ರಾಜಕೀಯ ಕಾರಣಗಳಿಂದ ಗೊರೂರು ಮತ್ತು ಹೇಮಾವತಿ ಅಣೆಕಟ್ಟುಗಳೇನಿದ್ದವು ಅವುಗಳನ್ನು ಇನ್ನೂ ಕಟ್ಟದೆ ಹಾಗೆ ಬಿಟ್ಟಿರುವುದರಿಂದಲೇ ಈ ಪ್ರವಾಹಗಳ ಹಾವಳಿ ಉಂಟಾಗುತ್ತಿದೆಯೆಂದು ನಾನು ಹೇಳಲಿಚ್ಛಿಸುತ್ತೇನೆ. ಈಗ ತಾನೆ ಮಾತನಾಡಿದ ಶ್ರೀ ಬಿ. ಜೆ. ಲಿಂಗೇಗೌಡರು ಪ್ರವಾಹದ ಹಾವಳಿಗೀಡಾಗಿದ್ದ ಪ್ರದೇಶಕ್ಕೆ ಅವರ ನಾಯಕರು ಭೇಟಿ ಕೊಟ್ಟಿದ್ದ ಕಾಲದಲ್ಲಿ ಅವರನ್ನು

(ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ)

ಇವರು ನಾಲ್ಕು ಐದು ಸಾರಿ ಕೈಬೀಸಿ ಕರೆದರೂ ಮಂತ್ರಿಗಳು ಅಲ್ಲಿ ನಿಲ್ಲದೆ ಹಾಗೇ ಹೊರಟು ಹೋದರೆಂದು ಹೇಳಿದರು. ನಮ್ಮ ನಾಯಕರುಗಳಿಗೆ ಪ್ರಜೆಗಳ ಮೇಲೆ ಅಷ್ಟು ಕೃತಜ್ಞತೆಯಿರುವುದರಿಂದಲೇ ಅವರು ಹಾಗೆ ಒಂದು ಸ್ಥಳದಲ್ಲೇ ನಿಲ್ಲದೆ ಮುಂದೆ ಹೊರಟುಹೋಗಿರಬಹುದೆಂದು ಕಾಣುತ್ತದೆ. ಇಷ್ಟು ವಿಚಾರ ತಿಳಿಸಲು ಅಧ್ಯಕ್ಷರು ನನಗಿಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಅಧ್ಯಕ್ಷರೇ: ನನಗೆ ಮಾತನಾಡಲು ಅವಕಾಶ ಸಿಗಲೆಂದು ನಾನು ಏನೋ ಹೇಳಿದೆ. ಆದರೆ ಈ ವರ್ಷ ನನ್ನ ಕ್ಷೇತ್ರದಲ್ಲಿ ಮಳೆ ಹಾವಳಿಯೇನೂ ಅಷ್ಟಾಗಿ ಆಗಿಲ್ಲ. ಆದರೆ ಅಲ್ಲಿ ಅಷ್ಟು ಮಳೆಯಾಗಿದೆಯೇ ಎಂಬ ಪ್ರಶ್ನೆ ಬಂದಿತ್ತು. ಕೆಲವು ಕಡೆ ಮಳೆ ಬಂದು ಅನಾಹುತವಾಗಿದ್ದರೆ, ಇನ್ನು ಕೆಲವು ಕಡೆ ಮಳೆಯಿಲ್ಲದೆ ಅನಾಹುತವಾಗಿದೆ. ಆದರೆ ಹೋದವರ್ಷ ಆದಷ್ಟು ಅನಾಹುತ ಈ ವರ್ಷ ಆಗಿಲ್ಲ. ಈಗ ನಾನು ಮುಖ್ಯವಾಗಿ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಹೋದ ವರ್ಷ ನಮ್ಮ ಮೂಡಿಗೆರೆ ತಾಲ್ಲೂಕಿನಲ್ಲಿ ಅತಿವೃಷ್ಟಿ ತೊಂದರೆಗೀಡಾಗಿದ್ದ ಜನಗಳಿಗೆ ಪರಿಹಾರ ನೀಡಲು ಆ ತಾಲ್ಲೂಕಿಗೆ 14–16ಲಕ್ಷ ರೂಪಾಯಿಗಳ ಸ್ಯೂದಗಿಸಲಾಗಿತ್ತು. ಆದರೆ ಆ ಪರಿಹಾರ ಬಡ ರೈತರಿಗೆ ಸರಿಯಾಗಿ ದೊರಕಲಿಲ್ಲ. ಆ ಪ್ರದೇಶದ ಬಹಳ ಭಾಗದಲ್ಲಿ ಗದ್ದೆ ಬೇಸಾಯ ಮಾಡಲಕ್ಕೆ ಇದ್ದ ಭೂಮಿಯೆಲ್ಲ ಮರಳಿನಿಂದ ತುಂಬಿ ಬೆಳೆಗೆ ಅವಕಾಶವಿಲ್ಲದಂತಾಗಿರುತ್ತದೆ. ಹೀಗಾಗಿ ಹೋದವರ್ಷದ ಲಾಗಾಯ್ತು ಈ ವರೆಗೂ ಅಲ್ಲಿ ಅನೇಕ ಜಮೀನುಗಳಲ್ಲಿ ಬೆಳೆ ತೆಗೆಯಲು ಅವಕಾಶವಾಗಿಲ್ಲ. ಆ ರೈತರಿಗೆ ಸರ್ಕಾರದವರು ನೀಡಿದ್ದ ಪರಿಹಾರ ಸಿಕ್ಕದೆ ಅವರಿಗೆ ಆ ಮರಳನ್ನು ತೆಗೆಸಲು ಸಾಧ್ಯವಾಗಿಲ್ಲ. ಇನ್ನು ಕೆಲವು ಕಡೆ ಕೆರೆಗಳ ತೂಬು ಒಡೆದು ಹೋಗಿವೆ. ಅವು ಇನ್ನೂ ದುರಸ್ತಿಯಾಗಿಲ್ಲ. ಹೀಗಾಗಿ ಆ ಕೆರೆಗಳಲ್ಲಿ ನೀರು ನಿಲ್ಲದೆ ಬೆಳೆ ತೆಗೆಯಲು ಸಾಧ್ಯವಾಗಿಲ್ಲ. ಇನ್ನು ಕೆಲವು ಕಡೆ ರಸ್ತೆಗಳು ಕೊಚ್ಚಿಹೋಗಿದ್ದವು. ಅವಿನ್ನೂ ದುರಸ್ತಿಯಾಗಿಲ್ಲ. ಈ ತೆರನಾದ ದುರಸ್ತಿ ಕಾಂಗಾರಿಗಳ ಅಗತ್ಯ ಕಸಬಾ ಹೋಬಳಿ, ಬಣಕಲೆ ಬಾಳೂರು ಮತ್ತು ಕಳಸ ಈ ಸ್ಥಳಗಳಲ್ಲಿ ಜಾಸ್ತಿಯಾಗಿದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಹೀಗೆ ಮಲೆನಾಡಿನಲ್ಲಿ ಈ ಹಾವಳಿಗೆ ಜನರು ತುತ್ತಾಗಲು ಕಾರಣವೇನೆಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಆದರೆ ಮಲೆನಾಡಿನಲ್ಲಿರತಕ್ಕ ಅರಣ್ಯವನ್ನು ವಿಶೇಷವಾಗಿ ಕಡಿದು ಹಾಕುತ್ತಿರುವುದರಿಂದ ನೆರೆ ಹಾವಳಿ ಹೆಚ್ಚಾಗುತ್ತಿದೆ, ಆದ್ದರಿಂದಲೇ, ಆ ಪ್ರದೇಶಗಳು ಈ ತೊಂದರೆಗೆ ತುತ್ತಾಗುತ್ತಿವೆ ಎಂಬುದಾಗಿ ಅಲ್ಲಿಯ ಅನುಭವಸ್ಥರು ಹೇಳುತ್ತಿದ್ದಾರೆ. ಈ ವಿಚಾರವನ್ನು ಸರ್ಕಾರದವರು ಕೂಡಲೆ ಪರಿಶೀಲನೆ ಮಾಡಬೇಕು. ಗುಡ್ಡಗಳಮೇಲಿನಿಂದ ಹರಿದು ಬರುವ ನೀರಿಗೆ ಅಡಿ ತಡೆಯಿಲ್ಲದೆ ಇರುವುದರಿಂದ ಆ ನೀರು ಬೇಸಾಯ ಮಾಡತಕ್ಕ ಜಮೀನುಗಳ ಮೇಲೆ ಮರಳನ್ನು ತಂದು ತುಂಬುತ್ತಿದೆ. ಆ ಮರಳನ್ನು ತೆಗೆಸಲು ಸರ್ಕಾರದವರು ರೈತರಿಗೆ ಸಾಕಷ್ಟು ಪರಿಹಾರ ನೀಡಬೇಕಾಗಿದೆ. ಆದರೆ ಸರ್ಕಾರದವರು ಕೊಡತಕ್ಕ ಪರಿಹಾರವೇನಿದೆ ಅದು ಒಂದು ವಿತರಣೆಯಿಂದ ವ್ಯವಸ್ಥೆಯಿಂದ ಜನಗಳಿಗೆ ಹಂಚಿಕೆ ಆಗುತ್ತಿಲ್ಲ. ಅನೇಕ ಬಡ ಜನಗಳಿಗೆ ಈ ಪರಿಹಾರ ಇನ್ನೂ ದೊರಕಿಲ್ಲ. ಜನರಿಗೆ ಹಂಚಲು ಹಣವಿದ್ದರೂ ಸಹ ಜಿಲ್ಲಾಧಿಕಾರಿಗಳು ಆ ಹಣವನ್ನು ಬಡ ರೈತರಿಗೆ ತೊಂದರೆಗೀಡಾದವರಿಗೆ ಹಂಚದೆ ಸರ್ಕಾರಕ್ಕೇ ಜಮಾ ಮಾಡಿದ್ದಾರೆಂಬ ವದಂತಿ ಅಲ್ಲೆಲ್ಲ ಹರಡಿದೆ. ಅದನ್ನು ರೆವಿನ್ಯೂ ಮಂತ್ರಿಗಳು ವಿಚಾರ ಮಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಪ್ರದೇಶದಲ್ಲಿ 4-5 ಎಕರೆಗಳಷ್ಟು ಭೂಮಿ ಇಟ್ಟುಕೊಂಡಿರತಕ್ಕ ರೈತರೇ ಜಾಸ್ತಿ ಇದ್ದಾರೆ. ಅವರೆಲ್ಲರೂ ಬಹಳ ಬಡವರು. ಅವರಿಗೆ ಹೋದವರ್ಷ ಕೊಡಬೇಕಾಗಿದ್ದ ಪರಿಹಾರ ದ್ರವ್ಯ ಇಲ್ಲಿಯವರೆಗೂ ಸಿಕ್ಕಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ಅಲ್ಲಿ ಸ್ಥಳಕ್ಕೆ ಹೋಗಿ ನೋಡಿದರೆ ಇದು ಅವರಿಗೂ ಚೆನ್ನಾಗಿ ಅರ್ಥವಾಗುತ್ತದೆ. ಕೇವಲ 2–3 ಎಕರೆ ಜಮೀನಿರತಕ್ಕ ಚಿಕ್ಕ ಪುಟ್ಟ ರೈತರೇನಿದ್ದಾರೆ ಅವರಿಗೆ ಅಲ್ಲಿ ಬಿದ್ದಿರುವ ಮರಳನ್ನು ತೆಗೆಸಲು ಶಕ್ತಿ ಇಲ್ಲ. ಅಂಥವರಿಗೆ ಸರ್ಕಾರ ಸಾಲದ ರೂಪದಲ್ಲಾಗಲಿ ಅಥವಾ ಗ್ರಾಂಟ್ ರೂಪದಲ್ಲಾಗಲೀ ಸಾಕಷ್ಟು ಹಣವನ್ನು ಕೊಡಲೇ ಬೇಕು. ಹಾಗೇ ಯಾವ ಒಂದು ಸಹಾಯವೂ ಅವರಿಗೆ ಸಿಕ್ಕದೆ ಇರುವುದರಿಂದ ಈ ವರೆಗೂ ಅವರ ಜಮೀನುಗಳೆಲ್ಲ ಬೆಳೆ ಇಡಲು ಅವಕಾಶವಾಗದೆ ಅವು ಹಾಗೇ ಹಾಳು ಬಿದ್ದಿವೆ. ಕೆಲವರು ಮಲೆನಾಡೆಂದರೆ ಕಾಫಿ ತೋಟವನ್ನಿಟ್ಟುಕೊಂಡಿರುವ ಜನಗಳೆಂದು ಅರ್ಥಮಾಡಿಕೊಳ್ಳುತ್ತಾರೆ. ಅದರಿಂದ ಅವರೆಲ್ಲರೂ ಹಣವಂತರೆಂಬ ಭಾವನೆ ಬರಬಹುದು. ಆದರೆ ಅಲ್ಲಿ ವಿಶೇಷವಾಗಿರತಕ್ಕವರು ಬಡವರು. ಅವರ ಸಂಖ್ಯೆ ಜಾಸ್ತಿ ಇದೆ. ಆ ಜನಗಳಿಗೆ ಹೋದವರ್ಷದಿಂದ ಸಾಕಷ್ಟು ಪರಿಹಾರ ದೊರೆತಿಲ್ಲ. ಇನ್ನೂ 10–12 ಲಕ್ಷ ರೂಗಳ ಅಗತ್ಯವಿದೆ. ಇಷ್ಟು ಪರಿಹಾರವನ್ನು ಸರ್ಕಾರದವರು ಅವರಿಗೆ ನೀಡಲೇ ಬೇಕಾಗಿದೆ. ಅಂಥ ಒಂದು ಕಷ್ಟ ಪರಿಸ್ಥಿತಿ ಈಗ ಅಲ್ಲಿ ಉಂಟಾಗಿದೆ. ಸರ್ಕಾರದವರಲ್ಲಿ ಪರಿಹಾರ ಮೊಬಲಗನ್ನು ಕೊಡುವುದರಲ್ಲಿ ಒಂದು ವಿತರಣೆಯಿಲ್ಲದೆ ಇದ್ದುದೇ ಇದಕೆ ಕಾರಣ. ಸರ್ಕಾರದವರು ಏನೋ ಒಂದು ಅರ್ಜಿ ಹಾಕಿಕೊಂಡಿದ್ದಾನೆ ಎಂದು ಹೇಳಿ ಸ್ಥಳ ಪರಿಶೀಲನೆ ಮಾಡದೆ ಆತನ ಅಗತ್ಯವೇನೆಂಬುದನ್ನು ತಿಳಿಯದೆ ಕೇವಲ 200–300 ರೂಗಳನ್ನು ಕೆಲವು ಕಡೆ ಕೊಟ್ಟಿದ್ದಾರೆ. ಇದರಿಂದ ಯಾರಿಗೂ ಪ್ರಯೋಜನವಾಗಿಲ್ಲ. ಸರ್ಕಾರಕ್ಕೂ ಪ್ರಯೋಜನವಿಲ್ಲ. ರೈತನಿಗೂ ಪ್ರಯೋಜನವಾಗಿಲ್ಲ. ಸರ್ಕಾರದವರು ಈ ಪರಿಹಾರ ದ್ರವ್ಯ ನೀಡುವ ಮೊದಲು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ಆ ಬಗ್ಗೆ ಒಂದು ಅಂದಾಜು ಇತ್ಯಾದಿಗಳನ್ನು ತಯಾರಿಸಿ ಆ ಆಧಾರದ ಮೇಲೆ ಸಹಾಯ ನೀಡಿದರೇನೇ ರೈತರಿಗೆ ಸ್ವಲ್ಪ ಅನುಕೂಲವಾದೀತು. ಹೀಗೆ ಒಂದು ವ್ಯವಸ್ಥೆಯ ಮೇಲೆ ಹಣ ಹಂಚಬೇಕೆಂದು ಹೇಳುತ್ತೇನೆ. ಹೋದ ಸಾರಿ ಕೆಲವರಿಗೆ ಹೀಗೆ ನಿಗವಿಲ್ಲದೆ ಅಲ್ಪ ಸ್ವಲ್ಪ ಹಣವನ್ನು ಅರ್ಥವಿಲ್ಲದೆ ಕೊಟ್ಟಿದ್ದರಿಂದ ಅವರಿಗೆ ಆ ಮೊಬಲಗಿನಿಂದ ಯಾವ ಉಪಕಾರವೂ ಆಗಿಲ್ಲ. ಆದರೆ ಈಗ ಆ ಹಣವನ್ನು ಅವರು ವಾಪಸ್ಸು ಕೊಡಬೇಕಾಗಿ ಬಂದಿದೆ. ಅದರೆ ಈ ಸಾರ್ತಿ ಮತ್ತೆ ಮಳೆಯಿಂದ ಅವರೆಲ್ಲರೂ ತೊಂದರೆಗೊಳಗಾಗಿದ್ದಾರೆ. ಆದಕಾರಣ ಅವರೀ ದಿವಸ ಆ ಹಣವನ್ನು ವಾಪಸ್ಸು ಕೊಡುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಈಗ ಅವರಿಗೆ ಕೊಟ್ಟಿರತಕ್ಕ ಹಣವನ್ನು ಮುಫತ್ತಾಗಿ ಬಿಟ್ಟು ಬಿಡಬೇಕೆಂದು ಹೇಳುತ್ತೇನೆ. ಈ ಸಾರಿಯಾದರೂ

ಸರ್ಕಾರ ಸರಿಯಾದ ವರದಿಗಳನ್ನು ತರಿಸಿಕೊಂಡು ಅಂದಾಜು ಮಾಡಿ ಆ ಪ್ರಕಾರ ಹಣ ಹಂಚುವ ವ್ಯವಸ್ಥೆ ಮಾಡಬೇಕು. ಆದರೆ ಯಾರು ಆಫೀಸುಗಳಿಗೆ ಹೋಗಿ ಹಣ ಪಡೆಯುವ ಶಕ್ತಿ ಇದೆಯೋ ಅಂಥವರಿಗೆ ಮಾತ್ರವೇ ಈ ಅನುಕೂಲ ದೊರೆತು ಬಾಕಿ ತಿಳುವಳಿಕೆ ಇಲ್ಲದೆ ಇರತಕ್ಕ ಜನಗಳಿಗೆ ಈ ಸಹಾಯ ದೊರೆಯಂದತಾಗ ಬಾರದು. ಹೋದವರ್ಷ ಕೆಲವು ರೈತರು ತಮ್ಮ ಜಮೀನುಗಳನ್ನು ಸೊಸೈಟಿಗಳಿಗೆ ಆಧಾರ ಮಾಡಿ ಅಲ್ಲಿಂದ ಸಾಲ ಪಡೆದಿದ್ದಾರೆ. ಅವರೀಗ ಮತ್ತೆ ಸರ್ಕಾರದಿಂದ ಹಣವನ್ನು ಸಾಲ ಪಡೆಯಲು ಆ ಜಮೀನುಗಳನ್ನು ಬಿಡು ಯಿಡುವ ಹಾಗಿಲ್ಲ. ಈ ತೊಂದರೆ ಅಲ್ಲಿ ಕೆಲವರಿಗೆ ಇರುತ್ತೆ. ಆದಕಾರಣ ಅಂಥ ಇಕ್ಕಟ್ಟಿನಲ್ಲಿರತಕ್ಕ ಜನಗಳಿಗೆ ಸರ್ಕಾರದವರು ಆ ಜನರ ಪರ್ಸನಲ್ ಸೆಕ್ಯೂರಿಟಿ ಮೇಲೆ ಸಾಲ ದೊರೆಯತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಈ ಪ್ರವಾಹ ಹೀಗೆ ಪ್ರತಿವರ್ಷವೂ ಬರಲಿಕ್ಕೆ ಕಾರಣವೇನೆಂಬುದನ್ನು ಕಂಡು ಹಿಡಿದು ಇದರಿಂದಾಗತಕ್ಕ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಸರ್ಕಾರ ಕೂಡಲೆ ಒಂದು ಮಾರ್ಗವನ್ನು ಕೈಗೊಳ್ಳಬೇಕೆಂದು ಹೇಳಿ ನನಗಿಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ನಿರ್ಣಯದ ಮೇಲೆ ಮಾತನಾಡಬೇಕೆಂಬ ಉದ್ದೇಶದಿಂದ ನಾನು ಬೆಳಿಗ್ಗೆಯಿಂದಲೂ ಈ ಸಭೆಯಲ್ಲಿ ಬಂದು ಕುಳಿತುಕೊಂಡಿದ್ದೇನೆ. ನಾನು ಈ ನಿರ್ಣಯದ ಮೇಲೆ ಮಾತನಾಡುತ್ತೇನೆಂದು ನನ್ನ ಹೆಸರನ್ನು ನಾನು ತಮಗೆ ಬರೆದು ಕೊಟ್ಟಿಲ್ಲ. ಈಗ ನಾನು ಈ ನಿರ್ಣಯದ ಮೇಲೆ ಮಾತನಾಡಬೇಕೆಂದು ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

**Mr. SPEAKER.**—Will the Hon'ble Member kindly read the rule under which the debate is going on? I suppose the Hon'ble Member know under what rule we are working. If the Hon'ble Member has not got a copy, I will pass it on to him.

> "Rule 61. Any Member who has previously intimated the Speaker may be permitted to take part in the discussion."

Yet, I have been trying to accommodate as many members as possible.

**Sri S. GOPALA GOWDA.**—I have been trying to intimate......

**Mr. SPEAKER.**—What kind of intimation has the hon. Member given? And even if he has given, I cannot chances to all for want of time. The Hon'ble Minister has stood up.

ಶ್ರೀ ಎಸ್. ಗೋಪಾಲಗೌಡ.—ಈಗ ಮಾನ್ಯ ಮಂತ್ರಿಗಳು ಮಾತನಾಡುವ ಕಾಲವಲ್ಲೇ ನನಗೆ ಸ್ವಲ್ಪ ಕಾಲ ಮಾತನಾಡುವುದಕ್ಕೆ ಅವಕಾಶ ಕೊಡಲಿ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಮಾತನಾಡುವ ಕಾಲದಲ್ಲೇ ಮಾನ್ಯ ಸದಸ್ಯರು ಎರಡು ಮೂರು ನಿಮಿಷ ಮಾತನಾಡಲಿ.

**Mr. SPEAKER.**—Sri Gopal Gowda may take seven minutes—Punctually at 4-30 P.M. he should conclude. He may shape his arguments like that.

**Sri K. LAKKAPPA.**—What about my request...

**Mr. SPEAKER.**—I am unable to accept it.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಈಚೆಗೆ ನಮ್ಮ ರಾಜ್ಯದಲ್ಲಿ ಅತಿವೃಷ್ಟಿ ಪ್ರವಾಹದ ಹಾವಳಿಯಿಂದ ಆದ ಕಷ್ಟ ನಷ್ಟಗಳನ್ನು ಸಭೆಯಲ್ಲಿ ವಿಚಾರ ಮಾಡುವುದು ಸೂಕ್ತವಾಗಿದೆ. ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿ ಬಂದದ್ದರಿಂದ ನಾನು ಮಾತನಾಡಲು ಅಪೇಕ್ಷೆ ಪಟ್ಟಿದ್ದೇನೆ. ರಾಮನಗರದ ಕ್ಷೇತ್ರದ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಆ ಭಾಗದಲ್ಲಿ ಅರ್ಕಾವತಿ ಮತ್ತು ಕಣ್ವ ಪ್ರವಾಹದಿಂದ ಉಂಟಾದ ಹಾವಳಿಯನ್ನು ತಿಳಿಸಿದ್ದಾರೆ. ಆದರೆ ಚೆನ್ನಪಟ್ಟಣ ಕ್ಷೇತ್ರದ ಮಾನ್ಯ ಸದಸ್ಯರು ಮಾತನಾಡುತ್ತಾ ಅಧಿಕಾರಿಗಳು ಮತ್ತು ಅದಕ್ಕೆ ಸಂಬಂಧಪಟ್ಟವರೆಲ್ಲರೂ ಪ್ರವಾಹ ಪೀಡಿತ ಪ್ರದೇಶದ ಜನಗಳಿಗೆ ಎಷ್ಟು ಸಹಾಯ ಮಾಡಬೇಕಾಗಿತ್ತೋ ಅಷ್ಟನ್ನು ಸಹಾಯ ಮಾಡಿದ್ದಾರೆ ಎಂದು ಹೇಳಿದ್ದಾರೆ. ನನಗೆ ಬಂದಿರುವ ವರದಿಯ ಪ್ರಕಾರ ಪ್ರವಾಹದ ಹಾವಳಿಯಿಂದ ನೊಂದವರಿಗೆ ಎಷ್ಟು ಸಹಾಯ ಮಾಡಬೇಕಾಗಿತ್ತೋ ಅಷ್ಟು ಸಹಾಯವನ್ನು ಅದಕ್ಕೆ ಸಂಬಂದಪಟ್ಟವರು ಮಾಡಿಲ್ಲ ಎಂದು ಇದೆ. ಚೆನ್ನಪಟ್ಟಣದ ಕ್ಷೇತ್ರದ ಮಾನ್ಯ ಸದಸ್ಯರು ಪರಿಹಾರ ಸಮಿತಿಯಲ್ಲಿದ್ದಾರೆ ಎನ್ನುವ ವಿಷಯವನ್ನು ನಾನು ಅವರಿಂದಲೇ ತಿಳಿದುಕೊಂಡೆ. ಪರಿಹಾರ ಸಮಿತಿಯಲ್ಲಿದ್ದವರು ಪರಿಹಾರ ಕಾರ್ಯವನ್ನು ಚೆನ್ನಾಗಿ ಮಾಡುತ್ತಿದ್ದೇವೆ ಎಂದು ಹೇಳದೆ ಹೋದರೆ ಬೇರೆ ಯಾರೂ ಆ ವಿಷಯವನ್ನು ಹೇಳಲಾರರು. ಪ್ರವಾಹದ ಹಾವಳಿಯಿಂದ ಆ ಭಾಗದಲ್ಲಿ ಸುಮಾರು 17 ಲಕ್ಷ ರೂಪಾಯಿಗಳಷ್ಟು ನಷ್ಟವಾಯಿತು ಎಂದು ಒಬ್ಬರು ಹೇಳುತ್ತಾರೆ. ಪತ್ರಿಕೆಗಳಲ್ಲಿ ಬಂದಿರುವ ವರದಿಯ ಪ್ರಕಾರ 40 ಲಕ್ಷ ರೂಪಾಯಿಗಳ ನಷ್ಟ ಉಂಟಾಗಿದೆ ಎಂದು ಹೇಳಿದ್ದಾರೆ. ನನಗೆ ಬಂದಿರುವ ವರದಿಯ ಪ್ರಕಾರ 60 ಲಕ್ಷ ರೂಪಾಯಿಗಳ ನಷ್ಟ ಉಂಟಾಗಿದೆಯೆಂದು ಇದೆ. ಸತ್ಯ ಎಲ್ಲಿಯೋ ಇರಬೇಕು. ನಿಜವಾಗಿಯೂ ಕೂಡ ನಾವು ಸತ್ಯಾಂಶಗಳನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುವುದು ತಪ್ಪು. ಆಹೊತ್ತು ಎಂದರೆ ರಾಮನಗರದಲ್ಲಿ ಪ್ರವಾಹ ಬರುವ ದಿವಸ ಹನ್ನೊಂದು ಗಂಟೆಗೆ ಅಲ್ಲಿದ್ದ ತಹಶೀಲ್ದಾರರು ಅರ್ಕಾವತಿ ನದಿಯಲ್ಲಿ ಹೆಚ್ಚು ಪ್ರವಾಹ ಬರುತ್ತದೆ, ಆದ್ದರಿಂದ ರಾಮನಗರಕ್ಕೆ ಪ್ರವಾಹದ ತೊಂದರೆಯುಂಟಾಗುತ್ತದೆಂದು ಅಲ್ಲಿಯ ಜನತೆಗೆ ಟಾಮ್ ಟಾಮ್ ಮೂಲಕ ಸೂಚನೆಯನ್ನು ಕೊಟ್ಟರೆಂದೂ ಅಲ್ಲಿಯ ಜನಗಳು ಕೆಲವರು ತಕ್ಷಣ ಊರನ್ನು ಬಿಟ್ಟು ಹೊರಗಡೆ ಹೋಗಲು ಆಗಲಿಲ್ಲವೆಂದೂ, ತಡವಾಗಿ ಸೂಚನೆ ಬಂದ ಕಾರಣ ಹೆಚ್ಚಿನ ತೊಂದರೆಯಾಯಿತೆಂದೂ ತಿಳಿಯುತ್ತೇನೆ. ಮತ್ತು ಅಲ್ಲಿನ ಪೌರ

(ಶ್ರೀ ಎಸ್. ಗೋಪಾಲಗೌಡ)

ಸಭೆಯ ಅಧ್ಯಕ್ಷರಾಗಲೀ, ಉಪಾಧ್ಯಕ್ಷರಾಗಲೀ ಈ ಕೆಲಸದಲ್ಲಿ ಭಾಗವಹಿಸಲಿಲ್ಲ. ಪೋಲೀಸಿನವರು ಅಧಿಕಾರಿಗಳು ಜನಗಳಿಗೆ ತಕ್ಷಣ ಸಾಕಷ್ಟು ನೆರವು ನೀಡಲಿಲ್ಲ ಎನ್ನುವುದು ನಮಗೆ ತಿಳಿದು ಬಂದಿದೆ. ಮತ್ತು ಅಲ್ಲಿರತಕ್ಕ ಏಜೆನ್ಸಿಗಳು ಎಂದರೆ ಪೌರ ಸಭೆಯ ಮತ್ತು ತಾಲ್ಲೂಕು ಬೋರ್ಡಿನ ಮಾನ್ಯ ಸದಸ್ಯರೇ ನಿದ್ದಾರೆ, ಇವರುಗಳಲ್ಲಿ ಭಿನ್ನಾಭಿಪ್ರಾಯವಿದೆ ಎಂದು ನನಗೆ ತಿಳಿದು ಬಂದಿದೆ. ಪರಿಹಾರ ಸಮಿತಿಯವರು ಇದುವರೆಗೆ 1,300—2,000 ರೂಪಾಯಿಗಳನ್ನು ಕೂಡಿಸಿ ಅದನ್ನು ಜನಗಳಿಗೆ ಹಂಚಿದ್ದಾರೆಂದು ತಿಳಿದು ಬಂದಿದೆ. ಪ್ರವಾಹದ ಹಾವಳಿಯಿಂದ ಕಷ್ಟನಷ್ಟಗಳಿಗೆ ಒಳಗಾಗಿರತಕ್ಕವರಿಗೆ ಪರಿಹಾರವನ್ನು ಕೊಡುವಾಗ ಬಹಳ ತ್ವರಿತವಾಗಿ ಸಾಕಷ್ಟು ಪರಿಹಾರವನ್ನು ಕೊಡಬೇಕು. ಒಂದೊಂದು ಕುಟುಂಬದವರಿಗೆ 50 ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆಂದೂ ಮತ್ತು ಅದರಂತೆ ಕೆಲವು ಜನಗಳಿಗೆ ಪರಿಹಾರವನ್ನು ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಪ್ರವಾಹದಿಂದ ನೊಂದವರಿಗೆ ಪರಿಹಾರವನ್ನು ಕೊಡುವ ಸಂದರ್ಭದಲ್ಲಿ ಯಾವ ರಾಜಕೀಯವೂ ಇರಬಾರದು ಎನ್ನುವ ತತ್ವವನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಕಾಂಗ್ರೆಸ್ಸಿನವರು ಸಾಮಾನ್ಯವಾಗಿ ಮೊದಲು ತಮ್ಮವರ ಹಿತರಕ್ಷಣೆ ಆ ಮೇಲೆ ಬೇರೆಯವರ ಪ್ರಶ್ನೆ ಎನ್ನುವ ಮನೋಭಾವನೆಯುಳ್ಳವರಾಗಿರುತ್ತಾರೆ. ಇದು ಅವರಿಗೆ ಸ್ವಾಭಾವಿಕವಾಗಿ ಬಂದಿದೆ. ಇಂತಹ ಪರಿಹಾರಗಳನ್ನು ಒದಗಿಸುವಾಗ ಪಕ್ಷಾತೀತವಾಗಿ ನೋಡಬೇಕು, ಮತ್ತು ಈ ವಿಷಯದಲ್ಲಿ ಒಂದು ಉದಾರತೆಯನ್ನು ತೋರುವುದು ಒಳ್ಳೆಯದೆಂದು ನನಗೆ ತೋರುತ್ತದೆ. ಕಳೆದ ವರ್ಷ ಮಲೆನಾಡಿನಲ್ಲಿ ಪ್ರವಾಹದ ಹಾವಳಿಯಿಂದ ಕಷ್ಟನಷ್ಟಗಳನ್ನು ಹೊಂದಿದವರಿಗೆ ಸರ್ಕಾರದವರು ಎಷ್ಟರ ಮಟ್ಟಿಗೆ ಪರಿಹಾರವನ್ನು ಕೊಟ್ಟಿದ್ದಾರೆ ಎನ್ನುವ ವಿಷಯವನ್ನು ನನ್ನ ಸ್ನೇಹಿತರಾದ ಮೂಡಗೆರೆಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ನಿಜವಾಗಿಯೂ ಅದು ಶೋಚನೀಯವಾದ ವಿಚಾರ. ಈ ವರ್ಷ ಕೂಡ ಮಲೆನಾಡಿನಲ್ಲಿ ಹೆಚ್ಚು ಪ್ರವಾಹ ಬಂದು ಜನಗಳಿಗೆ ಅನೇಕ ಕಷ್ಟನಷ್ಟಗಳುಂಟಾಗಿದೆ. ಈ ವಿಪತ್ತಿನಿಂದ ಅಲ್ಲಿನ ಜನಗಳನ್ನು ಇನ್ನೂ ಪಾರುಮಾಡಲಿಲ್ಲ. ಆದ್ದರಿಂದ ಸರ್ಕಾರದವರು ಆ ಬಗ್ಗೆ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಹಾವೇರಿಯ ಮಾನ್ಯ ಸದಸ್ಯರಾದ ಶ್ರೀ ಮಾಗಾವಿಯವರು ಹೇಳಿದರು ಮಂತ್ರಿಗಳು ನಮ್ಮ ಭಾಗದ ಜನರಿಗೆ ಅನೇಕ ಆಶ್ವಾಸನೆಗಳನ್ನು ಕೊಟ್ಟಿದ್ದರು, ಅವು ಬರೀ ಆಶ್ವಾಸನೆಗಳಾಗಿಯೇ ಉಳಿದಿವೆ, ಜನಗಳಿಗೆ ಇನ್ನೂ ಯಾವ ಅನುಕೂಲವನ್ನೂ ಮಾಡಿಕೊಡಲಿಲ್ಲ ಎಂದು. ಸಾಮಾನ್ಯವಾಗಿ ದೊಡ್ಡ ಪ್ರವಾಹ ಬಂದಾಗ ವಿಮಾನಗಳಲ್ಲಿ ಹಾರಾಡಿ ಜನಗಳಿಗೆ ಸಹಾನುಭೂತಿಯನ್ನು ತೋರುವುದು ಉಂಟು. ವಾಸ್ತವವಾಗಿ ಪರಿಹಾರ ಕಾರ್ಯಗಳನ್ನು ಮಾಡುವಾಗ ಅವು ಬರೀ ಚರ್ಚೆಯಲ್ಲಿಯೇ ಪರ್ಯವಸಾನವಾಗುತ್ತವೆ. ಕೊನೆಗೆ ಕಷ್ಟದಲ್ಲಿರತಕ್ಕವರಿಗೆ, ಪ್ರವಾಹದಿಂದ ನೊಂದವರಿಗೆ ಸಾಕಷ್ಟು ಪರಿಹಾರವನ್ನು ನೀಡುವುದಿಲ್ಲ. ಆದ್ದರಿಂದ ಪರಿಹಾರವನ್ನು ಕೊಡುವ ವಿಷಯದಲ್ಲಿ ಆದಷ್ಟು ಜಾಗ್ರತೆಯಾಗಿ ಮುತುವರ್ಜಿ ವಹಿಸಿ ನಿಜವಾಗಿಯೂ ಕಷ್ಟನಷ್ಟಗಳಿಗೆ ಒಳಗಾಗಿರತಕ್ಕವರಿಗೆ ಉದಾರವಾಗಿ ಸಹಾಯ ಮಾಡಿ ಅವರಿಗೆ ಪುನರ್‌ವಸತಿ ಕಾರ್ಯಕ್ಕೆ ಅನುಕೂಲ ಮಾಡಬೇಕೆಂದು ನಾನು ಈ ಸಂಧರ್ಭದಲ್ಲಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಂಡು ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಮಂತ್ರಿಗಳು ನನಗೆ ಈ ಸಂದರ್ಭದಲ್ಲಿ ಮಾತನಾಡುವುಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4.30 P.M.

† ಶ್ರೀ ಅಲೂರು ಹನುಮಂತಪ್ಪ.—ಮಾನ್ಯ ಅಧ್ಯಕ್ಷರೇ, ಈದಿವಸದ ಚರ್ಚೆಯಲ್ಲಿ ಮಾನ್ಯ ಸದಸ್ಯರು ಇತ್ತೀಚಿನ ಪ್ರವಾಹ ಹಾಗೂ ಕೆರೆಗಳು ಒಡೆದುಹೋಗಿರತಕ್ಕ ವಿಷಯವನ್ನು ಹೇಳಿದ್ದಾರೆ. ಅದರಲ್ಲೂ ಎದುರು ಪಕ್ಷದ ನಾಯಕರಾದ ಶಿವಪ್ಪನವರು ಕೆಲವು ಆರೋಪಗಳನ್ನುಸಹ ಮಾಡಿದ್ದಾರೆ. ಇದರಲ್ಲಿರತಕ್ಕ ಅಂಶಗಳು ಬಿಚ್ಚಿಡುವುದು ಯಾವುದೂ ಇಲ್ಲ. ಇತ್ತೀಚಿನ ಮಳೆ ತಮಗೆಲ್ಲಾ ಗೊತ್ತಿರುವಹಾಗೆ ಮೂರು ಇಂಚಿನಿಂದ ಎಂಟು ಇಂಚಿನವರೆಗೂ ಆಯಿತು ಎಂದರೆ ಇಡೀ ಒಂದು ವರ್ಷದ ಮಳೆಯಲ್ಲಿ ⅓ ಭಾಗ ಮಳೆಆಯಿತು. ಇದರಿಂದ ಬೆಂಗಳೂರು ಜಿಲ್ಲೆಯಲ್ಲಿ ಹಾಗೂ ಇನ್ನೂ ಅನೇಕ ಭಾಗಗಳಲ್ಲಿ ಈ ಕೆರೆಗಳ ಒಡೆತಕ್ಕೆ ಕಾರಣವಾಯಿತು. ರಾಮನಗರದಲ್ಲಿ ಅರ್ಕಾವತಿ ನದಿಯಲ್ಲಿ ಹೆಚ್ಚು ಪ್ರವಾಹ ಬಂದು ರೈತರು ಏನೊಂದು ವಿಕೋಪಕ್ಕೆ ಒಳಗಾಗಿ ಕಷ್ಟ ನಷ್ಟ ಪಟ್ಟರು ಎಂಬುದನ್ನು ಮಾನ್ಯ ಸದಸ್ಯರು ವಿವರಿಸಿದರು. ಅದು ನಿಮಗೆಲ್ಲಾ ಮನದಟ್ಟಾಗಿದೆ. ಕೆಲವು ಜಿಲ್ಲೆಗಳ ವರದಿ ಹೀಗಿದೆ:—ಬೆಂಗಳೂರು ಜಿಲ್ಲೆಯಲ್ಲ ಸಣ್ಣಮತ್ತು ದೊಡ್ಡಕೆರೆಗಳು 41 ಕೆರೆಗಳು ಡ್ಯಾಮೇಜ್ ಆಗಿವೆ. ಮಂಡ್ಯಾ ಜಿಲ್ಲೆಯಲ್ಲಿ 15 ಕೆರೆ ಮತ್ತು ಅಣೆಕಟ್ಟುಗಳು. ಕೋಲಾರದಲ್ಲಿ 8, ಹಾಸನದಲ್ಲಿ 8, ತುಮಕೂರಿನಲ್ಲಿ 5, ಚಿತ್ರದುರ್ಗದಲ್ಲಿ 5, ರಾಯಚೂರಿನಲ್ಲಿ 2, ಮೈಸೂರಿನಲ್ಲಿ 1, ಗುಲ್ಬರ್ಗದಲ್ಲಿ 2, ಬಳ್ಳಾರಿಯಲ್ಲಿ 1. ಹೀಗೆ 86 ಕೆರೆಗಳು ಮತ್ತು ಅಣೆಕಟ್ಟುಗಳು ಡ್ಯಾಮೇಜ್ ಆಗಿರುವುದು ಹಾಗೂ ಒಡೆದು ಹೋಗಿರುವುದು ಈ ಪಟ್ಟಿಯಲ್ಲಿಇದೆ. ಈ ಕೆರೆಗಳು ಬಹಳ ವರ್ಷದಿಂದ ರಿಪೇರಿಯಾಗಿಲ್ಲ ಆದ್ದರಿಂದ ಒಡೆದು ಹೋಗುತ್ತಾಇವೆಎಂದು ಮಾನ್ಯ ಸದಸ್ಯರು ಹೇಳಿದರು ಅದರಲ್ಲೂ ಶ್ರೀಮಾನ್ ರೇವಣ್ಣಸಿದ್ದಪ್ಪನವರು ಮುವ್ವತ್ತು ನಲವತ್ತು ವರ್ಷದ ಹಿಂದೆ ಒಡೆದ ಕೆರೆ ಇನ್ನೂವರಗೂ ರಿಪೇರಿಮಾಡಿಲ್ಲ. ಇತ್ತೀಚೆಗೆ ಎರಡು ವರ್ಷದ ಹಿಂದೆ ಬ್ರೀಚ್ ಆದ ಕೆರೆ ರಿಪೇರಿ ಮಾಡಲು ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು. ಹಿಂದೆ ಒಡೆದು ಹೋಗಿರುವುದನ್ನು ತೆಗೆದುಕೊಳ್ಳಬಾರದು ಎಂದು ಅಲ್ಲ. ಕೆರೆ ಅಂಗಳದ ಜಮೀನು ರೈತರಿಗೆ ಸಾಗವಳಿಗೆ ಕೊಟ್ಟಿರುತ್ತಾರೆ. ಅದರ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಆಗಬೇಕಾಗಿರುತ್ತದೆ. ಈ ರೀತಿ ನಾನಾಕಾರಣಗಳಿಂದ ತಡವಾಗುತ್ತದೆ. ಇತ್ತೀಚಿನ ಎರಡು ವರ್ಷಗಳಲ್ಲಿ ಒಡೆದ ಕೆರೆಗಳಿಗೆ ಅಂತಹ ಪ್ರತಿಬಂಧಕಗಳಿಲ್ಲದೇ ಇರುವುದರಿಂದ ಅವನ್ನು ಮಾಡಲೇ ಬೇಕಾಗುತ್ತದೆ. ಕರೆ ಒಡೆದು ರೈತರಿಗೆ ನಷ್ಟವಾಗುತ್ತದೆ ಎಂದರೆ ಈ ಕೆರೆಗಳ ದುರಸ್ತಿ ಅತ್ಯಾವಶ್ಯಕವಾಗಿ ಆಗಬೇಕಾಗದೆ. ಇಡೀದೇಶದಲ್ಲ 37,328 ಕೆರೆಗಳು ಇವೆ. ಇವತ್ತಿನ ಪರಿಸ್ಥಿತಿಯಲ್ಲ 14,000 ಕೆರೆಗಳ ಜೀರ್ಣೋದ್ಧಾರ ತಕ್ಷಣ ಆಗಬೇಕಾಗಿದೆ. ಅದಕ್ಕೆ ಅತ್ಯಧಿಕವಾದ ಹಣವನ್ನೂಸಹ ವಿನಿಯೋಗಿಸುತ್ತಾ ಇದ್ದೇವೆ. ಅವರು ಹೇಳುವಹಾಗೆ ಈ ಕೆಲಸಗಳಿಗೆ ಹಣ ಇಲ್ಲ, ಸ್ವಲ್ಪಕಡಿಮೆ, ಸಂಬಳ ಜಾಸ್ತಿ ಕೊಡುತ್ತಾಇದ್ದೇವೆ, ಮೂರು ತಿಂಗಳಿಗೆ ಮಾತ್ರ ಕೆಲಸ

ಇದೆ ಎಂದು ಅಲ್ಲ. ದೇಶದಲ್ಲಿ 7½ ಕೋಟಿರೂಪಾಯಿಗಳ ಸ್ಪಿಲ್ ಓವರ್ ವರ್ಕ್ಸ್ ಇವೆ. ಈದಿವಸ ಮಾಡಬೇಕಾಗಿರುವುದು. ಇದರ ಜೊತೆಗೆ ಸಣ್ಣನೀರಾವರೀ ಯೋಜನೆಗಳು. ಪಿಕ್‌ಅಪ್ಸ್, ಚಾನಲ್ಸ್ ದುರಸ್ತಿ ಮಾಡುವುದು, ಇಂತಹ ಹೊಸಕೆಲಸಗಳು ಅತಿಶೀಘ್ರವಾಗಿ ಆಗಬೇಕಾಗಿದೆ. ಇದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಸರ್ಕಾರ ಈ ಎಲ್ಲಾ ಕಾರ್ಯಚಟುವಟಿಕೆಗಳಿಗೂ ಗಮನ ಕೊಡುವುದು ಮತ್ತು ಸಣ್ಣ ನೀರಾವರಿಯೋಜನೆ ಎಲ್ಲಾ ಜಿಲ್ಲೆಗಳಲ್ಲೂ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ ಇದೇ ಸರ್ಕಾರದ ನೀತಿಯೂ ಸಹ ಆಗಿದೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಬಹಳ ಹಿಂದೆ ಒಡೆದು ಹೋಗಿರುವ ಕೆರೆಯನ್ನು ತಕ್ಷಣ ಜೀರ್ಣೋದ್ಧಾರಮಾಡದಿದ್ದರೆ ಆ ಕೆರೆ ಇನ್ನೂ ಹೆಚ್ಚಾಗಿ ಒಡೆದು ಹೋಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ರೆಸ್ಟೋರ್ ಆಗಬೇಕು ನಿಜ. ಕೆರೆ ಬಂದ್ ಮಾಡಿ ಮಣ್ಣು ಯಾವಾಗ ಹೆಚ್ಚಿಗೆ ಹಾಕುತ್ತೇವೆಯೋ ಆಗ ಕೆರೆ ಒಡೆಯುವುದು ಬಹಳ ಕಡಿಮೆಯಾಗುತ್ತದೆ. ಎಷ್ಟು ನೀರು ಬಂದರೂ ಹಿಡಿದುಕೊಳ್ಳುತ್ತದೆ ಒಳ್ಳೆಯ ಪರಿಣಾಮವಾಗುತ್ತದೆ. ಇತ್ತೀಚಿನ ಮಳೆಯಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಹಾಯದಿಂದ ದೊಡ್ಡ ದೊಡ್ಡ ಕೆರೆಗಳು ಮಳೆಯ ಪರಿಣಾಮವಾಗಿ ಒಡೆಯತಕ್ಕ ಸಂದರ್ಭದಲ್ಲಿ ಎಲ್ಲಾಜಿಲ್ಲೆಯಲ್ಲೂಸಹ ಉಳಿಸಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಸಣ್ಣ ನೀರಾವರಿ ಯೋಜನೆ, ಕೆರೆಗಳ ಜೀರ್ಣೋದ್ಧಾರ ಹಾಗೂ ಚಾನಲ್‌ಗಳ ದುರಸ್ತಿ ತ್ವರಿತವಾಗಿ ಮಾಡಬೇಕು ಎಂದು ಈಗತಾನೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆಕೊಡಲಾಗಿದೆ. ಶ್ರೀಮಾನ್ ಬಸಪ್ಪನವರು ಹೇಳಿದಹಾಗೆ ಚಾಮರಾಜನಗರದಲ್ಲಿ ಕೆರೆಹಳ್ಳಿ ಕೆರೆಯಿಂದ 800 ಎಕರೆಪ್ರದೇಶ ಈ ದಿವಸ ಪ್ರವಾಹಕ್ಕೆ ಈಡಾಗಿದೆ. ಈಸಾರಿ ಅಂತಹಕೆರೆಗಳಿಗೆ ಇಲಾಖೆಯ ಅಧಿಕಾರಿಗಳು ಮತ್ತು ಅಲ್ಲಿನ ಜನರೂ ಸಹಕರಿಸಿ ರಿಂಗ್ ಬಂಡ್ ಹಾಕಿ ಹಾಲಿ ಇರತಕ್ಕ ಬೆಳೆಯನ್ನೂ ಸಹ ಉಳಿಸತಕ್ಕ ಏರ್ಪಾಡು ನಡೆಯುತ್ತಾ ಇದೆ. ಹಾಗೆ ಇಲಾಖೆಯ ಅಧಿಕಾರಿಗಳಿಗೆ ಮುನ್ಸೂಚನೆ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ ಅವರ ಮೇಲ್ವಿಚಾರಣೆಯಲ್ಲಿ ಕೆಲಸ ಚೆನ್ನಾಗಿ ನಡೆದಿದೆ. ಇನ್ನೂ ಹೆಚ್ಚು ರೆಸ್ಟೋರ್ ಮಾಡತಕ್ಕ ಕಾರ್ಯ ಮಾಡಬೇಕೆಂದು ಇಲಾಖೆಯ ಅಧಿಕಾರಿಗಳಿಗೆ ಮುನ್‌ಸೂಚನೆ ಕೊಡಲಾಗಿದೆ ಶ್ರೀಮಾನ್ ರೇವಣ್ಣಸಿದ್ದಪ್ಪನವರು ಹೇಳಿದಹಾಗೆ ಇಲಾಖೆಗೆ ಹೊಂದಿಸಬೇಕಾದ ಹಣ ಸಹ ಅಷ್ಟೇನೂ ಇರಲಾರದು. ನಮ್ಮ ಪ್ಲಾನ್ ಬಡ್ಜೆಟ್ ಜೊತೆಗೆ ಕೇಂದ್ರ ಸರ್ಕಾರದ ಎಲ್ಲಾ ಸಹಾಯವನ್ನು ಸಹ ಇದಕ್ಕೆ ತೆಗೆದುಕೊಳ್ಳುತ್ತಾ ಇದ್ದೇವೆ. ಕೇಂದ್ರ ಸರ್ಕಾರದ ಸಂಪೂರ್ಣ ಹಣದ ಸೌಕರ್ಯ ಈ ಸಣ್ಣನೀರಾವರಿ ಯೋಜನೆಗೆ ಸಿಕ್ಕುತ್ತದೆ. ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಪರಿಹಾರದ ವಿಷಯವಾಗಿ ರೆವಿನ್ಯೂ ಸಚಿವರು ಉತ್ತರ ಕೊಡುತ್ತಾರೆ. ಕೆರೆಗಳಿಗೆ ಸಂಬಂಧಪಟ್ಟಂತೆ ಶಿವಪ್ಪನವರು ಹೇಳಿದಹಾಗೆ ಕೆರೆಗಳೇನೋ ಒಡೆದಿವೆ. ನಮಗೆ ಬಂದಿರುವ ರಿಪೋರ್ಟ್ ಪ್ರಕಾರ ಒಡೆದಿರತಕ್ಕ ಕೆರೆಗಳು ಅಣೆಕಟ್ಟುಗಳೆಲ್ಲಾ ಹಳೆಯವು. ಇತ್ತೀಚೆಗೆ ಕಟ್ಟಿರುವುದು ಒಡೆದಿದೆ ಎಂದು ಯಾವುದೂ ವರದಿಯಾಗಿಲ್ಲ. ಹಾಗೇನಾದರೂ ಆಗಿದ್ದರೆ ಯಾವೊಬ್ಬ ಅಧಿಕಾರಿಯಾಗಲಿ ಅಥವಾ ಕಂಟ್ರಾಕ್ಟರ್ ಆಗಲಿ ಆತನಮೇಲೆ ಎಷ್ಟು ಪರಿಣಾಮ ಉಂಟಾಗಬಹುದೋ ಅಷ್ಟು ಉಂಟಾಗಿಯೇ ಆಗುತ್ತದೆ. ಸರ್ಕಾರ ತೀವ್ರತೆಯಿಂದ ಅಂತಹ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ ಎಂದು ಈ ಸಭೆಯಲ್ಲಿ ತಮ್ಮ ಮುಂದೆ ಹೇಳುತ್ತಾ ಇದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ನಾನು ಹೇಳಿದ್ದು 1940 ರಲ್ಲಿ ಬ್ರೀಚ್ ಆದದ್ದು.

ಶ್ರೀ ಆಲೂರು ಹನುಮಂತಪ್ಪ.-ಬ್ರೀಚ್ ಆಗುವುದಕ್ಕೆ ನಾನಾಕಾರಣಗಳು ಇವೆ. ಇತ್ತೀಚಿನ ಮಳೆಯಂತೂ ಅತ್ಯಧಿಕವಾಗಿ ಆಗಿದೆ. ದೇಶದಲ್ಲಿ ಮಳೆ ಇಲ್ಲದೆ ಕ್ಷಾಮ, ಅಭಾವ ಆಗುತ್ತದೆ ಎಂಬ ಸಂದರ್ಭದಲ್ಲಿ, ಮಾನ್ಯ ರೆವಿನ್ಯೂ ಸಚಿವರಿಗೆ ಎಲ್ಲಾ ಜಿಲ್ಲೆಯಿಂದಲೂ ಸಹ ಮನವಿ ಪತ್ರಗಳು, ಕ್ಷಾಮ ನಿವಾರಣಾ ಕೆಲಸ ಕಾರ್ಯಗಳನ್ನು ಮಾಡಿ ಎಂದು ಬರುತ್ತಿದ್ದ ಸಂದರ್ಭದಲ್ಲಿ ಹಿಂದೆಯಾವಾಗಲೂ ಮಳೆಆಗದಷ್ಟು ಭಾರಿ ಮಳೆ ಆಗಿ ಪ್ರವಾಹ ಬಂದು ಕೆರೆಗಳು, ಹಾಗೂ ನಾಲೆಗಳು ಅಲ್ಲದೆ ರೈತರು ಇಟ್ಟಿದ್ದ ಬೆಳೆಗಳಿಗೆ ನಷ್ಟ ಸಂಭವಿಸಿ ದೇಶದಲ್ಲಿ ಈದಿನ ಹಾಹಾಕಾರವುಂಟಾಗಿದೆ. ಮುಂದೆ ಕೆರೆಗಳದ ರಸ್ತಿ ಎಷ್ಟುಮಟ್ಟಿಗೆ ಮಾಡಬಹುದೋ ಅದನ್ನೆಲ್ಲಾ ಮಾಡತಕ್ಕ ಒಂದು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಮುನ್ಸೂಚನೆ ಆಗಿದೆ. ಸರ್ಕಾರದವರು ನಾನಾರೀತಿಯಿಂದ ತೀವ್ರವಾದಂಥ ಕ್ರಮಗಳನ್ನನುಸರಿಸಿ ಬುಲುಡೋಜರುಗಳನ್ನು ಸಹ ಉಪಯೋಗ ಮಾಡಿ ನಾಶವಾಗಿರತಕ್ಕ ಕೆರೆಗಳನ್ನಾಗಲೀ ನಾಲೆಗಳನ್ನಾಗಲೀ ದುರಸ್ತಿಮಾಡಿಸುತ್ತಿರುವುದು ಮಾನ್ಯ ಸದಸ್ಯರಿಗೆ ಪ್ರತಿಯೊಬ್ಬರಿಗೂ ಗೊತ್ತಿರತಕ್ಕ ವಿಷಯ. ದುರಸ್ತು ಮಾಡಿಸಬೇಕೆಂಬ ವಿಷಯ ಸರ್ಕಾರದವರಿಗೆ ಮನದಟ್ಟಾಗಿದೆ, ಕೆರೆಗಳು ರೆಸ್ಟೋರ್ ಆಗಬೇಕಾಗಿದ್ದರೆ ತಾಲ್ಲೂಕು ಬೋರ್ಡಿಗೆ ಬಿಟ್ಟಿರತಕ್ಕ 10 ಎಕರೆ ಅಚ್ಚುಕಟ್ಟು ಇರುವುದರ ವಿನಾ ಬಾಕಿ ಕೆರೆಗಳ ವಿಷಯದಲ್ಲಿ ಸರ್ಕಾರದವರು ಅತಿತೀವ್ರವಾಗಿ ಎಲ್ಲಾ ಜಾಗರೂಕತೆಯಿಂದ ಕಾರ್ಯಕ್ರಮ ಹಾಕಿಕೊಂಡು ರೆಸ್ಟೋರ್ ಮಾಡಬೇಕಾಗಿದೆ. ಸಣ್ಣನೀರಾವರೀ ಯೋಜನೆ ವಿಷಯದಲ್ಲಿ ಎಲ್ಲಾಜಿಲ್ಲೆಗಳಿಗೂ ಪ್ರಾಮುಖ್ಯತೆ ಕೊಡತಕ್ಕ ವಿಷಯವೇನಿದೆ ಆನೀತಿಯನ್ನು ಸರ್ಕಾರಒಪ್ಪಿಕೊಂಡಿದೆ, ಈ ಸಾರಿಹೆಚ್ಚಿನವಟ್ಟದ ಕೆಲಸಕಾರ್ಯ ನಡೆಯುವುದಕ್ಕೆ ಸರ್ವಪ್ರಯತ್ನ ಮಾಡುತ್ತೇವೆ ಎಂದು ಹೇಳಿ ಈ ಮಾನ್ಯ ಶಾಸನಸಭೆಯವರಿಗೆ ಈ ಮೂಲಕ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ತಾಲ್ಲೂಕಿನಲ್ಲಿ ಮೂರು ಹಳ್ಳಿಗಳು ಇವೆ. ಜಮೀನು ವತ್ತುವರಿ ಮಾಡಲು ಯಾರೂ ಮಂಜೂರು ಮಾಡಿಸಿಕೊಂಡಿಲ್ಲ. ಪಿ.ಡಬ್ಲ್ಯು.ಡಿ.ಗೆ ವಹಿಸಬೇಕೆಂದರೆ ಗ್ರಾಂಟ್ ಇಲ್ಲ ತೆಗೆದುಕೊಳ್ಳಬೇಡಿ ಎಂದು ಸರ್ಕ್ಯುಲರ್ ಬಂದಿದೆ ಬೇಕಾದರೆ ಅದನ್ನು ಕೊಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ರೆಸ್ಟೋರ್ ಮಾಡಲು ಆರ್ಡರ್ ಮಾಡಿದ್ದೇವೆ ಎಂದು ಹೇಳಿದಿರಿ. ಪ್ರತಿಯೊಂದು ಕೆರೆಗೂ ಕೂಡ ಒಂದೊಂದು ಜಿ. ಓ. ಆಗಬೇಕು. ಅಥಾರಿಟಿ ಇಲ್ಲದೇ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ ಹೀಗಿರುವಾಗ ಯಾವರೀತಿ ರೆಸ್ಟೋರ್ ಆಗುತ್ತದೆ ಎಂಬುದನ್ನು ಸ್ವಲ್ಪ ತಿಳಿಸಬೇಕು.

ಅಧ್ಯಕ್ಷರು.—ಅವರು ಅದನ್ನು ನೋಡುತ್ತಾರೆ.

ಶ್ರೀ ಎಂ. ಸಿ. ಬಸಪ್ಪ.—ಹೇಗೆ ನೋಡುತ್ತಾರೆ ?

ಶ್ರೀ ಗೋಪಾಲ ಸಾಲೆನ್ನ.—ಕೆರೆ ವಿಚಾರ ಮಾತ್ರ ಹೇಳಿದರು. ಹನ್ನೊಂದು ನದಿ ಪ್ರವಾಹದ ಹಾವಳಿಗೆ ತುತ್ತಾಗಿ ಪ್ರತಿ ವರ್ಷವೂ ಕೂಡ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಬರಲು ಸಂಚಾರ ಸೌಕರ್ಯವಿಲ್ಲದೆ ತೊಂದರೆ ಪಡುವ ಜನರ ವಿಚಾರ ದಲ್ಲೇನು ಮಾಡುತ್ತಾರೆಂಬುದನ್ನು ತಿಳಿಸಲಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಅರ್ಕಾವತಿ ನದಿಯ ಪ್ರವಾಹದಿಂದ ತೊಂದರೆ ಗೊಳಗಾಗಿರುವ ನೆಲಮಂಗಲ ತಾಲ್ಲೂಕಿನ ಕೆರೆಗಳ ವಿಚಾರದಲ್ಲೇನು ಮಾಡುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಸಾಧ್ಯವಾದಷ್ಟು ಒಡೆದಿರುವ ಕೆರೆಗಳನ್ನು ಜೀರ್ಣೋದ್ಧಾರ ಮಾಡ ಲಾಗುವುದು.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನಲ್ಲಿ ಹಣ ಮಂಜೂರಾಗದೆ ಯಾವ ಕೆಲಸವನ್ನೂ ತೆಗೆದು ಕೊಳ್ಳಕೂಡದೆಂದು ಚೀಫ್ ಎಂಜನಿಯರು ಸರ್ಕ್ಯುಲರ್ ಕಳುಹಿಸಿರುವುದಾಗಿ ಹೇಳುತ್ತಿದ್ದಾರೆ.

ಶ್ರೀ ಆಲೂರು ಹನುಮಂತಪ್ಪ.—ಆ ತರಹ ಮಾಡುವುದಿಲ್ಲ. ಸಾಧ್ಯವಾದಷ್ಟು ಮಾಡಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ.

**Sri B. J. LINGE GOWDA** (Channapatna).—What about providing floodgates in addition to the siphon to the Kanva Reservoir ?

**Sri ALUR HANUMANTHAPPA.**—That is a suggestion for action.

ಶ್ರೀ ಎಂ. ವಿ. ಕೃಷ್ಣಪ್ಪ.–ಮಾನ್ಯ ಅಧ್ಯಕ್ಷರೆ, ಸುಮಾರು ಎರಡು ಗಂಟೆಯಿಂದ ವಿರೋಧ ಪಕ್ಷದ ನಾಯಕರಿಂದ ಪ್ರಾರಂಭವಾದ ಚರ್ಚೆಯಲ್ಲಿ ಕೆಲವರು ಭಾಗವಹಿಸಿ ಪ್ರವಾಹದ ಹಾವಳಿಯಿಂದಾಗಿರುವ ತೊಂದರೆಯನ್ನು ವಿವರವಾಗಿ ಹೇಳಿದ್ದಾರೆ. ಸಾಮಾನ್ಯವಾಗಿ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಪ್ರವಾಹ ಬರುತ್ತದೆ. ಲೋಕ ಸಭೆಯಲ್ಲೂ ಕೂಡ 2-3 ದಿವಸ ಗಳವರೆಗೆ ಉತ್ತರ ಹಿಂದೂಸ್ಥಾನದಲ್ಲುಂಟಾದ ಪ್ರವಾಹದ ಹಾವಳಿಯ ವಿಚಾರ ಚರ್ಚೆಯಾಗಿದೆ. ಮೈಸೂರು ದೇಶದಲ್ಲಿ ಕಳೆದವರ್ಷ ಕೂಡ ಬಹಳ ಅನಾಹುತವಾಯಿತು. ಈ ವರ್ಷದ ಹಾವಳಿಯನ್ನು ಕಳೆದ ವರ್ಷಕ್ಕೆ ಹೋಲಿಸಿದರೆ ಹಿಂದೆ ಆದುದರಲ್ಲಿ 1/10 ಭಾಗ ಅನಾಹುತ ಕೂಡ ಈಗ ಆಗಿಲ್ಲ. ಮುಖ್ಯವಾಗಿ ಅರ್ಕಾವತಿ ನದಿಯ ಪ್ರವಾಹ ಹೆಚ್ಚು ನಷ್ಟವನ್ನುಮಾಡಿ ಬಹಳ ದೊಡ್ಡ ಪರಿಣಾಮ ವನ್ನುಂಟುಮಾಡಿದೆ. ಒಟ್ಟಿನಲ್ಲಿ ಶ್ರೀಮಾನ್ ಹನು ಮಂತಪ್ಪನವರು ಹೇಳಿದಹಾಗೆ ಅಭಾವದಿಂದ ಬೇಸತ್ತ ಜನ ಕೂಲಿ ಕೆಲಸ ಕೇಳುತ್ತಿರುವಾಗ ದೊಡ್ಡದಾಗಿ ಮಳೆ ಬಿದ್ದುದು ಬಹಳ ಒಳ್ಳೆಯದೇ ಆಗಿದೆ. ಆದರೆ ಕೆಲವು ಪ್ರದೇಶಗಳಲ್ಲಿ ಅನರ್ಥ ಬಹಳವಾಗಿ ಆಗಿದೆ. ಈ ಪ್ರವಾಹಕ್ಕೆ ಕಾರಣಗಳನ್ನು ಕಂಡು ಹಿಡಿಯ ಬೇಕೆಂದು ಎಲ್ಲರೂ ಹೇಳುತ್ತಾರೆ. ಈ ವಿಷಯದಲ್ಲಿ ತಜ್ಞರ ಸಮಿತಿಯನ್ನು ನೇಮಿಸಿ ಮಾಸ್ಟರ್ ಪ್ಲಾನ್ ಕೂಡ ಮಾಡಬೇಕೆಂದು ದೆಹಲಿಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಈಗಾಗಲೆ ಹೇಳಿದ್ದಾರೆ. ನಾನೂ ಕೂಡ ಕೇಂದ್ರ ಸರ್ಕಾರದಲ್ಲಿ 10-11 ವರ್ಷಗಳಿದ್ದೆ. ಆಗ ರಿಲೀಫ್ ಇಲಾಖೆ ನನ್ನ ಕೈಲೇ ಇತ್ತು. ಅಲ್ಲಿ ಬೆಳಗಾ ದರೆ ನೂರು ಟೆಲಿಗ್ರಾಂಗಳು ಬರುತ್ತವೆ. ಮಳೆಯಿಲ್ಲ, ಕುಡಿಯಲು ನೀರಿಲ್ಲ ಎಂದು ಒಂದು ಕಡೆಯಿಂದ ಟೆಲಿಗ್ರಾಂ ಬಂದರೆ ಮಳೆ ಹೆಚ್ಚಾಗಿ ಆಗಿ ಅನಾಹುತ ವಾಗಿದೆಯೆಂದು ಇನ್ನೊಂದು ಕಡೆಯಿಂದ ಬರುತ್ತದೆ. ಹೀಗೆ ಅತಿವೃಷ್ಟಿ, ಅನಾವೃಷ್ಟಿ ಎರಡೂ ಈ ದೇಶದಲ್ಲಿವೆ. ಮೈಸೂರು ದೇಶದಲ್ಲಿ ಪ್ರವಾಹದ ಹಾವಳಿ ಮೊದಲು ಇರಲಿಲ್ಲ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡಗಳಲ್ಲಿ ಮಾತ್ರ ಇತ್ತು. ಈ ರೀತಿ ಮೊದಲು ಹೆಚ್ಚಾಗಿ ಬರುತ್ತಿರಲಿಲ್ಲ. ಹೋದ ವರ್ಷದಿಂದಲೇ ಪ್ರಾರಂಭ ವಾಗಿರುವುದು. ಸ್ವಾತಂತ್ರ್ಯ ಬಂದ ಮೇಲೆ ಪ್ರವಾಹ ಜಾಸ್ತಿಯಾಗುತ್ತಿದೆ ಎಂಬ ಅನುಮಾನ ಕೆಲವರಲ್ಲಿ ಮೂಡಿದೆ. ಅದು ಸರಿಯಲ್ಲ. ಪ್ರವಾಹ ಪೂರ್ವ ದಿಂದಲೂ ಬರುತ್ತಿದೆ. ಸ್ವಾತಂತ್ರ್ಯ ಬಂದಮೇಲೆ ಅನೇಕ ಭಾಗಗಳಿಂದ ಪ್ರತಿನಿಧಿಗಳು ಈ ಸಭೆಗೆ ಬಂದು ಅವರವರ ಸ್ಥಳಗಳ ವಿಚಾರಗಳನ್ನು ಹೇಳುತ್ತಿರುವುದ ರಿಂದ ಈಗ ದೊಡ್ಡದಾಗಿ ಕಾಣಿಸಬಹುದು. ಅಲ್ಲದೆ ಶ್ರೀ ರೇವಣ ಸಿದ್ದಪ್ಪನವರು 30 ವರ್ಷಗಳ ಹಿಂದೆ ಒಡೆದ ಕೆರೆಗಳ ಪಟ್ಟಿಯನ್ನು ಸಹ ಕೊಡುತ್ತಿದ್ದಾರೆ. ಸರ್ಕಾರದ ಗಮನಕ್ಕೆ ಈ ಸಭೆ ಪ್ರತಿನಿಧಿಗಳು ತರುವು ದನ್ನು ಪ್ರತಿಕೆಗಳು ಪ್ರಕಟಿಸುತ್ತಿರುವುದರಿಂದ ಎಲ್ಲರಿಗೂ ಅದು ತಿಳಿದು ಬಹಳ ಅನರ್ಥವಾಗಿರುವ ಹಾಗೆ ಭಾಸವಾಗಬಹುದು. ಯುದ್ಧವಾದಮೇಲೆ ಪ್ರವಾಹ ಹೆಚ್ಚಿರುವುದು ನಿಜ. ಇದಕ್ಕೆ ಅನೇಕ ಕಾರಣಗಳನ್ನು ಹೇಳಿದರು. ಮೊದಲನೆಯದಾಗಿ ಜನರು ಕಾಡನ್ನು ಕಡಿದು ಹೊಸದಾಗಿ ಗಿಡಗಳನ್ನು ಸರಿಯಾಗಿ ಬೆಳೆಸ ದಿರುವುದು ಎರೋಷನ್ ಆಗಿ ಮಣ್ಣು ಬಂದು ತೊಂದರೆಯಾಗುತ್ತಿರುವುದು. ಎರಡನೆಯದು ಗೋಮಾಳ ಮುಂತಾದ ಎಲ್ಲಾ ಜಮೀನೂ ಹೆಚ್ಚಾಗಿ ಸಾಗುವಳಿಗೆ ಬಂದಿರುವುದು. ಇದರಿಂದ ಮಳೆ ಬಂದಾಗ ಕೆರೆಗೆ ಹೆಚ್ಚಾಗಿ ಹೂಳು ಬಂದು ಮುಚ್ಚಿ ಹೋಗುತ್ತಿದೆ. ಏಳೆಂಟು ವರ್ಷಗಳಿಂದ ಹೀಗಾಗಿ ಅನೇಕ ಕೆರೆಗಳಿಗೆ ತೊಂದರೆಯಾಗಿದೆ. ಕೇಂದ್ರ ಸರ್ಕಾರದಲ್ಲಿದ್ದಾಗ ಮೈನರ್ ಇರಿಗೇಷನ್ ಬಾಬು ನನ್ನ ಛಾರ್ಜಿನಲ್ಲಿತ್ತು. ಇದಕ್ಕೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 40 ಕೋಟಿ ರೂಪಾಯಿ ಗಳನ್ನು ಮತ್ತು ಎರಡನೆಯ ಯೋಜನೆಯಲ್ಲಿ 100 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು ; ಮೂರ ನೆಯ ಯೋಜನೆಯಲ್ಲಿ 300 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆಂದು ಹೇಳುತ್ತಿದ್ದಾರೆ. ಈಗ ಸಣ್ಣ ಕೆರೆಗಳಿಗೆ ಪ್ರಾಮುಖ್ಯತೆಯಿದೆ. ನಮ್ಮ ದೇಶದಲ್ಲಿ ಕೆರೆಯು ದೊಡ್ಡ ಆಧಾರವಾಗಿದೆ. ಹಾಗಿರುವಾಗ ಕೆರೆ ಗಳನ್ನು ಭದ್ರಪಡಿಸಬೇಕಾದ್ದು ನಮ್ಮ ಕರ್ತವ್ಯ. ನಮ್ಮಲ್ಲಿ ಮೈನರ್ ಇರಿಗೇಷನ್ ಬಾಬಿಗೇ ಒಬ್ಬ ಚೀಫ್ ಎಂಜಿನಿಯರನ್ನು ನೇಮಿಸಿದ್ದಾರೆ. ಹಿಂದೆ ಕೆರೆಗಳ ಹೂಳನ್ನು ಪ್ರಜೆಗಳೇ ತೆಗೆಯುತ್ತಿದ್ದರು. ಈಗ ಅದನ್ನೆಲ್ಲಾ ಸರ್ಕಾರವೇ ತೆಗೆಸಬೇಕಾಗಿದೆ. 31 ನೆಯ ತಾರೀಖು ಮಳೆ ವಿಪರೀತವಾಗಿ ಬಂದುದರಿಂದ ದೊಡ್ಡಬಳ್ಳಾಪುರದ ತಾಲ್ಲೂಕಿನ ಎಂಟು ಕೆರೆಗಳೂ ಮತ್ತು ನೆಲಮಂಗಲ ತಾಲ್ಲೂಕಿನ ಎಂಟು ಕೆರೆಗಳೂ ಅಂದರೆ ಒಟ್ಟು 16 ಕೆರೆಗಳು ಒಡೆದು ಹೋಗಿ ಅವುಗಳ ನೀರೆಲ್ಲಾ ತಿಪ್ಪಗೊಂಡನಹಳ್ಳಿ ಕೆರೆಗೆ ಬಂದು ಅದು ತುಂಬಿಹೋಗಿ ತೊಂದರೆಗೀಡಾಯಿತು. ತಿಪ್ಪಗೊಂಡನಹಳ್ಳಿ ಕೆರೆಯಿಂದ ಬೆಂಗಳೂರಿಗೆಲ್ಲಾ ನೀರು ಸರಬರಾಯಿ ಆಗಬೇಕಾಗಿರುದರಿಂದ ಅದರ ನೀರನ್ನು ಏಕಾಏಕಿ ಬಿಡುವುದಕ್ಕಾಗುವುದಿಲ್ಲ. ಅಲ್ಲಿ ಸಾಕಷ್ಟು ನೀರನ್ನು ಶೇಖರಿಸಿಕೊಳ್ಳದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ಇದ್ದಕ್ಕಿದ್ದಹಾಗೆ ಹೆಚ್ಚು ಮಳೆಯು ದೆಶೆಯಿಂದ ನೀರು ಅಧಿಕವಾಗಿ ಬಂದು ತೊಂದರೆಯಾಯಿತು. ಕಣ್ವಾದಲ್ಲೂ ಹೀಗೆಯೇ

ಆಯಿತು. ಇದರಿಂದ ಆದ ತೊಂದರೆಗೆ ಇಂಜನಿಯರು ಗಳನ್ನು ಗುರಿಮಾಡುವುದು ತಪ್ಪು. ಹೋದ ವರ್ಷ ಪೂನಾದ ಬಳಿ ಕೋಸ್ಲಾಡ್ಯಾಂ ಒಡೆದಾಗಲೂ ಹೀಗೆಯೇ ತೊಂದರೆಯಾಯಿತು. ಇಂಜನಿಯರುಗಳು ಮಳೆ ಬರುವು ದನ್ನು ನಿರೀಕ್ಷಿಸಿ ಕ್ರಮ ಕೈಕೊಳ್ಳುವುದು ಕಷ್ಟ. ವಿಚಾರ ತಿಳಿಯದ ಆರೋಪ ಮಾಡಬಾರದು. ಅರ್ಕಾವತಿ ನದಿ ದಡದಲ್ಲಿ ಹೋಗಿ ನೋಡಿದರೆ ಪರಿಸ್ಥಿತಿ ಗೊತ್ತಾಗು ವುದು. ಅಲ್ಲಿ ಹೋಗಿ ನೊಡುವುದು ಅಸಾಧ್ಯವಾಗಿದೆ. ನಿನ್ನೆಯ ದಿವಸ ನಾನು ಕೆಲವರ ಸಂಗಡ ಅಲ್ಲಿಗೆ ಹೋಗಿ ಕಾನಕಾನ ಹಳ್ಳಿಯವರೆಗೆ ಸುಮಾರು 43 ಮೈಲಿಗಳ ಪ್ರವಾಸಮಾಡಿದೆ.

ಎಷ್ಟು ಅನರ್ಥವಾಗಿದೆಯೆಂದರೆ, ಜಲ ಪ್ರಳಯ ವಾದ ಮಾರನೆಯ ದಿನ ಹೇಗಿರುತ್ತದೆಯೋ ಹಾಗಿದೆ. ಅಲ್ಲಿ ಎಲ್ಲವೂ ಕೊಚ್ಚಿಕೊಂಡು ಹೋಗಿದೆ. ಮೂವತ್ತು ನಲವತ್ತು ಮೈಲಿ ದೂರ, ಅರ್ಧ ಎಕರೆ, ಒಂದೆಕರೆ ಜಮೀನಿರುವ ರೈತರ ಜಮೀನೆಲ್ಲವೂ ಕೊಚ್ಚಿ ಹೋಗಿದೆ. ಅದರಲ್ಲಿ ಹಾಕಿದ್ದ ರಾಗಿ, ಮಲ್‌ಬರಿ, ಕಬ್ಬು ಇತ್ಯಾದಿ ಬೆಳೆಗಳೆಲ್ಲವೂ ಕೊಚ್ಚಿಕೊಂಡು ಹೋಗಿವೆ. ಹೀಗಿರು ವಾಗ ನಷ್ಟ ಎಷ್ಟೆಂದು ನಿರ್ದಿಷ್ಟವಾಗಿ ತಿಳಿದುಕೊಳ್ಳು ವುದು ಕಷ್ಟ. ಒಂದು ಕೋಟಿ ರೂಪಾಯಿ ವರೆಗೆ ನಷ್ಟ ವಾಗಿದೆಯೆಂದು ಶ್ರೀಮಾನ್ ಮಾದಯ್ಯ ಗೌಡರು ಹೇಳಿದರು, ಹದಿನೈದು ಇಪ್ಪತ್ತು ಲಕ್ಷವೆಂದು ಶ್ರೀಮಾನ್ ಲಿಂಗೇಗೌಡರು ಹೇಳಿದರು. ಮಾರನೆಯ ದಿನವೇ ರೆವಿನ್ಯೂ ಇನ್ಸ್‌ಪೆಕ್ಟರನ್ನು ಹಾಕಿ ಲೆಕ್ಕ ಹಾಕಿಸಲಾಗಿ, ಎರಡು ಸಾವಿರ ಎಕರೆ ಜಮೀನು ನಷ್ಟವಾಗಿದೆ, ಹದಿನೈದು ಲಕ್ಷ ರೂಪಾಯಿನವರೆಗೆ ನಷ್ಟವಾಗಿದೆ ಎಂದು ಅಂದಾಜಾಗಿ ಬಂದಿದೆ. ಅಧಿಕಾರಿಗಳು ಸಾಮಾನ್ಯವಾಗಿ under-estimate ಮಾಡುತ್ತಾರೆ. ರೈತರಿಗೆ ಯಾವಾಗಲೂ ಸುಳ್ಳು ಹೇಳುವುದು ಅಭ್ಯಾಸವಾಗಿದೆ. ಅವರ ಜಮೀನಿನಲ್ಲಿ ಹೆಚ್ಚು ಬೆಳೆ ಯಾದರೂ under-estimate ಮಾಡಿ ಹೇಳುತ್ತಾರೆ. ಸರ್ಕಾರಿ ಅಧಿಕಾರಿಗಳು ಹೇಳುವುದನ್ನು ಪೂರ್ಣ ವಾಗಿ ನಂಬುವುದಕ್ಕಾಗುವುದಿಲ್ಲ. ನಾನು ರೈತನ ಮಗ, ಹತ್ತಾರು ವರ್ಷ ಕೆಲಸ ಮಾಡಿದ ಅನುಭವ ದಿಂದ ಹೇಳುತ್ತಿದ್ದೇನೆ.

ಶ್ರೀ ಸಿ. ಆರ್. ರಂಗೇಗೌಡ.—ರೈತರು ಸುಳ್ಳು ಹೇಳುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ನಷ್ಟವಾಗಿರುವುದು ಒಂದು ಕೋಟಿ ಎನ್ನುವುದೂ ತಪ್ಪು, 15 ಲಕ್ಷ ಎಂದು ಸರ್ಕಾರಿ ಅಧಿಕಾರಿಗಳು ಅಂದಾಜು ಮಾಡಿರುವುದನ್ನೂ ನಂಬುವುದಕ್ಕಾಗುವುದಿಲ್ಲ. ಅಲ್ಲಿ ಹೋಗಿ ನೋಡಿ ದವರು ಅನುಭವದಿಂದ ಹೇಳಬಹುದು. ಇಪ್ಪತ್ತೈದು ಮೂವತ್ತು ಲಕ್ಷ ರೂಪಾಯಿನಷ್ಟು ನಷ್ಟವಾಗಿರ ಬಹುದು. ಇದರಲ್ಲಿ ತಮ್ಮ ಸರ್ವಸ್ವವನ್ನು ಕಳೆದು ಕೊಂಡ ರೈತರೂ ಇರುತ್ತಾರೆ. ಅರ್ಕಾವತಿಯ ಆಶ್ರಯದಲ್ಲಿರುವ ರೈತರು ಬೇರೆಯವರನ್ನು ಕೈ ಒಡ್ಡಿ ಕೇಳುವವರಲ್ಲ; ಸಾಮಾನ್ಯವಾಗಿ ಅವರು ಕೊಡು ವವರು. ಹೀಗಿರುವಾಗ ಪ್ರಕೃತಿಯ ಕೋಪದಿಂದ ನಷ್ಟ ವಾದರೆ ಅದನ್ನು ಯಾರಿಂದಲೂ ತುಂಬುವುದಕ್ಕಾಗು ವುದಿಲ್ಲ. ಆದರೂ ಸರ್ಕಾರ ಮತ್ತು ಪ್ರಜೆಗಳು ಅವ ರಿಂದೆಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡ ಬೇಕು. ಭೂಮಿಯ ಮೇಲಿನ ಮೆಕ್ಕಲು ಸಾರವನ್ನು ಕೊಚ್ಚಿಕೊಂಡು ಹೋಗಿದೆ ಪ್ರವಾಹ. ಅದನ್ನು ಸರಿ ಪಡಿಸಲು ಬಹಳ ದಿವಸ ಹಿಡಿಯುತ್ತದೆ. ಸರ್ಕಾರ ಸಹಾಯ ಮಾಡುವುದಕ್ಕೆ ಸಿದ್ಧ. ಬೇರೆ ಕಡೆ ಪ್ರವಾಹ ವೆಂದರೆ ಮನೆಗಳು ಮುಳುಗಿ, ಊಟ ಮಾಡುವ ಧಾನ್ಯಗಳು ಕೊಚ್ಚಿಕೊಂಡು ಹೋಗಿ ನಷ್ಟವಾಗುತ್ತದೆ. ಆದರೆ ಇಲ್ಲಿ ಆ ರೀತಿ ಆಗಿಲ್ಲ. ನೀರು ಹಳ್ಳದಲ್ಲಿ ಹೋಗಿದೆ. ರಾಮನಗರದಲ್ಲಿ ಒತ್ತುವರಿ ಮಾಡಿ ಕೊಂಡು ನದಿಯ ಪಕ್ಕದಲ್ಲಿ ಮನೆಗಳನ್ನು ಕಟ್ಟಿ ಕೊಂಡಿದ್ದಾರೆ, ಸುಮಾರು 20-30 ಮನೆಗಳಿಗೆ ನಷ್ಟ ವಾಗಿದೆ. ಅವರ ಸಹಾಯಕ್ಕಾಗಿ ತಕ್ಷಣ ಎರಡು ಸಾವಿರ ರೂಪಾಯಿಗಳಷ್ಟು ಹಣವನ್ನು ಜಿಲ್ಲಾಧಿಕಾರಿ ಗಳಿಗೆ ಕೊಟ್ಟಿದ್ದೇವೆ. ರೆವಿನ್ಯೂ ಮಂತ್ರಿ ಸುಮ್ಮನೆ ಜನರ ಹಣವನ್ನು ತೆಗೆದುಕೊಂಡು ಹೋಗಿ ಎಲ್ಲರಿಗೂ ಹಂಚಿಕೊಡುವುದಕ್ಕಾಗುವುದಿಲ್ಲ. ಯಾರಿಗೆ ನಷ್ಟ ವಾಗಿದೆಯೋ ಅವರಿಗೆ ಮಾತ್ರ ಕೊಡಬೇಕು. ಜಮೀನು ಯಾರದು, ಯಾರಿಗೆ ನಷ್ಟವಾಗಿದೆ ಎಂಬುದನ್ನು ವಿಚಾರ ಮಾಡಿಕೊಡಬೇಕು. ಇದರಲ್ಲಿ ಸ್ವಲ್ಪ ತಡ ವಾಗುತ್ತದೆ. ಆದಗೂ ಕೂಡ ಆದಷ್ಟು ಜಾಗ್ರತೆ ಮಾಡಿದ್ದಾರೆ. ಗೌರಿ ಗಣೇಶನ ಹಬ್ಬಗಳು ಬಂದರೂ ಕೂಡ ವಿರಾಮವಿಲ್ಲದೆ ಅಧಿಕಾರಿಗಳು ಕೆಲಸ ಮಾಡಿ ದ್ದಾರೆ. ಎರಡೂವರೆ ಲಕ್ಷ ರೂಪಾಯಿ ಬಡ್ಡಿರಹಿತ ಸಾಲವನ್ನು ಮಂಜೂರು ಮಾಡಿದ್ದಾರೆ. ರಾಮನಗರ ತಾಲ್ಲೂಕು, ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿ, ಚಿತ್ರದುರ್ಗ, ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿ ಕೆಲವು ಕಟ್ಟೆ, ಕೆರೆಗಳು, ಒಡೆದು ನಷ್ಟವಾಗಿರುವುದಕ್ಕೆ ಪರಿಹಾರ ನೀಡಲು ಎರಡೂವರೆ ಲಕ್ಷ ರೂಪಾಯಿ interest free loan ಸರ್ಕಾರದಿಂದ ಕೊಡಲಾಗಿದೆ. ಇದರ ಜೊತೆಗೆ 50 ಸಾವಿರ ರೂಪಾಯಿ ಪುಕ್ಕಟೆಯಾಗಿ, ಎಂದರೆ gratuitous relief ಕೊಡುವುದಕ್ಕಾಗಿ ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ. ಇದೇನೂ ಸಾಲವಲ್ಲ, ತೊಂದರೆಗೊಳಗಾಗಿರುವ ಜನ ರಿಗೆ ಪುಕ್ಕಟೆಯಾಗಿ ಕೊಡುವುದು. ಇಷ್ಟೆಲ್ಲ ಪರಿಹಾರ ಕೊಡಲು ತೀರ್ಮಾನ ಮಾಡಿದ್ದೇವೆ. ಎಕರೆಗೆ 200 ರೂಪಾಯಿ ಪ್ರಕಾರ ಎಷ್ಟು ಸಾಲವನ್ನಾದರೂ ಕೊಡಲು ಸರ್ಕಾರ ಸಿದ್ಧ. ಹಾಳಾಗಿರುವ ಭೂಮಿ ಯನ್ನು ಪೂರ್ವಸ್ಥಿತಿಗೆ ತರಬೇಕಾದರೆ ಬಹಳ ಕಷ್ಟ. ಕೊಚ್ಚಿಕೊಂಡು ಹೋಗಿರುವುದನ್ನು ತುಂಬಲು ಮಣ್ಣನ್ನು ಬೇರೆ ಕಡೆಯಿಂದ ತರಬೇಕು, ಇದಕ್ಕಾಗಿ Land Improvement Loan ಕೊಡಲು ಸರ್ಕಾರ ದವರು ಸಿದ್ಧವಾಗಿದ್ದಾರೆ. ಆ ಪ್ರದೇಶದಲ್ಲಿ ನಾನೇ ಹೋಗಿ ನೋಡಿದ್ದೇನೆ. ಬಾವಿಗಳಿಗೆ ವಿದ್ಯುಚ್ಛಕ್ತಿ ಪಂಪ್ ಹಾಕಿದ್ದರು. ಅವು ನೀರಿನಲ್ಲಿ ಮುಳುಗಿ ಕಾಯಿಲ್ ಸುಟ್ಟು ಹೋಗಿದೆ. ವಿದ್ಯುಚ್ಛಕ್ತಿ ಪಂಪ್ ಹೌಸ್‌ಗಳು ಬಿದ್ದು ಹೋಗಿವೆ. ಇದಕ್ಕಾಗಿ 200-250 ರೂಪಾಯಿ ಕೊಡಬೇಕು.

ಇಬ್ಬರು ಸತ್ತಿದ್ದಾರೆಂದು ಗೊತ್ತಾಗಿದೆ. ಒಬ್ಬ ರಂತೂ ಸತ್ತಿದ್ದಾರೆ. ಪಂಪನ್ನು ತೆಗೆದುಕೊಂಡು ಬರುವುದಕ್ಕೆ ಹೋಗಿ ಮರದಿಂದ ಬಿದ್ದು ಸತ್ತಿದ್ದಾರೆ; ಲಿಂಗಪ್ಪ ಎಂಬುವರು. ಇನ್ನೊಬ್ಬರು ಬೋರಮ್ಮ ಎಂಬ ಹೆಂಗಸು ಹೋದವಳು ವಾಪಸು ಬಂದಿಲ್ಲ ವೆಂದು ಹೇಳಿದರು. ಖಚಿತವಾಗಿ ಗೊತ್ತಾಗಬೇಕಾ ದರೆ ಪೋಲೀಸ್ ರಿಪೋರ್ಟು ಬರಬೇಕು. ಆಕೆಯ ಗಂಡನನ್ನು ಕೇಳಿದಾಗ, ಹೋದವಳು ಮನೆಗೆ ಬಂದಿಲ್ಲವೆಂದು ಹೇಳಿದ. ಆಕೆ ನದಿಯಲ್ಲಿ ಕೊಚ್ಚಿ ಕೊಂಡು ಹೋದಳೆಂದು ಜನರು ಹೇಳುತ್ತಾರೆ. ಈ ಇಬ್ಬರ ಮನೆಯವರಿಗೂ ಸಾವಿರ ರೂಪಾಯಿನಂತೆ ಪರಿ ಹಾರ ಕೊಡಬೇಕು. ಪಂಪ್ ಹೌಸ್‌ಗೆ 200-250 ರೂಪಾಯಿ ಉಚಿತವಾಗಿ ಕೊಡಬೇಕೆಂದು ಮಾಡಿ ದ್ದೇವೆ. ಸರ್ಕಾರ ಈಗಾಗಲೇ 50 ಸಾವಿರ ರೂಪಾಯಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಕೊಡಲು ಆಜ್ಞೆ ಮಾಡಿದ್ದಾರೆ. ಇದರ ಮೇಲೆ ಇನ್ನೂ ಹೆಚ್ಚು ಕೊಡಬೇಕೆಂದರೆ ಕೊಡುವುದಕ್ಕೆ ಸಿದ್ಧ. ಆದರೆ ಸಾರ್ವಜನಿಕ ಹಣವನ್ನು ಸುಮ್ಮನೆ ಹಂಚುವುದಕ್ಕೆ ಸಾಧ್ಯವಿಲ್ಲ. ಒಟ್ಟಿನಲ್ಲಿ ಆಗಿರುವ ನಷ್ಟವನ್ನು ಪೂರ್ಣವಾಗಿ ತುಂಬಲು ಸಾಧ್ಯವಿಲ್ಲ. ಎಷ್ಟು ಸಾಧ್ಯವೋ ಅಷ್ಟನ್ನು ಮಾಡಲು ಸರ್ಕಾರದವರು ಸಿದ್ಧರಾಗಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮುಖ್ಯ ಮಂತ್ರಿಗಳ ನಿಧಿಯಿಂದ ಕೊಟ್ಟರೆಂದು ಹೇಳಿದಿರಿ, ಅವರು ಜನರಿಂದ ವಸೂಲು ಮಾಡಿಕೊಟ್ಟರೋ ಅಥವಾ ಸ್ವಂತವಾಗಿ ಕೊಟ್ಟರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮುಖ್ಯ ಮಂತ್ರಿಗಳಿಗೆ ಸ್ವಂತ ಎನ್ನುವುದಿಲ್ಲ.

**Sri K. LAKKAPPA.**—The Minister will kindly yield for a moment. ನಷ್ಟವನ್ನು ಪೂರ್ತಿ ಭರ್ತಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಆ, ನಷ್ಟವನ್ನು ಯಾರು ಕೊಡುತ್ತಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ದೇವರು ಮಾಡಿರುವ ನಷ್ಟವನ್ನು ಮನುಷ್ಯ ಮಾತ್ರದವರು ತುಂಬುವುದಕ್ಕಾಗುವುದಿಲ್ಲವೆಂದು ಹೇಳಿದೆ. ಎಂದ ಮಾತ್ರಕ್ಕೇ ಸರ್ಕಾರ ಸಹಾಯ ಮಾಡಿಲ್ಲವೆಂದು ಭಾವಿಸಬಾರದು. ತುಮಕೂರು ಮತ್ತು ಹಾಸನದಲ್ಲಿ ಕೆಲವು ಕೆರೆಗಳು ಒಡೆದು ಹೋಗಿ ಮೂರು ನಾಲ್ಕು ದಿವಸಗಳಾದರೂ ಅಮಲ್ದಾರರಿಗೆ ಗೊತ್ತಿಲ್ಲವೆಂದು ಹೇಳಿದರು. ಹಾಗಿದ್ದರೆ ತಪ್ಪು, ಅವರು ಯಾರೇ ಆಗಿದ್ದರೂ he is unfit to be an Amildar......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಿದ್ದರೆ ಅವರನ್ನು ಅಸಿಸ್ಟೆಂಟ್ ಕಮೀಷನರ್ ಆಗಿ ಪ್ರಮೋಟ್ ಮಾಡಿಬಿಡಿ (ನಗು !)

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀಮಾನ್ ಮುಕ್ಕಣ್ಣಪ್ಪನವರು ಮಂತ್ರಿಗಳಾಗಿ ಬಂದರೆ ಹಾಗೆ ಮಾಡಬಹುದು (ನಗು !)

ಐದಾರು ಕೆರೆಗಳು ಕಿತ್ತು ಹೋಗಿವೆಯೆಂದು ಹೇಳಿದ ಮೇಲೂ ಅಮಲ್ದಾರರು ನೋಡದೆ ಸುಮ್ಮನಿದ್ದರೆ ಅದು ತುಂಬಾ ತಪ್ಪು. ಅದನ್ನು ವಿಚಾರ ಮಾಡುತ್ತೇವೆ. ಎಲ್ಲಿಯೋ ಹೋಗಿದ್ದರೋ ಏನೋ, ಇನ್ನೇನು ಅನಾನುಕೂಲವಿತ್ತೋ ವಿಚಾರಿಸುತ್ತೇವೆ. ಸ್ಥಳದಲ್ಲೇ ಇದ್ದು ಕೂಡ ಕೆರೆಗಳು ಕಿತ್ತು ಹೋಗಿರುವುದು ಗೊತ್ತಿಲ್ಲವೆಂದರೆ, ಅದು ತಪ್ಪು. ಅಲ್ಲೇ ಇದ್ದು 4 ದಿನದವರೆಗೂ ಗೊತ್ತಿಲ್ಲವೆಂದು ಹೇಳಿದರೆ, ತನ್ನ ತಾಲ್ಲೂಕಿನಲ್ಲಿ ನಡೆದಿರುವುದೇ ಅವರಿಗೆ ತಿಳಿವಳಿಕೆಗೆ ಬಂದಿಲ್ಲವೆಂದರೆ, ಅಂಥ ಅಮಲ್ದಾರರು ಯಾರೇ ಆಗಿರಲಿ, he is unfit to be an Amildar.

5-00 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರಿಗೆ ಪ್ರಮೋಷನ್ ಕೊಟ್ಟುಬಿಡಿ, ಅಸಿಸ್ಟೆಂಟ್ ಕಮೀಷನರ್ ಆಗಿ.

ಶ್ರೀ ಎಂ. ವಿ. ಕೃಷ್ಣಪ್ಪ.—ನೀವು ಅಧಿಕಾರಕ್ಕೆ ಬಂದಾಗ ಏನಾದರೂ ಹಾಗಾಗಬಹುದು.

ಈ ರೀತಿಯಾಗಿ ಸರ್ಕಾರದವರು ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಶ್ರೀಮಾನ್ ಲಿಂಗೇಗೌಡರೂ, ಮಾದೇಗೌಡರೂ ಪೂರ್ತಾ ಆ ಕಾಲದಲ್ಲಿ ಅಲ್ಲೇ ಇದ್ದು ಪ್ರವಾಸ ಮಾಡಿ ಬಂದಿದ್ದಾರೆ. ಮಾರನೆಯ ದಿವಸವೂ ಕೂಡ ಅವರು ಅಲ್ಲೇ ಇದ್ದರು. ಮಾರನೆಯ ದಿವಸವೂ ಕೂಡ ನನಗೆ ಅಲ್ಲಿಂದ ಟೆಲಿಫೋನ್ ಸುದ್ದಿ ಬರುತ್ತಿತ್ತು. ಶ್ರೀಮಾನ್ ರಂಗೇಗೌಡರೂ ಸಹ, ಅವರು ಆ ಊರಿನವರಲ್ಲದಿದ್ದರೂ ಅಲ್ಲೇ ಇದ್ದರು. ಲಿಂಗೇಗೌಡರೂ, ಮಾದೇಗೌಡರೂ ಅವರೂ ಎಲ್ಲರೂ ಈ ಸಂದರ್ಭದಲ್ಲಿ ಬಹಳ ಕೆಲಸ ಮಾಡಿದ್ದಾರೆ. ಸರ್ಕಾರದವರು ಈ ಎಲ್ಲ ಸಹಾಯ ಮಾಡಿರುವುದರ ಜೊತೆಗೆ ಬಾವಿಗಳಿಗೆ ....

ಶ್ರೀ ಸಿ. ಆರ್. ರಂಗೇಗೌಡ.—ಆ ಭಾಗದಲ್ಲಿ ಕಣಜಗಳಲ್ಲಿಟ್ಟಿದ್ದ ನೂರಾರು ಪಲ್ಲ ದವಸವೆಲ್ಲಾ ನೆನೆದು ಹೋಗಿದೆ ಯಲ್ಲಾ ಅದಕ್ಕೇನು ಮಾಡುತ್ತೀರಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ಕೆಲವು ಜನರು ನದಿಯ ದಡದಲ್ಲಿಯೇ ಬಂದು ಬಾವಿ ಮಾಡಿಕೊಂಡು ಪಂಪುಗಳನ್ನು ಹಾಕಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಈಗ ಸರ್ಕಾರದವರು ಸಧ್ಯದಲ್ಲೇ ಒಂದು ಸ್ಪೆಷಲ್ ಇರಿಗೇಷನ್ ಸ್ಕೀಂ ಪ್ರಕಾರ 10,000 ಬಾವಿಗಳನ್ನು ತೋಡಿಸಬೇಕೆಂದಿದ್ದಾರೆ. ಆ ಯೋಜನೆಯ ಕೆಳಗೆ ಈ ಪ್ರದೇಶವನ್ನು ಸೇರಿಸಿಕೊಂಡು ಈ ಭಾಗಕ್ಕೆ ಹೆಚ್ಚು ಬಾವಿಗಳನ್ನು ಕೊಟ್ಟು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಪ್ರವಾಹದ ಹಾವಳಿ ಜಾಸ್ತಿಯಾಗಿದೆಯೆಂದು ಅನೇಕ ಸದಸ್ಯರು ಹೇಳಿದರು. ನನಗೆ ಈ ವಿಷಯವನ್ನು ಹೇಳಲಿಕ್ಕೆ ಅವಕಾಶ ಕೊಟ್ಟಿದ್ದರೆ ಇನ್ನೂ ಚೆನ್ನಾಗಿ ಹೇಳುತ್ತಿದ್ದೆ. ಮಾನ್ಯ ಅಧ್ಯಕ್ಷರು ಅವಕಾಶ ಕೊಡಲಿಲ್ಲ.

---

## MYSORE HEALTH CESS BILL, 1962

*Motion to extend the time-limit.*

**Mr. SPEAKER.**—We have spent all the time that has been given except 20 minutes. Within that time there has to be a reply by the Hon'ble Minister and we have to consider 15 amendments. I propose to exercise my power and extend the discussion till 6 P.M., that is extending the time by 40 minutes. I suppose by that time the Hon'ble Minister would be able to complete. The Hon'ble Minister will now reply and then I will put the question.

**Sri ANNA RAO GANAMUKHI** (Afzalpur).—Yesterday I wanted to speak on this Bill. Five or ten minutes may be given to offer our remarks on the Bill.

**Mr. SPEAKER.**—All right.

†**Sri ANNA RAO GANAMUKHI.**—Mr. Speaker, Sir, I want to offer a few remarks upon this Health Cess Bill. Cess is of a local nature and even the